# ಸಾವಯವ ಕೃಷಿ - ಒಂದು ವಿಶ್ಲೇಷಣೆ

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವ ಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ: ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂಧಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾ ಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ

ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ: ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರುತಿ ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. 'ಸಾವಯವ ಕೃಷಿ: ಒಂದು ವಿಶ್ಲೇಷಣೆ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದು ಕೊಟ್ಟಿರುವ ಶ್ರೀ ತಿಪ್ಪೇಸ್ವಾಮಿ ಈ. ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗ ಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನ ಮೂರ್ತಿ ಮತ್ತು ಕೆ.ಎಲ್. ರಾಜಶೇಖರ್ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**

ಕುಲಪತಿ

# ಸಾವಯವ ಕೃಷಿ ಒಂದು ವಿಶ್ಲೇಷಣೆ (1)

ನಮ್ಮ ನಾಗರೀಕತೆ ಕೃಷಿಯೊಂದಿಗೆ ಆರಂಭವಾಗಿದೆ. ಮನುಷ್ಯನು ಕಾಡಿನಲ್ಲಿ ಒಂಟಿ ಜೀವನ ನಡೆಸುವುದನ್ನು ಬಿಟ್ಟು ಗುಂಪು ಗುಂಪಾಗಿ ವಾಸಿಸಲು ಪ್ರಾರಂಭಿಸಿದ ಮೇಲೆ ತನ್ನ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳಲು ಆಹಾರಧಾನ್ಯಗಳನ್ನು ತಾನೇ ಬೆಳೆದು ಕೊಳ್ಳಲು ಪ್ರಾರಂಭಿಸಿದನು. ಅಂದಿನಿಂದ ಇಂದಿನವರೆಗೆ ಕೃಷಿಯೊಂದಿಗೆ ಅನೇಕ ಬದಲಾವಣೆಗಳು ಉಂಟಾಗಿವೆ. ನಮ್ಮ ಸಮಾಜ ಅತ್ಯಂತ ವೈಜ್ಞಾನಿಕವಾಗಿ ಬೆಳೆಯುತ್ತಿದೆ. ಆದಾಗ್ಯೂ ಕೃಷಿಯನ್ನು ಬಿಟ್ಟು ದೂರ ಉಳಿಯಲು ಸಾಧ್ಯವಿಲ್ಲ. ಒಂದು ವೇಳೆ ನಾವು ಕೃಷಿಯಿಂದ ದೂರ ಉಳಿದರೆ ಆದ್ದರಿಂದ ಸಮಾಜದಲ್ಲಿ ಆಹಾರದ ಕೊರತೆ, ಅಪೌಷ್ಟಿಕತೆ, ಹಸಿವು ಇತ್ಯಾದಿ ಸಮಸ್ಯೆಗಳಿಂದ ನಾಗರೀಕ ಸಮಾಜವು ಹಲವಾರು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಅಲ್ಲದೆ ಕೃಷಿಯೊಂದಿಗೆ ನಮ್ಮ ಇತಿಹಾಸ, ಸಂಸ್ಕೃತಿ ಮತ್ತು ಸಮುದಾಯದ ಮೌಲ್ಯಗಳು ಸಂಮ್ಮಿಳಿತವಾಗಿವೆ. ಮನುಷ್ಯನು ಹೇಗೆ ಭೂಮಿಯನ್ನು ಉಳುಮೆ ಮಾಡುತ್ತಾನೆ, ಜಲ ಸಸ್ಯವರ್ಗ ಮತ್ತು ಪ್ರಾಣಿಗಳನ್ನು ವೈಜ್ಞಾನಿಕವಾಗಿ ಬಳಸಿಕೊಂಡು ಉತ್ಪಾದನೆ ಮಾಡಿ ಅದನ್ನು ಹೇಗೆ ವಿತರಿಸುತ್ತಾನೆ ಎಂಬುದನ್ನು ಒಳಗೊಂಡಿರುತ್ತದೆ. ಆದ್ದರಿಂದ ಭೂಮಿಯನ್ನು ಅತ್ಯಂತ ಸಮರ್ಪಕವಾಗಿ ವಿವಿಧ ಉದ್ದೇಶಗಳಿಗೆ ಹಂಚಿಕೊಂಡು, ಯಾವುದೇ ರೀತಿಯಾಗಿ ಪರಿಸರಕ್ಕೆ ಹಾನಿಯನ್ನುಂಟು ಮಾಡದೇ ನಿರ್ವಹಿಸುವಂತಹ ಒಂದು ಉದ್ಯಮವಾಗಿದೆ.

ಭಾರತ ಒಂದು ಅಭಿವೃದ್ಧಿಶೀಲ ರಾಷ್ಟ್ರವಾಗಿದ್ದು, ಕೃಷಿ ಬಹಳ ಜನರ ಮೂಲಭೂತ ವೃತ್ತಿಯಾಗಿರುತ್ತದೆ. ನಮ್ಮ ಆರ್ಥಿಕತೆಯನ್ನು ಕೃಷಿ ಆಧಾರಿತ ಆರ್ಥಿಕತೆ ಎಂದು ನಾವು ಆಗಾಗ ಬಿಂಬಿಸುತ್ತೇವೆ. ಕೃಷಿ ಕ್ಷೇತ್ರವು ೬೦ ಕೋಟಿಗಿಂತ ಅಧಿಕ ಜನರಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉದ್ಯೋಗ ನೀಡುವುದಲ್ಲದೆ, ವಿವಿಧ ರೀತಿಯ ಸಂಪನ್ಮೂಲಗಳಿಗೂ ಉದ್ಯೋಗ ಒದಗಿಸುವುದರಲ್ಲಿ ಇತರ ಕ್ಷೇತ್ರಗಳಿಗಿಂತ ಮುಂಚೂಣಿಯಲ್ಲಿದೆ. ಏಕೆಂದರೆ ಕೃಷಿ ಕ್ಷೇತ್ರವು ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸರಕುಗಳನ್ನು ಪೂರೈಸುತ್ತದೆ. ಅದರೊಂದಿಗೆ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು ವಿಸ್ತರಿಸಲು ಕೂಡ ನೆರವಾಗುತ್ತದೆ. ಆದ್ದರಿಂದ ಕೃಷಿ ಸಮೃದ್ಧವಾಗಿ ಬೆಳವಣಿಗೆ ಹೊಂದಿದರೆ ದೇಶವು ಕೂಡ ಸಮೃದ್ಧವಾಗಿ ಬೆಳೆಯುತ್ತದೆ. ಹೀಗೆ ಕೃಷಿಯಲ್ಲಿ ಬೆಳವಣಿಗೆಯಾದರೆ, ದೇಶದ ರಫ್ತು ವಹಿವಾಟು ವಿಸ್ತರಿಸುವುದಲ್ಲದೆ, ಅದು ಹಲವು ಪ್ರಯೋಜನಗಳನ್ನು ದೊರೆಕಿಸಿಕೊಡುತ್ತದೆ. ಆದರೆ ಪ್ರಸ್ತುತ ದಿನಗಳಲ್ಲಿ ಕೃಷಿ ಕ್ಷೇತ್ರದ ಮಹತ್ವ ಬಹಳ ಕಡಿಮೆಯಾಗುತ್ತಿರುವುದು. ಅದು

ನಮ್ಮ ರಾಷ್ಟ್ರೀಯ ಆದಾಯಕ್ಕೆ ಸಲ್ಲಿಸುತ್ತಿರುವ ವಂತಿಕೆಯಲ್ಲಿನ ಇಳಿಕೆ ತೋರಿಸಿಕೊಡುತ್ತದೆ. ಕೃಷಿ ಕ್ಷೇತ್ರವು ನಮ್ಮ ಒಟ್ಟು ಸ್ವದೇಶಿ ಉತ್ಪನ್ನಕ್ಕೆ ನೀಡುತ್ತಿದ್ದ ಕೊಡುಗೆ ಶೇ. ೬೧. ರಿಂದ ಶೆ. ೧೭.೦ಲಕ್ಕೆ ಕುಸಿದಿದೆ.

ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ನಮ್ಮ ದೇಶವು ಶೆ. ೧೭.೮ ರಷ್ಟನ್ನು ಹೊಂದಿದೆ. ಆದರೆ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ನಮ್ಮ ಪಾಲು ಶೆ.೪.೨ ಆಗಿದ್ದು ಪ್ರತಿಯೊಬ್ಬ ವ್ಯಕ್ತಿಗೆ ದೊರಕುವ ಸಂಪನ್ಮೂಲಗಳ ಪ್ರಮಾಣವು ೪ ರಿಂದ ೫ ಪಟ್ಟು ವಿಶ್ವದ ಸರಾಸರಿಗಿಂತ ಕಡಿಮೆ ಇರುವುದು ಕಂಡು ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಜನಸಂಖ್ಯೆ ನಿರಂತರ ಹೆಚ್ಚಳದಿಂದಾಗಿ ಕೃಷಿ ಭೂಮಿಯ ಮೇಲಿನ ಒತ್ತಡ ಅಧಿಕವಾಗುತ್ತಿದೆ. ಭೂ ಹಿಡುವಳಿಗಳೂ ಅತ್ಯಂತ ಚಿಕ್ಕ ಹಾಗೂ ಚದುರಿದ ಹಿಡುವಳಿಗಳಾಗಿದ್ದು ಮತ್ತು ಅದರಲ್ಲಿ ನಿರತರಾದಂತಹ ರೈತರು ಕೂಡ ಸಾಕಷ್ಟು ಸಂಕಷ್ಟಗಳಿಗೆ ಗುರಿಯಾಗಿರುವುದು ಪ್ರಸ್ತುತ ದಿನಗಳಲ್ಲಿ ತಿಳಿಯುತ್ತದೆ. ಹೀಗೆ ಪ್ರಥಮ ಹಂತದಲ್ಲಿ ಪೀಠಿಕೆಯನ್ನು ಎರಡನೇ ಹಂತದಲ್ಲಿ ರಸಾಯನಿಕ ಕೃಷಿಯ ಬೆಳವಣಿಗೆ ಮತ್ತು ಅದರ ಅಪಾಯಗಳು, ಮೂರನೇ ಹಂತದಲ್ಲಿ ರಸಾಯನಿಕ ಕೃಷಿಗೆ ಪರ್ಯಾಯವಾಗಿ ಬೆಳೆದು ಬಂದ ಸಾವಯವ ಕೃಷಿ ಮತ್ತು ಅದರ ಪ್ರಯೋಜನಗಳು, ಹಾಗೂ ಅಂತಿಮವಾಗಿ ಉಪಸಂಹಾರವನ್ನು ಈ ಒಂದು ಲೇಖನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ರಾಸಾಯನಿಕ ಕೃಷಿ (Inorganic Farming)**

ರಾಸಾಯನಿಕ ಕೃಷಿ ಇತ್ತೀಚಿನ ದಿನಗಳಲ್ಲಿ ಪ್ರಬುದ್ಧಮಾನಕ್ಕೆ ಬಂದಂತಹ ಕೃಷಿ ಪದ್ಧತಿಯಾಗಿದೆ. ಇದನ್ನು ಸಾಂಪ್ರದಾಯಿಕ ಕೃಷಿ (Converntional Farming), ಅಸಾವಯವ ಬೇಸಾಯ (Non Organic or Inorganic Farming) ಹಸಿರು ಕ್ರಾಂತಿ (Green Revolution Strategy), ರಾಸಾಯನಿಕ ಬೇಸಾಯ (Chemical Farming) ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಿದೆ.

೧೯ನೇ ಶತಮಾನಕ್ಕಿಂತ ಮೊದಲು ಸಾವಯವ ಗೊಬ್ಬರ ಮಾನವ ಶ್ರಮ ಮತ್ತು ಪ್ರಾಣಿಗಳನ್ನು ಉಪಯೋಗಿಸಿಕೊಂಡು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿತ್ತು. ಹಾಗಾಗಿ ಅದು ಸಾವಯವ ಕೃಷಿಯಾಗಿತ್ತು. ಉದಾ: ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಕುದುರೆಗಳನ್ನು, ಏಷ್ಯಾದಲ್ಲಿ ಎತ್ತುಗಳನ್ನು ಬಳಸಿಕೊಂಡು ಕೃಷಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ೧೯ನೇ ಶತಮಾನದ ಆರಂಭದಲ್ಲಿ ಝುಥ್ರೋಟಲ್(Jethrotull) ಎಂಬುವರು ಕುದುರೆಗಳಿಗೆ ಕಟ್ಟಿಕೊಂಡು ಬೀಜ ಬಿತ್ತುವ ಸಲಕರಣೆಗಳನ್ನು ಕಂಡುಹಿಡಿದರು. ೧೯೧೦ರಲ್ಲಿ ಟ್ರಾಕ್ಟರನ್ನು ಅವಿಷ್ಕಾರ ಕೂಡ ಮಾಡಲಾಯಿತು. ಈ ಅವಧಿಯಲ್ಲಿಯೇ ಜರ್ಮನಿಯ ರಾಸಾಯನಶಾಸ್ತ್ರ ಜ್ಞಾನರಾದ ಫ್ರಿಟ್ಜ್‌ಹಾಬರ್ (Fritz Habur) ರವರು ಅಮೋನಿಯಂನ್ನು ಅಭಿವೃದ್ಧಿ ಪಡಿಸಿದರು. ಇದರಿಂದ ಅಮೇರಿಕ ಸಂಯುಕ್ತ ಸಂಸ್ಥಾನ ಸಾರಜನಕ ರಸಗೊಬ್ಬರಗಳ ಉತ್ಪಾದನೆಯನ್ನು ಪ್ರಾರಂಭಿಸಿತು. ಇದು ಅಧಿಕ ಇಳುವರಿ ತಳಿಯ ಮತ್ತು ಹೈಬ್ರಿಡ್‌ಬೀಜಗಳಿಗೆ ವರದಾನ ವಾಯಿತು. ಇದರ ಜೊತೆಯಲ್ಲಿಯೇ ಹಲವು ಕೀಟನಾಶಕಗಳ ಅವಿಷ್ಕಾರವಾಯಿತು. ಅವುಗಳಲ್ಲಿ ಸ್ವಿಟ್ಜರ್ ಲ್ಯಾಂಡ್‌ನ ಪಿ.ಮುಲ್ಲರ್ ರವರು ೧೯೩೯ರಲ್ಲಿ ಡಿ.ಡಿ.ಟಿ.ಯನ್ನು ಕಂಡು ಹಿಡಿದರು. ಹೀಗೆ ೧೯ ನೇ ಶತಮಾನದ ಮಧ್ಯಭಾಗದಿಂದ ಪ್ರಾರಂಭವಾದ ವೈಜ್ಞಾನಿಕ ಸಂಶೋಧನೆಗಳು ಕೃಷಿ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳನ್ನುಂಡು ಮಾಡಿದವು. ೨೦ನೇ ಶತಮಾನದ ಮಧ್ಯಭಾಗದ ವೇಳೆಗೆ ವಿಶ್ವದಲ್ಲಿ ಯಂತ್ರೋಪಕರಣಗಳು, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳು, ಬೆಳವಣಿಗೆ ನಿಯಂತ್ರಕ ಇತ್ಯಾದಿಗಳ ಉಪಯೋಗವು ಕೃಷಿ ಕ್ಷೇತ್ರದಲ್ಲಿ ಸಾಮಾನ್ಯವಾಯಿತು. ಕೃಷಿ ತಜ್ಞರಾದ ನಾರ್ಮನ್‌ಬೋರ್ಲಾಗ್‌ರವರು ಅಭಿವೃದ್ಧಿಪಡಿಸಿದಂತಹ ಸುಧಾರಿತ ಮತ್ತು ಹೈಬ್ರಿಡ್‌ತಳಿಯ ಬೀಜಗಳ ಬಳಕೆಯಿಂದ ಕೃಷಿ ಕ್ಷೇತ್ರದಲ್ಲಿ ಕ್ರಾಂತಿಯೇ ಉಂಟಾಯಿತು. ಹೀಗೆ ವಿವಿಧ ಕೃಷಿ ಪರಿಕರಗಳ ಬಳಕೆಯಿಂದಾಗಿ ಎಲ್ಲಾ ರಾಷ್ಟ್ರಗಳಲ್ಲಿ ಪ್ರತಿ ಎಕರೆವಾರು ಕೃಷಿ ಉತ್ಪನ್ನ ಮತ್ತು ಉತ್ಪಾದಕತೆ ಗಣನೀಯವಾಗಿ ಅಧಿಕವಾಯಿತು. ಹಲವು ಹಿಂದುಳಿದ ರಾಷ್ಟ್ರಗಳು ಆಹಾರ ಧಾನ್ಯಗಳ ಸಮಸ್ಯೆಯಿಂದ ಹೊರಬಂದು ಹಸಿವಿನ ಸಮಸ್ಯೆಯನ್ನು ನಿವಾರಿಸಿಕೊಂಡವು.

**ಭಾರತದಲ್ಲಿ ಅಸಾವಯವ ಕೃಷಿ (Inorganic Farming)**

ನಮ್ಮ ದೇಶದಲ್ಲಿಯೂ ಕೂಡ ಕೃಷಿ ಅರ್ಥವ್ಯವಸ್ಥೆಯ ತಳಹದಿಯಾಗಿರುವುದಲ್ಲದೆ, ಬಹುಜನರ ಜೀವನಾಧಾರ ಕಸುಬಾಗಿದೆ. ಸ್ವಾತಂತ್ರ್ಯನಂತರ ದೇಶದ ವಿಭಜನೆಯಿಂದ ಕೃಷಿ ಕ್ಷೇತ್ರವು ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಜನಸಂಖ್ಯೆ ಅಧಿಕವಾದಂತೆ ಪಾಳುಬಿದ್ದ, ಕೃಷಿಗೆ ಯೋಗ್ಯವಾಗಿದ್ದು ಉಪಯೋಗವಾಗದೇ ಇರುವ ಭೂಮಿಯನ್ನು ಕೃಷಿ ವ್ಯಾಪ್ತಿಗೆ ತಂದು ಸಾಗುವಳಿ ಭೂಮಿಯನ್ನು ವಿಸ್ತರಿಸುವುದರ ಮೂಲಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲಾಯಿತು. ಈ ವಿಧಾನವನ್ನು ವಿಸ್ತೃತ ಬೇಸಾಯವೆಂದು ಕರೆಯಲಾಗುತ್ತಿತ್ತು. ಅಂದರೆ ಈ ವಿಧಾನದಲ್ಲಿ ಕೃಷಿ ಭೂಮಿಯ ಪ್ರಮಾಣ ಅಧಿಕವಿದ್ದು ತಂತ್ರಜ್ಞಾನವು ಸ್ಥಿರವಾಗಿತ್ತು. ಇದು ಒಂದು ರೀತಿಯ ಸ್ವಾಭಾವಿಕ ಕೃಷಿ (ನೈಸರ್ಗಿಕ ಕೃಷಿ) ಯಾಗಿದ್ದು ೧೯೬೦ರವರೆಗೆ ಅಸ್ತಿತ್ವದಲ್ಲಿದ್ದಿತ್ತು. ನಂತರ, ನಮ್ಮ ದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ಅತ್ಯಂತ ವೇಗವಾಗಿ ಹೆಚ್ಚಾಗಲು ಪ್ರಾರಂಭವಾಯಿತು. ಮೇಲಾಗಿ ಪಂಚಾವಾರ್ಷಿಕ ಯೋಜನೆಗಳ ಅನುಷ್ಠಾನದಿಂದಾಗಿ ಆರ್ಥಿಕ ಚಟುವಟಿಕೆಗಳಾದಂತಹ, ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳ ವಿಸ್ತರಣೆಯೊಂದಿಗೆ, ಉದ್ಯೋಗವಾಕಾಶಗಳು ಕೂಡ ಸೃಷ್ಟಿಸಲ್ಪಟವು. ಒಂದು ಕಡೆ ಜನಸಂಖ್ಯೆಯ ನಿರಂತರ ಹೆಚ್ಚಳ, ಮತ್ತೊಂದು ಕಡೆ ಉದ್ಯೋಗಾವಕಾಶಗಳಿಂದಾಗಿ ಜನರ ತಲಾ ಆದಾಯವು ಕೂಢ ಹೆಚ್ಚಾಯಿತು. ಇದು ಆಹಾರ ಧಾನ್ಯಗಳಿಗಿರುವ ಬೇಡಿಕೆ ಅವುಗಳ ಪೂರೈಕೆಗಿಂತ ಹೆಚ್ಚಾಗಲು ಕಾರಣವಾಯಿತು. ಈ ಸಂದರ್ಭದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ವಿಸ್ತೃತ ಬೇಸಾಯದಿಂದ ಸಾಧ್ಯವಾಗಲಿಲ್ಲ. ಏಕೆಂದರೆ ವ್ಯವಸಾಯಕ್ಕೆ ಯೋಗ್ಯವಿರುವ ಭೂಮಿಯ ಕೊರತೆ. ಕಾಡುಗಳನ್ನು ನಾಶಪಡಿಸುವುದರಿಂದುಂಟಾಗುವ ಸಮಸ್ಯೆಗಳ ಅರಿವು. ಇತ್ಯಾದಿಗಳಿಂದಾಗಿ ವಿಸ್ತೃತ ಅಥವಾ ವ್ಯಾಪಕ ಬೇಸಾಯವು ಅರ್ಥಹೀನವಾಯಿತು. ಆಹಾರ ಧಾನ್ಯಗಳ ಪೂರೈಕೆಯನ್ನು ಆಮದುಗಳ ಮೂಲಕ ಹೆಚ್ಚಿಸುವುದು ಕೂಡ ಒಂದು ತಾತ್ಕಾಲಿಕ ಪರಿಹಾರ. ಆದರೆ ಅದು ದೀರ್ಘಾವಧಿಯಲ್ಲಿ ಆಹಾರ ಭದ್ರತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವುದಲ್ಲದೆ, ಅಸ್ಥಿರತೆಯನ್ನುಂಟು ಮಾಡುತ್ತದೆ. ಹೀಗೆ ಜನಸಂಖ್ಯೆಯ ಹೆಚ್ಚಳ, ಜನರ ಆದಾಯದಲ್ಲಿ ಏರಿಕೆ ಹಾಗೂ ಸಾಗುವಳಿ ಭೂಮಿಯ ಕೊರತೆಯಿಂದ ಕೃಷಿ ಉತ್ಪಾದನೆಗೆ ಬೇಡಿಕೆ ನಿರಂತರವಾಗಿ ಹೆಚ್ಚಾಗಲು ಕಾರಣವಾಯಿತು. ಅದುವರೆಗೂ ಸರ್ಕಾರ ಅನುಸರಿಸಿಕೊಂಡು ಬಂದ ಕೃಷಿ ನೀತಿ ಆಹಾರಧಾನ್ಯಗಳ ಕೊರತೆಯನ್ನು ನೀಗಿಸಲು ಮತ್ತು ಕೃಷಿ ಕ್ಷೇತ್ರವನ್ನು ಸಶಕ್ತಗೊಳಿಸಿ ಉತ್ಪಾದಕತೆ ಮತ್ತು ಉತ್ಪಾದನೆಯನ್ನು ಅಧಿಕಗೊಳಿಸಲು ವಿಫಲವಾಯಿತು. ಹಾಗಾಗಿ ಸರ್ಕಾರ ಕೃಷಿ ಬೆಳವಣಿಗೆ ತಂತ್ರವನ್ನು ಬದಲಾಯಿಸಬೇಕಾಯಿತು. ಈ ನೀತಿಯಲ್ಲಿ ಮಿತವಾದ ಸಾಗುವಳಿ ಭೂಮಿ ಮತ್ತು ಚಲಾನಾತ್ಮಕ ತಂತ್ರಜ್ಞಾನ ತಂತ್ರ (Limited Land and Dynamic Technology) ವನ್ನು ಪರಿಚಯಿಸಲಾಯಿತು. ಹೀಗೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರದೊಂದಿಗೆ, ಕೃಷಿ ವಿಶ್ವಾವಿದ್ಯಾನಿಲಯಗಳು ಮತ್ತು ಸಂಶೋಧಕರು ಸಾಕಷ್ಟು ಶ್ರಮಿಸಿದರು. ಅವರುಗಳ ಪ್ರಯತ್ನದ ಫಲವಾಗಿ ಹಲವರು ವೈಜ್ಞಾನಿಕ ವಿಧಾನಗಳು ಬೆಳಕಿಗೆ ಬಂದವು ಮತ್ತು ಅವುಗಳನ್ನು ಅಳವಡಿಸಿಕೊಳ್ಳಲು ಕೃಷಿಕರಿಗೆ ಉತ್ತೇಜನ ಕೂಡ ನೀಡಲಾಯಿತು. ಅಂತಹವುಗಳಲ್ಲಿ ಆಧುನಿಕ ತಳಿಯ ಸುಧಾರಿತ ಬೀಜಗಳು, ಹೈಬ್ರಿಡ್‌ತಳಿಯ ಬೀಜಗಳು, ರಸಾಯನಿಕ ಗೊಬ್ಬರ ಮತ್ತು ಕೀಟಾನಾಶಕಗಳು ಇತ್ಯಾದಿಗಳು ಇವುಗಳೊಂದಿಗೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ಸ್ನೇಹಿ ಕೃಷಿ ನೀತಿ, ಮೂಲಸೌಕರ್ಯಗಳ ವಿಸ್ತರಣೆ, ಅವುಗಳಲ್ಲಿ ಪ್ರಮುಖವಾದಂಥವುಗಳೆಂದರೆ, ಬೃಹತ್, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳ ಅನುಷ್ಠಾನ, ಸಾಲಸೌಲಭ್ಯಗಳು, ವಿದ್ಯುತ್‌ಚ್ಛಕ್ತಿ, ನಿಯಂತ್ರಿತ ಮತ್ತು ಸಹಕಾರಿ ಮಾರುಕಟ್ಟೆ ವ್ಯವಸ್ಥೆ ಸರ್ಕಾರದ ಬೆಂಬಲ ಬೆಲೆ, ನೀತಿ, ಇತ್ಯಾದಿ ಈ ಎಲ್ಲಾ ಮೂಲಭೂತ ಸೌಲಭ್ಯಗಳಿಂದಾಗಿ ೧೯೬೪-೬೯ರ ಅವಧಿಯಲ್ಲಿ ಕೃಷಿ ವಲಯ ಮತ್ತು ಉತ್ಪಾದನೆಯಲ್ಲಿ ವ್ಯಾಪಕವಾದ ಬದಲಾವಣೆಗಳಾದವು. ಅದು ಅಲ್ಲದೆ ಆಹಾರ ಧಾನ್ಯಗಳ ಉತ್ಪಾದನೆಯ ನಿರೀಕ್ಷೆ ಮೀರಿದ ಪ್ರಮಾಣದಲ್ಲಿ ಅಧಿಕವಾಯಿತು. ಇದನ್ನೇ ಹಸಿರು ಕ್ರಾಂತಿ ಎಂಬುದಾಗಿ ಕರೆಯುತ್ತಾರೆ.

ಹೀಗೆ ಕೃಷಿವಲಯದಲ್ಲಿ ಉಪಯೋಗಿಸಿದ ಆಧುನಿಕ ಒಳಸುರಿಗಳ ಪರಿಣಾಮವಾಗಿ ಕೃಷಿ ಉತ್ಪಾದಕತೆ ಮತ್ತು ಉತ್ಪಾದನೆ ನಿರೀಕ್ಷೆ ಮೀರಿ ಹೆಚ್ಚಾದವು. ರಸಾಯನಿಕ ಕೃಷಿ ನಮ್ಮ ರಾಷ್ಟ್ರವನ್ನು ಆಹಾರ ಧಾನ್ಯಗಳ ಕೊರತೆಯ ಸ್ಥಿತಿಯಿಂದ, ಸಮೃದ್ಧರಾಷ್ಟ್ರವನ್ನಾಗಿ ಪರಿವರ್ತಿಸಿದ್ದಲ್ಲದೆ, ಆಹಾರಧಾನ್ಯಗಳನ್ನು ರಫ್ತು ಮಾಡುವಂತಹ ಸಾಮರ್ಥ್ಯವನ್ನು ತಂದುಕೊಟ್ಟಿತು. ಗೋಧಿ ಮತ್ತು ಅಕ್ಕಿ ಉತ್ಪಾದನೆಯಲ್ಲಿ

ಸ್ವಾಲಂಬನೆಯನ್ನು ಸಾಧಿಸಿದ್ದಲ್ಲದೆ ಇವುಗಳನ್ನು ವಿದೇಶಗಳಿಗೆ ಬೃಹತ್‌ಪ್ರಮಾಣದಲ್ಲಿ ರಫ್ತು ಮಾಡುವಂತಾಯಿತು. ಹಸಿರುಕ್ರಾಂತಿಯ ಪರಿಣಾಮವಾಗಿ, ಕಳೆದ ೩೦ ವರ್ಷಗಳಲ್ಲಿ ರಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯು ಕ್ರಮವಾಗಿ ೭ (ಏಳು) ಪಟ್ಟ ಹಾಗೂ ೩೭೫ ಪಟ್ಟು ಅಧಿಕವಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ಪರ ಕೃಷಿ ನೀತಿಯ ಫಲವಾಗಿ ಕೆಲವು ರಾಜ್ಯಗಳಲ್ಲಿ ಅದರಲ್ಲೂ ಪಂಜಾಬ್, ಹರ್ಯಾಣ ಮತ್ತು ಉತ್ತರ ಪ್ರದೇಶ ರಾಜ್ಯಗಳು ಆಹಾರ ಧಾನ್ಯಗಳ ಉಗ್ರಾಣಗಳಾಗಿ ನಿರ್ಮಾಣವಾದವು. ಇದರ ಜೊತೆಗೆ ಈ ರಾಜ್ಯಗಳಲ್ಲಿ ರಾಸಾಯನಿಕ ಗೊಬ್ಬರ ಬಳಕೆಯು ಏಳು ಪಟ್ಟು ಹೆಚ್ಚಾದರೆ ಕೀಟನಾಶಕಗಳ ಬಳಕೆಯು ಸುಮಾರು ೩೭೫ ಪಟ್ಟು ಹೆಚ್ಚಾಯಿತು. ಆದರೆ ಆಹಾರ ಧಾನ್ಯಗಳ ಉತ್ಪಾದನೆ ಮಾತ್ರ ೧೯೫೦-೨೦೦೦ರ ಅವಧಿಯಲ್ಲಿ ಕೇವಲ ಎರಡುಪಟ್ಟು ಮಾತ್ರ ಹೆಚ್ಚಾಯಿತು. ೧೯೬೦ರಿಂದ ಕೃಷಿ ವಲಯದಲ್ಲಿ ಪ್ರಾರಂಭವಾದ ವ್ಯಾಪಕ ಬದಲಾವಣೆಗಳು ಮತ್ತು ಅವುಗಳಿಂದ ಉಂಟಾದ ಹಸಿರುಕ್ರಾಂತಿಯು ನಾಲ್ಕು ದಶಕಗಳವರೆಗೆ ರೈತರಿಗೆ ಅನುಕೂಲಕರವಾದ ವಾತಾವರಣವನ್ನು ನಿರ್ಮಾಣ ಮಾಡಿತು. ತದನಂತರ ಹಸಿರು ಕ್ರಾಂತಿಯು (Green Revolution turned in to Greedy Revolution) ಅತಿ ಹೆಚ್ಚು ಸಮಸ್ಯೆಗಳನ್ನು ಅರ್ಥ ವ್ಯವಸ್ಥೆಯಲ್ಲಿ ಸೃಷ್ಟಿಸಿತು. ಈ ಸಮಸ್ಯೆಗಳು ಕೇವಲ ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವುಗಳು ಸಾರ್ವತ್ರಿಕವಾಗಿದ್ದವು.

**ರಾಸಾಯನಿಕ ಕೃಷಿಯ ನ್ಯೂನ್ಯತೆಗಳು (ಅಸಾವಯವ ಕೃಷಿ ಸಮಸ್ಯೆಗಳು)**

ಆಧುನಿಕ ಕೃಷಿ ವಿಧಾನದಲ್ಲಿ ಬಳಸಲ್ಪಡುವಂತಹ ಅತಿ ಹೆಚ್ಚು ವ್ಯೆಚ್ಚದಾಯಕ ಹೈಬ್ರಿಡ್‌ತಳಿಯ ಬೀಜಗಳು, ಅಧಿಕ ಇಳುವರಿ ತಳಿಯ ಬೀಜಗಳು, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆ, ಅತ್ಯಧಿಕ ಬೆಲೆಯ ಕೃಷಿ ಯಂತ್ರೋಪಕರಣಗಳು, ವಿದ್ಯುತ್‌ಚಾಲಿತ ಕೊಳವೆ ಮತ್ತು ತೆರೆದ ಬಾವಿಗಳ ನೀರಾವರಿ ವಿಸ್ತರಣೆ ಇತ್ಯಾದಿಗಳು ಕೃಷಿ ಉತ್ಪಾದನೆಯನ್ನು ಅಧಿಕಗೊಳಿಸುವುದರ ಜೊತೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸಿತು. ಆದರೆ ಇದು ಕೇವಲ ತಾತ್ಕಾಲಿಕವಾಗಿತ್ತು. ದೀರ್ಘಾವಧಿಯಲ್ಲಿ ಕೃಷಿ ಪರಿಕರಗಳ ಬೆಲೆಗಳು ನಿರಂತರವಾಗಿ ಹೆಚ್ಚುತ್ತ ಹೋದರೆ ಇಳುವರಿ ಮಾತ್ರ ಇಳಿಮುಖವಾಗುತ್ತಾ ಹೋಯಿತು. ಇದರಿಂದಾಗಿ ಕೃಷಿ ವೆಚ್ಚ ಅಧಿಕವಾಗಿ ಮತ್ತು ಚಿಕ್ಕ ರೈತರು ತಮ್ಮ ಸಾಲಗಳನ್ನು ಮರುಪಾವತಿ ಮಾಡಲು ಸಾಧ್ಯವಾಗದೇ ಸಂಕಷ್ಟಕ್ಕೆ ಒಳಗಾಗಬೇಕಾಯಿತು. ಅಲ್ಲದೆ ಅವರ ಜೀವನ ಮಟ್ಟ ಮತ್ತಷ್ಟು ಹೀನಾಯ ಸ್ಥಿತಿಯನ್ನು ತಲುಪಿತು. ಈ ಕೃಷಿಯ ಮುಖ್ಯ ನ್ಯೂನ್ಯತೆಗಳೆಂದರೆ:

- ಅವೈಜ್ಞಾನಿಕವಾಗಿ ರೈತರು ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯಿಂದ ಮಣ್ಣಿನಲ್ಲಿರುವ ಸೂಕ್ಷ್ಮ ಪೋಷಕಾಂಶಗಳು ನಾಶವಾಗುವುದರ ಮೂಲಕ ಮಣ್ಣು ಸಂಪೂರ್ಣವಾಗಿ ಆರೋಗ್ಯ ಹೀನವಾಗಿದ್ದಲ್ಲದೆ ತನ್ನ ಸತ್ವವನ್ನು ಕಳೆದುಕೊಂಡಿತ್ತು. ಇದರಿಂದಾಗಿ ಕೃಷಿ ಉತ್ಪಾದನೆ ಸ್ಥಿರವಾಗಿದ್ದಲ್ಲದೆ, ರೈತರ ಆದಾಯವು ಗಣನೀಯವಾಗಿ ಕಡಿಮೆಯಾಯಿತು.
- ರಾಸಾಯನಿಕಗಳ ಬಳಕೆಯಿಂದಾಗಿ ಮಣ್ಣು, ನೀರು, ಗಾಳಿ, ಸಸ್ಯವರ್ಗ ಮತ್ತು ಕೃಷಿ ಬೆಳೆಗಳು ಸಂಪೂರ್ಣವಾಗಿ ಮಲಿನವಾದವು.
- ಮಾನವನ ಆರೋಗ್ಯ ಮತ್ತು ಪರಿಸರ ಮಾಲಿನ್ಯವು ಪರೋಕ್ಷ ಮತ್ತು ಪ್ರತ್ಯಕ್ಷವಾಗಿ ರಾಸಾಯನಿಕಗಳ ಉಪಯೋಗದಿಂದ ಸರಿಪಡಿಸಲು ಸಾಧ್ಯವಾಗದಷ್ಟು ಮಾಲಿನ್ಯವಾಗಿ ಹೋಗಿದೆ.
- ಹಲವು ಪ್ರಕರಣಗಳಲ್ಲಿ ಅಸಾವಯವ ಕೃಷಿಯಿಂದಾಗಿ ತರಕಾರಿ, ಹಣ್ಣು ಹಂಪಲುಗಳು, ಹಾಲು ಆಹಾರ ಧಾನ್ಯಗಳು ಇತ್ಯಾದಿಗಳು ಶೇ.೯೦ರಷ್ಟು ವಿಷಪೂರಿತವಾಗಿದ್ದು ಅವುಗಳ ಅನುಭೋಗವು ಅತ್ಯಂತ ಹಾನಿಕಾರಕವಾಗಿದೆ (೨೦೦೮).
- ಹಸಿರು ಕ್ರಾಂತಿಯ ಪರಿಣಾಮದಿಂದಾಗಿ, ರಾಸಾಯನಿಕ ಒಳಸುರಿಗಳ ಬೆಲೆಗಳು ನಿರಂತರವಾಗಿ ಹೆಚ್ಚಾಗುತ್ತಿದ್ದರೆ, ಇಳುವರಿ ಇನ್ನೊಂದು ಕಡೆ ಕಡಿಮೆಯಾಗುತ್ತಿರುವುದರಿಂದ ರೈತರು ಸಾಲಗಾರರಾಗಿ ಮಾರ್ಪಡುತ್ತಿದ್ದಾರೆ.
- ಸೀಮಾಂತ ಮತ್ತು ಚಿಕ್ಕ ರೈತರು ಹಸಿರುಕ್ರಾಂತಿಯಿಂದಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದಾರೆ. ಏಕೆಂದರೆ ರಾಸಾಯನಿಕ ಕೃಷಿಯ ಬಂಡವಾಳ ಕೃಷಿಯಾಗಿ ಬದಲಾಗುತ್ತಿದೆ.
- ಹಸಿರು ಕ್ರಾಂತಿ ಆದಾಯ ಅಸಮಾನತೆಗಳನ್ನು ಸೃಷ್ಟಿಸುತ್ತದೆ.

- ಮಿತಿ ಮೀರಿದ ಮತ್ತು ಅಸಮರ್ಪಕವಾಗಿ ರಸಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯಿಂದಾಗಿ, ಕೃಷಿ ಕಾರ್ಮಿಕರು ಆನಾರೋಗ್ಯಕ್ಕೆ ಒಳಗಾಗಿದ್ದಾರೆ. ರೈತ ಸ್ನೇಹಿಯಾದ ಕೀಟಗಳು ತಮ್ಮ ಆಹಾರದ ಮೂಲಗಳನ್ನು ಕಳೆದುಕೊಳ್ಳುತ್ತವೆ ಮತ್ತು ಅವುಗಳು ಕೂಡ ನಾಶವಾಗುತ್ತಿವೆ. (International Food Policy Research Institute 2002)
- ಅತಿಯಾಗಿ ನೀರಾವರಿ ಸೌಲಭ್ಯಗಳನ್ನು ಹೊಂದಿರುವ ಕೃಷಿ ಕ್ಷೇತ್ರವು ಸಂಪೂರ್ಣವಾಗಿ ಉಪ್ಪು ಮತ್ತು ಲವಣಾಂಶಗಳಿಂದಾಗಿ ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ.
- ಕೆಲವೇ ಧವಸಧಾನ್ಯಗಳ ಮೇಲಿನ ಅವಲಂಬನೆ ಹೆಚ್ಚಾಗುವುದರಿಂದ ಕೃಷಿಯು ಜೈವಿಕ ವೈವಿಧ್ಯೆತೆಯ ಗುಣವನ್ನು ಕಳೆದುಕೊಳ್ಳುತ್ತಿದೆ.
- ಕೀಟನಾಶಕಗಳ ಬಳಕೆಯು ಮಹಿಳಾ ಕೃಷಿ ಕಾರ್ಮಿಕರ ಮೇಲೆ ಹಲವು ರೀತಿಯ ಮಾರಕ ಪರಿಣಾಮಗಳನ್ನುಂಟು ಮಾಡುತ್ತದೆ. ಅವುಗಳೆಂದರೆ ಗರ್ಭಧಾರಣೆಯಾಗದೇ ಇರುವುದು, ಗರ್ಭಪಾತ ಅವಧಿ ಪೂರ್ವ ಪ್ರಸವ, ಸಕಾಲದಲ್ಲಿ ಗರ್ಭಧಾರಣೆಯಾಗದೇ ಇರುವುದು ಇತ್ಯಾದಿ ಸಮಸ್ಯೆಗಳು ವಿಶೇಷವಾಗಿ ಕೀಟನಾಶಕಗಳ ಮಿಶ್ರಣ ಮತ್ತು ಸಿಂಪರಣೆಯಲ್ಲಿ ತೊಡಗಿರುವ ಸ್ತ್ರೀ-ಪುರುಷ ಕೃಷಿ ಕಾರ್ಮಿಕರಲ್ಲಿ ಕಂಡು ಬರುತ್ತದೆ (Ranson, 2002).

ಹೀಗೆ ರಾಸಾಯನಿಕ ಅಥವಾ ಆಧುನಿಕ ಕೃಷಿಯು ಹಲವಾರು ರೀತಿಯ ಹಾನಿಕಾರಕ ಪರಿಣಾಮಗಳನ್ನು ನಮ್ಮ ಸುತ್ತಮುತ್ತಲಿನ ಪರಿಸರ, ಪ್ರಾಣಿ ಸಂಕುಲ, ಸಸ್ಯ ವರ್ಗಗಳ ಮೇಲೆ ಬೀರುತ್ತದೆ. ಇಂತಹ ಕೃಷಿ ವಿಧಾನವನ್ನು ಹೋಡ್ಜಾ (Hodge 1993) ರವರ ಮಾತುಗಳಲ್ಲಿ ಸಮಾರೋಪಗಳಿಸಬಹುದು. ಆಧುನಿಕ ಕೃಷಿಯು ತನಗೆ ಬೇಕಾದ ಒಳಸುರಿಗಳನ್ನು ಅತ್ಯಂತ ದೂರದ ಮೂಲಗಳಿಂದ ಪಡೆದುಕೊಳ್ಳುವುದಲ್ಲದೆ, ಅತಿ ಸಂಕುಚಿತ ಜೈವಿಕ ವೈವಿಧ್ಯತೆಯನ್ನು ಹೊಂದಿರುತ್ತದೆ. ಪುನರ್ ನವೀಕರಿಸಲು ಸಾಧ್ಯವಾಗದ ಶಕ್ತಿ ಸಂಪನ್ಮೂಲಗಳ ಮೇಲೆ ಅತಿಯಾಗಿ ಅವಲಂಬಿಸಿರುತ್ತದೆ. ಏಕೆಂದರೆ ಇದು ಬೆಂಬಲ ಬೆಲೆ ಮತ್ತು ಸಹಾಯಧನಗಳೊಂದಿಗೆ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಹೆಚ್ಚಾಗಿ ಉಪಯೋಗಿಸುತ್ತದೆ. ಇವುಗಳೆಲ್ಲವು ಪರಿಸರ, ಜೀವರಾಶಿ ಮಾನವ ಮತ್ತು ಆತನ ಯೋಗಕ್ಷೇಮಕ್ಕೆ ಕೆಡುಕನ್ನುಂಟು ಮಾಡುವುದರೊಂದಿಗೆ ಅವುಗಳನ್ನು ನಾಶಮಾಡುತ್ತವೆ. ಒಟ್ಟಿನಲ್ಲಿ ಆಧುನಿಕ ಕೃಷಿ ಪದ್ಧತಿಯು ನಮ್ಮ ಸುತ್ತ ಮುತ್ತಲಿನ ಪರಿಸರ, ಜಲ ಮೂಲಗಳನ್ನು ಮಾಲಿನ್ಯ ಮಾಡುವುದಲ್ಲದೆ ಅನೇಕ ರೀತಿಯ ರೋಗ ರುಜಿನಗಳು ಹರಡಲು ಕಾರಣವಾಗುತ್ತದೆ. ಇಂತಹ ಹಾನಿಕಾರಕ ಪರಿಣಾಮಗಳನ್ನು ನಿವಾರಿಸಿ ನಮ್ಮ ಸುತ್ತ ಮುತ್ತ ಇರುವ ವಾತಾವರಣವನ್ನು ಸುಸ್ಥಿರ ವಾಗಿಡುವಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಸದಾ ತಾಜಾತನದಲ್ಲಿ ಇಡುವಂತಹ ಕೃಷಿ ಪದ್ಧತಿಯ ಅವಶ್ಯಕತೆ ಇದೆ. ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತಹ ಕೃಷಿ ಇಂದಿನ ದಿನಗಳಲ್ಲಿ ಸಾಕಷ್ಟು ಚರ್ಚೆಯೊಂದಿಗೆ ಜನ ಪ್ರಿಯವಾಗುತ್ತಿದೆ ಅದುವೇ ಸಾವಯವ ಕೃಷಿ.

**ಸಾವಯವ ಕೃಷಿಯ ಬೆಳವಣಿಗೆ**

ಹಸಿರುಕ್ರಾಂತಿಯ ಮಾರಕ ಪರಿಣಾಮಗಳಿಂದಾಗಿ ಸಾವಯವ ಕೃಷಿ ವಿಧಾನವು ಮತ್ತೊಮ್ಮೆ ಆಚರಣೆಗೆ ಬರಲು ಪ್ರಾರಂಭಸಿದೆ. ಈ ಬೇಸಾಯದ ವಿಧಾನವು ಭಾರತೀಯರಿಗೆ ಹೊಸತೇನಲ್ಲ. ಪುರಾತನ ಕಾಲದಿಂದಲೂ ತಮ್ಮ ರೈತರು  ಈ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಆದರೆ ೨೦ನೇ ಶತಮಾನದ ಮಧ್ಯ ಭಾಗದಲ್ಲಿ ರಾಸಾಯನಿಕ ಕೃಷಿ ಪದ್ಧತಿಯಿಂದಾಗಿ ಕೆಲವು ವರ್ಷಗಳವರೆಗೆ ಕೆಲಮಟ್ಟಿಗೆ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿತು. ಈಗ ಮತ್ತೊಮ್ಮೆ ವಿಶ್ವದ ಬಹುಭಾಗಗಳಲ್ಲಿ ತನ್ನ ಸ್ಥಾನವನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗುತ್ತಿದೆ.

ಸಾವಯವ ಕೃಷಿ ಸುಸ್ಥಿರ ಕೃಷಿ ವಿಧಾನಗಳಲ್ಲಿ ಒಂದು ಬಹುಮುಖ್ಯವಾದ ಪದ್ಧತಿಯಾಗಿದೆ. ಈ ಬಗೆಯ ಕೃಷಿಯಲ್ಲಿ ಉತ್ಪಾದನೆಯಾದ ಆಹಾರದ ಗುಣಮಟ್ಟವು ಉತ್ತಮವಾಗಿರುತ್ತದೆ. ಪರಿಸರದ ಮೇಲೆ ಅನುಕೂಲಕರ ಪರಿಣಾಮದೊಂದಿಗೆ ಪುನರ್ ನವೀಕರಿಸಲಾಗದ ಸಂಪನ್ಮೂಲಗಳನ್ನು ಸಂರಕ್ಷಣೆ ಮಾಡುತ್ತದೆ. ಹಾಗಾಗಿ ವಿಶ್ವದ ಹಲವು ರಾಷ್ಟ್ರಗಳು ಇದರ ಮಹತ್ವವನ್ನು ಅರಿತು ಹಲವು ರೀತಿಯ

ಅನುಕೂಲಗಳನ್ನು ಸಾವಯುವ ಕೃಷಿಗೆ ಕಲ್ಪಿಸಿಕೊಡುತ್ತಿವೆ. ಕೆಲವು ರಾಷ್ಟ್ರಗಳು ಸಾವಯುವ ರೈತರಿಗೆ ನೇರವಾಗಿ ಹಣಕಾಸಿನ ನೆರವು ನೀಡಿದರೆ ಇನ್ನು ಕೆಲವು ರಾಷ್ಟ್ರಗಳು ಸಾವಯುವ ಉತ್ಪನ್ನಗಳಿಗೆ ಮಾರುಕಟ್ಟೆಯ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ನಿರತವಾಗಿವೆ. ಇದರ ಜೊತೆಗೆ ಇತ್ತೀಚಿನ ದಿನಗಳಲ್ಲಿ ಸಾವಯುವ ಪದಾರ್ಥಗಳಿಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯು ತೀವ್ರವಾಗಿ ಬೆಳೆಯುತ್ತಿರುವುದರಿಂದ ಸಾವಯುವ ಕೃಷಿ ಸಾಕಷ್ಟು ಜನಪ್ರಿಯವಾಗುತ್ತಿದೆ.

**ಸಾವಯುವ ಕೃಷಿ ಹಿನ್ನೆಲೆ**

ಸಾವಯುವ ಕೃಷಿ ರೈತ ವರ್ಗಕ್ಕೆ ಹೊಸದೇನಲ್ಲ. ಇದು ಸಾಕಷ್ಟು ದೀರ್ಘಕಾಲದ ಇತಿಹಾಸವನ್ನು ಹೊಂದಿದೆ. ಹಲವು ಬಗೆಯ ಸಾವಯುವ ಕೃಷಿ ಪದ್ಧತಿಗಳನ್ನು ನಮ್ಮ ದೇಶದ ವೈವಿಧ್ಯತೆಗೆ ಅನುಸಾರವಾಗಿ ವಿವಿಧ ಭಾಗಗಳಲ್ಲಿ, ವಿಶೇಷವಾಗಿ ಬುಡಕಟ್ಟು ಜನರು ವಾಸಿಸುವ ಪ್ರದೇಶಗಳಲ್ಲಿ, ಬೆಟ್ಟ ಗುಡ್ಡಗಳು ಮತ್ತು ಪರ್ವತ ಶ್ರೇಣಿಗಳಲ್ಲಿ ಇದನ್ನು ಅನುಸರಿಸಿಕೊಂಡು ಬರುತ್ತಿರುವುದು ಕಂಡು ಬರುತ್ತದೆ. ಆದಾಗ್ಯೂ ಇದರ ಬೆಳವಣಿಗೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದಂತಹ ಕೆಲವು ತಜ್ಞರ ಬರವಣಿಗೆಗಳಿಂದ ತಿಳಿಯಬಹುದಾಗಿದೆ. ೧೯ನೇ ಶತಮಾನದಲ್ಲಿ ಸರ್ ಅಲ್ಬರ್ಟ್ ಹೋವರ್ಡ್ ಎಂಬ ತಜ್ಞರು ಭಾರತದ ಪುಸ, ಸಮಸ್ತಿಪುರದಲ್ಲಿ ಬ್ರಿಟೀಷ್‌ಸರ್ಕಾರಕ್ಕೆ ಕೃಷಿ ಸಲಹೆಗಾರರಾಗಿ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಇವರು ಮಣ್ಣು ಮತ್ತು ಸಸ್ಯಗಳ ಅಂತರಕ್ರಿಯೆಗಳ ಕುರಿತು ಅಧ್ಯಯನ ಮಾಡುವುದರೊಂದಿಗೆ ಕಂಪೋಸ್ಟ್‌ಗೊಬ್ಬರ ತಯಾರಿಸುವ ವಿಧಾನಗಳನ್ನು ಅಭಿವೃದ್ಧಿ ಪಡಿಸಿದರು. ಆದ್ದರಿಂದ ಇವರನ್ನು ಸಾವಯುವ ಕೃಷಿಯ ಹರಿಕಾರರು ಎಂದು ಸಹ ಕರೆಯಲಾಗುತ್ತದೆ. ಇವರು ಕೈಗೊಂಡ ಸಂಶೋಧನೆಗಳನ್ನು ತಮ್ಮ ಪ್ರಸ್ತಕವಾದ “Agricultural Testament” ಎಂಬುದರಲ್ಲಿ ಉಲ್ಲೇಖಿಸಿದ್ದಾರೆ. ೧೯೩೯ರಲ್ಲಿ ಲೇಡಿ ಈವ್‌ಬಾಲ್‌ಫೋರ್ (Lady Eve Balfour) ಎಂಬುವರು “The Living Soil”ಎಂಬ ಗ್ರಂಥವನ್ನು ಬರೆದರು. ಅದರಲ್ಲಿ ಅವರು ಕೈಗೊಂಡಂತಹ ಹೊಗ್ಲೆ ಪ್ರಯೋಗದಲ್ಲಿ ಸಾವಯುವ ಮತ್ತು ಅಸಾವಯುವ ಕೃಷಿಗಳ (lOrganic and Inorganic Farming) ಹೋಲಿಕೆಗಳನ್ನು ಅತ್ಯಂತ ವೈಜ್ಞಾನಿಕವಾಗಿ ಮಾಡಿ, ಸಾವಯುವ ಕೃಷಿಯ ಪ್ರಯೋಜನಗಳನ್ನು ವಿವರಿಸಿದ್ದಾರೆ. ಅಲ್ಲದೆ ಜರ್ಮನಿಯ ಆಡಾಲ್ಫ್‌ಸ್ಟೈನರ್ ರವರು ಅತ್ಯಂತ ವ್ಯಾಪಕವಾಗಿ ೧೯೪೦ರಲ್ಲಿ ಜೈವಿಕ ಕೃಷಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಲಾರ್ಡ ನಾರ್ಥಬಾರ್ನರವರು “Look to Land” ಗ್ರಂಥದಲ್ಲಿ ಸಾವಯುವ ಕೃಷಿ ಜೀವರಾಶಿ ಸಮತೋಲನ ಮತ್ತು ಪವಿತ್ರವಾದಂತಹ ಕೃಷಿಯಾಗಿದೆ ಎಂಬುದಾಗಿ ಅವರು ಅಭಿಪ್ರಾಯಪಡುತ್ತಾರೆ. ಹಾಗಾಗಿ ಸಾವಯುವ ಕೃಷಿಯು ಇವರ ಹೆಸರಿನೊಂದಿಗೆ ತಳಕುಹಾಕಿಕೊಂಡಿದೆ. ೧೯೪೦ರಲ್ಲಿ ಮಸನೋಬು ಫುಕೋಒಕೊ ಎಂಬ ಸೂಕ್ಷ್ಮ ಜೀವಾಣು ತಜ್ಞರು, ಜಪಾನಿನ ಮಣ್ಣು ಮತ್ತು ಸಸ್ಯ ವಿಭಾಗದಲ್ಲಿ ಸುಮಾರು ೩೦ ವರ್ಷಗಳು ಕಾಲ ಸಂಶೋಧನೆ ನಡೆಸಿ ಭೂಮಿಯನ್ನು ಉಳುಮೆ ಮಾಡದೇ ಸಾವಯುವದ ಮೂಲಕ ಹೇಗೆ ಬೆಳೆಗಳನ್ನು ಬೆಳೆಯಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ ಹೀಗೆ ಸಾವಯುವ ಕೃಷಿಯು ತಕ್ಷಣಕ್ಕೆ ಪ್ರಬುದ್ಧಮಾನಕ್ಕೆ ಬಂದಂತಹ ಕೃಷಿ ಪದ್ಧತಿಯಾಗಿರುವುದಿಲ್ಲ. ಇದು ಹಲವಾರು ಹಂತಗಳನ್ನು ದಾಟಿಕೊಂಡು ಬಂದಂತಹ ಒಂದು ಕೃಷಿ ವಿಧಾನವಾಗಿದೆ.

ಸಾವಯುವ ಕೃಷಿಯನ್ನು ಅನೇಕ ತಜ್ಞರು ವಿವಿಧ ರೀತಿಯಲ್ಲಿ ಕರೆಯುತ್ತಾರೆ, ಅವುಗಳೆಂದರೆ ನೈಸರ್ಗಿಕ ಕೃಷಿ, ಶೂನ್ಯ ಬಂಡವಾಳ ಕೃಷಿ, ಪರಿಸರ ಸ್ನೇಹಿ ಕೃಷಿ, ಜೀವರಾಶಿ ಸಮತೋಲನ ಕೃಷಿ, ಸುಸ್ಥಿರ ಕೃಷಿ, ಜೈವಿಕಚಲನಾತ್ಮಕ ಕೃಷಿ ಇತ್ಯಾದಿ. ಆದರೆ ಈ ಒಂದು ವಿಶ್ಲೇಷಣೆಯಲ್ಲಿ ಸಾವಯುವ ಕೃಷಿ ಎಂದು ಪರಿಗಣಿಸಲಾಗಿದೆ.

**ಸಾವಯುವ ಕೃಷಿ ಅರ್ಥ**

ಸಾವಯುವ ಕೃಷಿಯು ಪರಿಸರ ಸ್ನೇಹಿ, ರೈತ ಸ್ನೇಹಿ ಮತ್ತು ಗ್ರಾಹಕ ಸ್ನೇಹಿ ಕೃಷಿ ಪದ್ಧತಿಯಾಗಿದೆ. ಏಕೆಂದರೆ ಸಾವಯುವ ಕೃಷಿ ಬಾಹ್ಯ ಒಳಸುರಿಗಳನ್ನು ಅವಲಂಭಿಸದೆ, ಕೃಷಿಕರು ತಮ್ಮ ಸ್ವಪ್ರಯತ್ನದಿಂದ ತಮ್ಮ ಜಮೀನು ಜಾನುವಾರಗಳಿಂದ ದೊರೆಯುವ

ಸಂಪನ್ಮೂಲಗಳನ್ನು ಬಳಸಿಕೊಂಡು ಕೃಷಿ ಚಟುವಟಿಕೆಗಳನ್ನು ನಿರ್ವಹಿಸುವಂತಹ ಕೃಷಿಯಾಗಿದೆ. ಈ ಪದ್ಧತಿಯನ್ನು ಹಲವು ತಜ್ಞರು ಹಲವಾರು ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ ಅವುಗಳಲ್ಲಿ ಪ್ರಮುಖವಾದವು.

ಅಮೇರಿಕ ಸಂಯುಕ್ತ ಸಂಸ್ಥಾನದ ಕೃಷಿ ಅಭಿವೃದ್ಧಿ ಇಲಾಖೆ (೧೯೮೦)ಯ ಪ್ರಕಾರ "ಸಾವಯವ ಕೃಷಿ ಬೇಸಾಯದ ಒಂದು ವಿಧಾನವಾಗಿದ್ದು, ರಾಸಾಯನಿಕ ಗೊಬ್ಬರ, ಕೀಟನಾಶಕಗಳು, ಬೆಳವಣಿಗೆಯ ಗತಿ ನಿಯಂತ್ರಕಗಳು ಮತ್ತು ಇತರೆ ರಾಸಾಯನಿಕಗಳಿಂದ ತಯಾರಿಸಲ್ಪಟ್ಟ ಪ್ರಾಣಿಗಳ ಆಹಾರ ಉಪಯೋಗಿಸುವುದನ್ನು ಪೂರ್ಣವಾಗಿ ನಿಷೇಧಿಸುವುದು. ಸಾವಯವ ಕೃಷಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಆವರ್ತ ಬೆಳೆಗಳು, ಬೆಳೆಗಳ ಉಳಿಕೆಗಳು, ಜಾನುವಾರಗಳ ಗೊಬ್ಬರ, ಹಸಿರೆಲೆಗೊಬ್ಬರ, ಕೃಷಿ ಕ್ಷೇತ್ರದಲ್ಲಿನ ತ್ಯಾಜ್ಯ ಮತ್ತು ಅಪವ್ಯಯಗಳನ್ನು ಸಾಧ್ಯವಾದ ಪ್ರಮಾಣದಲ್ಲಿ ಬಳಸುವುದು. ಯಾಂತ್ರಿಕ ವಿಧಾನದ ಬೇಸಾಯ, ಖನಿಜಾಂಶಗಳು ಇತ್ಯಾದಿಗಳನ್ನು ಉಪಯೋಗಿಸಿಕೊಂಡು ಮಣ್ಣಿನ ಬಲವರ್ಧನೆ ಮಾಡುವುದರೊಂದಿಗೆ ಉತ್ಪಾದಕತೆಯನ್ನು ಕಾಯ್ದುಕೊಳ್ಳುವುದು. ಬೆಳೆಗಳಿಗೆ ಜೈವಿಕ ಔಷಧಿಗಳನ್ನು ಬಳಸುವುದು ಮತ್ತು ಸಸ್ಯಗಳಿಗೆ ಪೋಷಕಾಂಶಗಳನ್ನು ನೀಡಿ ಕೀಟಗಳು, ಕಳೆ ಮತ್ತು ಇತರ ಹಾನಿ ಕಾರಕಗಳನ್ನು ನಿಯಂತ್ರಿಸುವುದು" ಈ ವ್ಯಾಖ್ಯೆಯು ಅತ್ಯಂತ ವ್ಯಾಪಕವಾದಂತಹ ಅರ್ಥವನ್ನು ಸಾವಯವ ಕೃಷಿಗೆ ನೀಡುತ್ತದೆ. ಅಲ್ಲದೆ ಸಾವಯವ ಕೃಷಿಯನ್ನು ಅನುಸರಿಸುವಾಗ, ಕೃಷಿಯಲ್ಲಿ ಬಳಸುವ ಪರಿಕರಗಳು, ಸಸ್ಯವರ್ಗವನ್ನು ಹೇಗೆ ಬಲವರ್ಧನೆ ಮಾಡಬೇಕು ಎಂಬುದನ್ನು ತಿಳಿಸಿಕೊಡುತ್ತದೆ.

ಕೊಡೆಕ್ಸ ಸಮಿತಿ (Codex Committee on Food and Labelling) ಯ ಪ್ರಕಾರ. "ಸಾವಯವ ಕೃಷಿಯು ಒಂದು ಪರಿಶುದ್ಧ (ಪವಿತ್ರ) ಉತ್ಪಾದನ ವಿಧಾನವಾಗಿದ್ದು ಮಣ್ಣಿನ ಜೈವಿಕ ಚಟುವಟಿಕೆ, ಜೈವಿಕ ಋತುಚಕ್ರ ಮತ್ತು ಜೈವಿಕ ವೈವಿಧ್ಯತೆಯನ್ನು ಒಳಗೊಂಡಂತೆ ಕೃಷಿ ಪರಿಸರದ ಆರೋಗ್ಯವನ್ನು ಸಂರಕ್ಷಿಸುವುದು ಮತ್ತು ಉತ್ತೇಜಿಸುವುದಾಗಿದೆ. ಸ್ಥಳೀಯ ಸ್ಥಿತಿಗತಿಗಳನ್ನು ಪರಿಗಣಿಸುವುದರೊಂದಿಗೆ, ಸ್ಥಳೀಯವಾಗಿ ಅನುಸರಿಸುವ ಪದ್ಧತಿಗಳಿಗೆ ಸಂಬಂಧಿದಂತಹ ನಿರ್ವಹಣೆಯ ಆಚರಣೆಗಳಿಗೆ ಪ್ರಾಶ್ಯ ನೀಡಿ ಕೃಷಿ ಕ್ಷೇತ್ರದಲ್ಲಿ ಬಾಹ್ಯ ಒಳಸುರಿಗಳನ್ನು(Input) ನಿರಾಕರಿಸುವುದಾಗಿದೆ. ಹೀಗೆ ಸಾವಯವ ಕೃಷಿಯಲ್ಲಿ ರಾಸಾಯನಿಕಗಳನ್ನು ತಿರಸ್ಕರಿಸಿ ಯಾಂತ್ರಿಕ, ಜೈವಿಕ ಮತ್ತು ಶಾಸ್ತ್ರೀಯ ವಿಧಾನಗಳನ್ನು ಪ್ರೋತ್ಸಾಯಿಸುವುದೇ" ಸಾವಯವಕೃಷಿ ರೈತರು ಯಾವುದೇ ಒಳಸುರಿಗಳನ್ನು ಕೊಂಡುತಂದು ಉಪಯೋಗಿಸದೇ ತಮ್ಮ ಸ್ವಪ್ರಯತ್ನದಿಂದ ಸಂಪನ್ಮೂಲಗಳನ್ನು ಜೈವಿಕ ಚಟುವಟಿಕೆಗಳನ್ನು ಹಾಳುಗೆಡವದಂತೆ ಕೃಷಿ ಚಟುವಟಿಕೆಗಳನ್ನು ನಿರ್ವಹಿಸುವುದು ಎಂಬುದನ್ನು ತಿಳಿಸಿಕೊಡುತ್ತದೆ.

ಲ್ಯಾಂಪ್ಕಿನ್(Lampkin 1944) ರವರು ಪ್ರಕಾರ ಸಾವಯವ ಕೃಷಿ "ಪುನರ್ ನವೀಕರಿಸಬಹುದಾದ ಸಂಪನ್ಮೂಲಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದು, ಜೀವರಾಶಿ ಸಮತೋಲನ ಮತ್ತು ಜೈವಿಕ ಅಂತರಕ್ರಿಯೆಯ ಮೂಲಕ ಮಾನವ ಮತ್ತು ಪರಿಸರವನ್ನು ಒಗ್ಗೂಡಿಸಿ ಕಡಿಮೆ ಖರ್ಚಿನಲ್ಲಿ ಉತ್ಪಾದಿಸುವ ವಿಧಾನವಾಗಿದೆ. ಮಾನವ ಪ್ರಾಣಿ ಸಂಕಲ, ಬೆಳೆ ಇತ್ಯಾದಿಗಳಿಗೆ ಪೌಷ್ಟಿಕಾಂಶಯುಕ್ತ ಆಹಾರವನ್ನು ಒದಗಿಸುವುದರೊಂದಿಗೆ ಕೀಟ ಮತ್ತು ರೋಗಗಳಿಂದ ಕೃಷಿ ಚಟುವಟಿಕೆಗಳನ್ನು ರಕ್ಷಿಸುವುದು. ಹೀಗೆ ಕೃಷಿಯಲ್ಲಿರುವ ಮಾನವ ಮತ್ತು ಇತರ ಸಂಪನ್ಮೂಲಗಳಿಗೆ ಯೋಗ್ಯ ಪ್ರತಿಫಲ ನೀಡುವ ಕೃಷಿ ವಿಧಾನವೇ" ಸಾವಯವ ಕೃಷಿಯಾಗಿದೆ.

ಹೀಗೆ ವಿವಿಧ ಸಂಸ್ಥೆಗಳು ಮತ್ತು ತಜ್ಞರು ಸಾವಯವ ಕೃಷಿಯನ್ನು ಸಾಗುವಳಿ ಭೂಮಿಯಲ್ಲಿ ಬಳಸುವ ಪರಿಕರಗಳು, ಕೃಷಿ ಭೂಮಿಯ ಸ್ಥಿತಿಗತಿಗಳು ಇತ್ಯಾದಿಗಳ ಆಧಾರದ ಮೇಲೆ ವ್ಯಾಖ್ಯಾನ ಮಾಡಿದ್ದಾರೆ. ಸಾವಯವ ಕೃಷಿಯು ಸುಸ್ಥಿರ ಕೃಷಿ ಪದ್ಧತಿಯಾಗಿದ್ದು, ಉತ್ಪಾದಕತೆಯ ಸ್ಥಿರತೆಯೊಂದಿಗೆ ಉತ್ಪಾದನೆಯನ್ನು ಹೆಚ್ಚಿಸಲು ಮಣ್ಣಿನ ಪೋಷಕಾಂಶಗಳನ್ನು ಪುನರ್ ನಿರ್ಮಾಣ ಮಾಡಲು ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಯಾಂತ್ರಿಕ ವಿಧಾನಗಳ ನಿರ್ವಹಣೆಯ ಮೂಲಕ ಕೀಟ ಮತ್ತು ರೋಗಗಳನ್ನು ನಿಯಂತ್ರಿಸಿ ಕೃಷಿ ನಿರ್ವಹಿಸುವಂತಹ ಪದ್ಧತಿಯಾಗಿದೆ. ಅಂದರೆ ರಾಸಾಯನಿಕ ಒಳಸುರಿಗಳ ಬಳಕೆಯನ್ನು ನಿಷೇಧಿಸುವುದು, ಸಾವಯವ ಒಳಸುರಿಗಳನ್ನು ಬಳಸಿಕೊಂಡು ಕೃಷಿ ಚಟುವಟಿಕೆಗಳನ್ನು ನಿರ್ವಹಿಸುವುದು ಸಾವಯವ ಕೃಷಿ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಾವಯವ

ಕೃಷಿಯು ಸುಸ್ಥಿರ ಕೃಷಿ ವಿಧಾನವಾಗಿದ್ದು ಸಮಾಜದಲ್ಲಿ ಕೃಷಿ ಉತ್ಪಾದಕತೆಯನ್ನು ನಿರಂತರವಾಗಿ ಹೆಚ್ಚಿಸುವುದು ಮತ್ತು ದೀರ್ಘಾವಧಿಯವರೆಗೆ ಅದರ ಮಹತ್ವವನ್ನು ಕಾಯ್ದುಕೊಳ್ಳುವ ಸಾಮರ್ಥ್ಯ ಹೊಂದಿರುವ ಬೇಸಾಯದ ವಿಧಾನವಾಗಿದೆ. ಮೇಲಾಗಿ ಸಂಪನ್ಮೂಲಗಳನ್ನು ಸಂರಕ್ಷಿಸುವ ಆರ್ಥಿಕವಾಗಿ ಲಾಭದಾಯಕವಾದ, ಸಮಾಜದಲ್ಲಿ ಬೆಂಬಲಿತವಾಗಿದ್ದು ವಾಣಿಜ್ಯ ದೃಷ್ಟಿಯಲ್ಲಿ ಸ್ಪರ್ಧಾತಕವಾಗಿದ್ದು ಹಾಗೂ ಪರಿಸರವನ್ನು ಬಲಿಷ್ಟಗೊಳಿಸುವಂತಹ ಸಾಮರ್ಥ್ಯ ಹೊಂದಿರುವ ಕೃಷಿ ವಿಧಾನವೇ ಸಾವಯವ ಕೃಷಿಯಾಗಿದೆ.

# ಸಾವಯವ ಕೃಷಿ ಒಂದು ವಿಶ್ಲೇಷಣೆ (2)

**ಸಾವಯವ ಕೃಷಿಯ ತತ್ವಗಳು**

ಸಾವಯವ ಕೃಷಿ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಚರ್ಚೆಯಾಗುತ್ತಿರುವ ಒಂದು ಕೃಷಿ ವಿಧಾನವಾಗಿದೆ. ಇಂತಹ ಕೃಷಿಯು ಕೆಲವು ಪ್ರಮುಖ ತತ್ವಗಳನ್ನು ಹೊಂದಿದೆ. ಈ ತತ್ವಗಳನ್ನು ಸರ್ಕಾರೇತರ ಸಂಸ್ಥೆಯಾದ ಅಂತರ್ ರಾಷ್ಟ್ರೀಯ ಸಾವಯವ ಕೃಷಿ ಆಂದೋಲನ ಸಂಸ್ಥೆ (International Federation of Organic Agriculture Movement ೧೯ಲಲ) ಸೂಚಿಸಿದೆ. ಅವುಗಳೆಂದರೆ:

- ಗರಿಷ್ಠ ಪ್ರಮಾಣದಲ್ಲಿ ಉತ್ತಮ ಗುಣಮಟ್ಟದ ಆಹಾರ ಉತ್ಪಾದನೆ.
  * ರಚನಾತ್ಮಕವಾಗಿ ಸ್ವಾಭಾವಿಕ ವಿಧಾನಗಳು ಮತ್ತು ಋತುಗಳು ಸಕಲ ಜೀವರಾಶಿಗಳ ಜೀವನ ವೃದ್ಧಿಗೊಳಿಸುವಂತೆ ಒಂದಕ್ಕೊಂದು ಪರಸ್ಪರ ಕಾರ್ಯನಿರ್ವಹಿಸುವುದು.
- ಸಾವಯವ ಉತ್ಪಾದನೆ ಮತ್ತು ಸಂಸ್ಕರಣೆ ವಿಧಾನಗಳ ಸಾಮಾಜಿಕ ಮತ್ತು ಜೀವರಾಶಿಗಳ ವ್ಯಾಪಕ ಪರಿಣಾಮಗಳನ್ನು ಪರಿಗಣಿಸುವುದು.
- ಸೂಕ್ಷ್ಮಾಣು ಜೀವಿಗಳು, ಮಣ್ಣು, ಸಸ್ಯವರ್ಗ ಹಾಗೂ ಪ್ರಾಣಿಗಳ ಸಮೂಹವನ್ನು ಒಳಗೊಂಡಂತೆ ಜೈವಿಕ ಕ್ರಿಯೆಗಳನ್ನು ಪ್ರೋತ್ಸಾಹಿಸುವುದು.
- ಸುಸ್ಥಿತಿಯೊಂದಿಗೆ ಜಲಚರಗಳ ಬೆಳವಣಿಗೆ ಮತ್ತು ಮೌಲ್ಯವನ್ನು ಅಭಿವೃದ್ಧಿಪಡಿಸುವುದು.
- ದೀರ್ಘಾವಧಿಯಲ್ಲಿ ಮಣ್ಣಿನ ಫಲವತೆಯನ್ನು ವೃದ್ಧಿಸುವುದು ಮತ್ತು ಸಂರಕ್ಷಿಸಿಕೊಂಡು ಹೋಗುವುದು.
- ವನ್ಯ ಜೀವಿಗಳ ತಾಣ ಮತ್ತು ಸಸ್ಯವರ್ಗಗಳ ಸಂರಕ್ಷಣೆಯೊಂದಿಗೆ ಸಂತಾನಭಿವೃದ್ಧಿಯಲ್ಲಿ ಅನುವಂಶೀಯ ವೈವಿಧ್ಯತೆಯನ್ನು ಕಾಯ್ದುಕೊಳ್ಳುವುದು.
- ಸಕಲ ಜೀವರಾಶಿಯ ಜೀವವಿರುವ ಜಲ ಮತ್ತು ಜಲಸಂಪನ್ಮೂಲಗಳ ಸದ್ಬಳಕೆ
- ಸ್ಥಳೀಯವಾಗಿ ಸಂಘಟಿಸಲ್ಪಟ್ಟ ಉತ್ಪಾದನಾ ವಿಧಾನದಲ್ಲಿ ಸಾಧ್ಯವಾದ ಮಟ್ಟಿಗೆ ಪುನರ್ ನವೀಕರಿಸಬಹುದಾದ ಸಂಪನ್ಮೂಲಗಳ ಬಳಕೆ.
- ಬೆಳೆಗಳು ಮತ್ತು ಪಶುಪಾಲನೆಯ ಮಧ್ಯೆ ಸೌಹಾರ್ಧಯುತ ಸಮತೋಲನ ಸಂಬಂಧವನ್ನೇರ್ಪಡಿಸುವುದು.
- ಎಲ್ಲಾ ಪ್ರಾಣಿ ಸಂಕುಲಗಳು ಸ್ವಾಭಾವಿಕವಾಗಿ ಜೀವಿಸುವ ಅವಕಾಶವನ್ನು ಮಾಡಿಕೊಡುವುದು.
- ಮಾಲಿನ್ಯದ ವಿವಿಧ ರೂಪಗಳನ್ನು ಕನಿಷ್ಠಮಟ್ಟಕ್ಕೆ ತರುವುದು.
- ನವೀಕರಿಸಬಹುದಾದ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಸಾವಯವ ಪದಾರ್ಥಗಳನ್ನು ಉತ್ಪಾದಿಸುವುದು.
- ದೀರ್ಘಕಾಲ ಬಾಳಿಕೆಯ ಮತ್ತು ಉತ್ತಮ ಗುಣಮಟ್ಟದ ಹತ್ತಿಬಟ್ಟೆಯ ವಸ್ತುಗಳ ಉತ್ಪಾದನೆ.
- ಸಂಪೂರ್ಣವಾಗಿ ಜೈವಿಕತೆಯ ಮೂಲಕ ನಾಶವಾಗುವಂತಹ ಸಾವಯವ ವಸ್ತುಗಳನ್ನು ಉತ್ಪಾದಿಸುವುದು.

- ಸಕಲ ಜೀವರಾಶಿ ಮತ್ತು ಸಾಮಾಜಿಕ ನ್ಯಾಯ ಒಳಗೊಂಡಂತೆ ಉತ್ಪಾದನೆ, ಸಂಸ್ಕರಣೆ ಮತ್ತು ವಿತರಣೆಯಲ್ಲಿ ಪೂರ್ಣ ಪ್ರಮಾಣದ ಪ್ರಗತಿ ಸಾಧಿಸುವುದು.
- ಸುರಕ್ಷಿತ ಪರಿಸರದಲ್ಲಿ ಪ್ರತಿಯೊಬ್ಬ ವ್ಯಕ್ತಿ ಸಾವಯವ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ತೊಡಗುವುದರ ಮೂಲಕ ಉತ್ತಮ ಜೀವನವನ್ನು ಸಾಗಿಸುವುದು. ಇದರೊಂದಿಗೆ ಮೂಲ ಅಗತ್ಯತೆಗಳನ್ನು ತೃಪ್ತಿಪಡಿಸಿಕೊಳ್ಳಲು ಯೋಗ್ಯ ಪ್ರತಿ ಫಲವನ್ನು ಪಡೆಯುವುದು (Source: IFDAM ೧೯೯೮).

ಹೀಗೆ ಸಾವಯವ ಕೃಷಿಯು ಹಲವಾರು ಗುರಿಗಳನ್ನು ಹೊಂದಿರುತ್ತದೆ. ಅವುಗಳನ್ನೇ ಸಾವಯವ ತತ್ವಗಳು ಎಂಬುದಾಗಿ ಕರೆಯಲಾಗುತ್ತದೆ. ಈ ತತ್ವಗಳನ್ನು ಗಮನಿಸಿದಾಗ ಕಂಡು ಬರುವಂತಹ ಅಂಶವೇನೆಂದರೆ ಸಾವಯವ ಕೃಷಿ ಒಂದು ಸಮಗ್ರ ಕೃಷಿಯಾಗಿದ್ದು ಇದು ಕೃಷಿ ಭೂಮಿಯನ್ನು ಒಂದು ಜೀವಿಯೆಂದು ಪರಿಗಣಿಸಿ ಅದರ ಬಲವರ್ಧನೆಗೆ ಹೇಗೆ ಪ್ರಯತ್ನಿಸಬೇಕು ಮತ್ತು ಹೇಗೆ ಸಂರಕ್ಷಿಸಿಕೊಂಡು ಹೋಗಬೇಕು ಎಂಬುದನ್ನು ತಿಳಿಸಿ ಕೊಡುತ್ತದೆ.

**ಸಾವಯವ ಕೃಷಿಯಲ್ಲಿ ಅನುಸರಿಸಬೇಕಾದ ವಿಧಾನಗಳು**

ಸಾವಯವ ಕೃಷಿಯನ್ನು ಅನುಸರಿಸುವಂತಹ ಸಂದರ್ಭದಲ್ಲಿ ಕೆಲವೊಂದು ನಿಯಮಗಳನ್ನು ಪರಿಪಾಲನೆ ಮಾಡಬೇಕಾಗುತ್ತದೆ. ಈ ಕೃಷಿ ಪದ್ಧತಿಯಲ್ಲಿ ರೈತರು ತಮ್ಮ ಬೆಳೆಗಳಿಗೆ ಬೇಕಾದಂತಹ ಪೋಷಕಾಂಶಗಳನ್ನು ಸಾವಯವ ಮತ್ತು ಜೈವಿಕ ಸಂಪನ್ಮೂಲಗಳನ್ನು ಸಂಗ್ರಹಿಸಿ ಅವುಗಳನ್ನು ಸಂಸ್ಕರಿಸಿ ಉಪಯೋಗಿಸಬೇಕು. ಆದ್ದರಿಂದ ಸಾವಯವ ಕೃಷಿಯಲ್ಲಿ ರೈತರು ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಸಂಪೂರ್ಣವಾಗಿ ತ್ಯಜಿಸಿ ಕೇವಲ ಸಾವಯವ ಒಳಸುರಿಗಳನ್ನು ಮಾತ್ರ ಬಳಸಿಕೊಂಡು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಇಂತಹ ವಿಧಾನದಲ್ಲಿ ವೈವಿಧ್ಯತೆಯನ್ನು ಕಾಯ್ದುಕೊಳ್ಳುವ ಸಲುವಾಗಿ ರೈತರು ಕೆಲವು ಪದ್ಧತಿಗಳನ್ನು ಅನುಸರಿಸಿಕೊಂಡು ಕೃಷಿ ಚಟುವಟಿಕೆಗಳನ್ನು ನಿರ್ವಹಿಸಬೇಕಾಗುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಆವರ್ತ ಬೆಳೆಗಳು, ಅಂತರ ಬೆಳೆಗಳು, ಮಿಶ್ರ ಬೆಳೆಗಳು, ಸಾಂಪ್ರದಾಯಿಕ ಮತ್ತು ಪರ್ಯಾಯಾತ್ಮ ಬೆಳೆಗಳು, ಜೈವಿಕ ಮತ್ತು ಸಾವಯವ ಗೊಬ್ಬರಗಳು ಇತ್ಯಾದಿ. ಈ ಎಲ್ಲಾ ವಿಧಾನಗಳನ್ನು ಸಂಕ್ಷಿಪ್ತವಾಗಿ ಚರ್ಚಿಸೋಣ.

**೧. ಆವರ್ತ ಬೆಳೆಗಳು:** ಒಂದು ನಿರ್ದಿಷ್ಟ ಸಾಗುವಳಿ ಭೂಮಿಯಲ್ಲಿ ಕ್ರಮ ಬದ್ಧವಾಗಿ ಪ್ರಧಾನ ಮತ್ತು ಹೊದಿಕೆ ಬೆಳೆಗಳನ್ನು ಬೆಳೆಯುವ ವಿಧಾನವಾಗಿದೆ. ಪ್ರತಿಯೊಂದು ನಿರ್ದಿಷ್ಟ ಬೆಳೆಯು ಕೂಡ ನಿಗದಿತ ಅನುಕೂಲವನ್ನು ಕಲ್ಪಿಸಿಕೊಡುತ್ತದೆ. ಅಲ್ಪಾವಧಿ ಮತ್ತು ದೀರ್ಘಾವಧಿಗಳೆರಡರಲ್ಲೂ ಮಣ್ಣಿನ ಫಲವತ್ತತ್ತೆ ಹೆಚ್ಚಿಸುವುದಲ್ಲದೆ ಕೀಟಗಳ ನಿಯಂತ್ರಣ ಮಾಡುವಲ್ಲಿಯೂ ಕೂಡ ನೆರವಾಗುತ್ತದೆ.

**೨. ಹಸಿರೆಲೆಗೊಬ್ಬರ ಮತ್ತು ಹೊದಿಕೆ ಬೆಳೆಗಳು:** ಬಹಳ ಹಿಂದಿನ ಕಾಲದಿಂದಲೂ ಹಸಿರೆಲೆಗೊಬ್ಬರುಗಳು ಮಹತ್ವವನ್ನು ಹೊಂದಿರುತ್ತವೆ. ಅದರೆ ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾಗಿ ಹಸಿರೆಲೆ ಗೊಬ್ಬರಗಳು ಮತ್ತು ಅವುಗಳ ಉಪಯೋಗ ಕಡಿಮೆಯಗಿರುವುದು ಕಂಡು ಬರುತ್ತದೆ. ಕೃಷಿ ಬೆಳೆಗಳನ್ನು ಅಚ್ಚುಕಟ್ಟಾಗಿ ಬೆಳೆಯಲು ಮಣ್ಣಿನಕ ಸಂರಕ್ಷಣೆಗಾಗಿ ಬೆಳೆಸುವ ಅಂತರ್ ಬೆಳೆಗಳನ್ನು ಹಸಿರೆಲೆ ಗೊಬ್ಬರಗಳೆಂದು ಕರೆಯಲಾಗುತ್ತದೆ. ಇವುಗಳು ಸಾವಯವ ಕೃಷಿಯಲ್ಲಿ ಅತ್ಯಂತ ಪ್ರಮುಖ ಪಾತ್ರ ಹೊಂದಿದೆ. ಉದಾ: ಸಬಾಬುಲ್, ಗ್ಲಿರಿಸಿಡಿಯ ಇತ್ಯಾದಿಗಳು.

ಮಣ್ಣು ಮತ್ತು ಮಣ್ಣಿನ ಜೀವ ಸತ್ವಗಳನ್ನು ಸಂರಕ್ಷಿಸುವ ಸಲುವಾಗಿ ಬೆಳೆಸುವ ಬೆಳೆಗಳನ್ನು ಹೊದಿಕೆಯ ಬೆಳೆಗಳೆಂದು ಕರೆಯಲಾಗುತ್ತದೆ. ಇವುಗಳು ಹಸಿರೆಲೆ ಗೊಬ್ಬರಗಳಿಗೆ ಪೂರಕವಾಗಿರುತ್ತದೆ. ಹೊದಿಕೆ ಮತ್ತು ಹಸಿರೆಲೆಯ ಬೆಳೆಗಳು ಒಂದಕ್ಕೊಂದು ಪೂರಕವಾಗಿದ್ದು, ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಲು ರೈತರು ನಾಟಿಕಾರ್ಯ ಅಥವಾ ಬಿತ್ತನೆಯ ಸಮಯದಲ್ಲಿ ಇವುಗಳನ್ನು ಬಳಸಿಕೊಂಡು ಕೃಷಿ

ಚಟುವಟಿಕೆಗಳನ್ನು ನಿರ್ವಹಿಸುತ್ತಾರೆ. ಬೆಳೆಗಳಿಗೆ ಬೇಕಾದ ಸಾರಜನಕವನ್ನು ದೊರಕಿಸಿಕೊಡುತ್ತವೆ ಮತ್ತು ಆರ್ಥಿಕವಾಗಿ ರೈತರಿಗೆ ಅತ್ಯಂತ ಮಿತವ್ಯಯಕಾರಿಯಾಗಿರುತ್ತವೆ.

**೩. ಕೊಟ್ಟಿಗೆ ಮತ್ತು ಎರೆಹುಳು ಗೊಬ್ಬರ:** ಜಾನುವಾರುಗಳ ಸಗಣಿ, ಮೂತ್ರ ಮತ್ತು ಕೃಷಿ ತ್ಯಾಜ್ಯಗಳನ್ನು ಒಂದೆಡೆ ಕ್ರೂಢೀಕರಿಸಿ ತಯಾರಿಸಲ್ಪಟ್ಟ ಗೊಬ್ಬರವಾಗಿರುತ್ತದೆ. ಬಹಳ ಹಿಂದಿನಿಂದಲೂ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಸಲುವಾಗಿ ರೈತರು ತಮ್ಮ ಜಮೀನುಗಳಿಗೆ ಉಪಯೋಗಿಸುತ್ತಾರೆ. ಎರೆಹುಳು ಗೊಬ್ಬರವು ಕೂಡ ಇತ್ತೀಚಿನ ದಿನಗಳಲ್ಲಿ ರೈತರು ಹೆಚ್ಚಾಗಿ ಬಳಸುವುದು ಕಂಡು ಬರುತ್ತದೆ. ರೈತರು ತೊಟ್ಟಿಗಳನ್ನು ನಿರ್ಮಾಣ ಮಾಡಿಕೊಂಡು ಅವುಗಳಿಗೆ ಕೃಷಿ ತ್ಯಾಜ್ಯ, ಕಸಕಡ್ಡಿ, ಹುಲ್ಲು, ಕೃಷಿ ಬೆಳೆಗಳ ಉಳಿಕೆ ಇತ್ಯಾದಿಗಳನ್ನು ತುಂಬಿ ಅಂತಹ ತೊಟ್ಟಿಗಳಿಗೆ ಎರೆಹುಳುಗಳನ್ನು ಬಿಟ್ಟರೆ, ಅವುಗಳು ಅದನ್ನೆಲ್ಲ ತಿಂದು ವಿಸರ್ಜಿಸುವಂತಹ ಪದಾರ್ಥವೇ ಎರೆಹುಳು ಗೊಬ್ಬರವಾಗಿದೆ. ಹಲವಾರು ರೈತರು ಇಂದು ಇದನ್ನೆಲ್ಲ ಒಂದು ವಾಣಿಜ್ಯ ಚಟುವಟಿಕೆಯನ್ನಾಗಿ ಅನುಸರಿಸಿಕೊಂಡು ಬರುವುದು ಕಂಡುಬರುತ್ತಿದೆ. ಹೀಗೆ ಕೊಟ್ಟಿಗೆ ಮತ್ತು ಎರೆಹುಳು ಗೊಬ್ಬರಗಳೆರಡು ರೈತರ ಜಮೀನಿನಲ್ಲಿ ನೀರಿನ ಧಾರಣೆ ಶಕ್ತಿಯನ್ನು ಹೆಚ್ಚಿಸುವುದರೊಂದಿಗೆ ಮಣ್ಣಿನಲ್ಲಿರುವ ಪೋಷಕಾಂಶಗಳನ್ನು ದ್ವಿಗುಣಗೊಳಿಸುತ್ತವೆ.

**೪. ಸಹ ಮತ್ತು ಅಂತರ್ ಬೆಳೆಗಳು:** ರೈತರು ಅಂತರ್ ಬೆಳೆಗಳನ್ನು ಸಣ್ಣ ಪ್ರಮಾಣದಲ್ಲಿ ಕೈಗೊಂಡರೆ ಅದನ್ನು ಸಹವರ್ತಿ ಬೆಳೆಗಳ ವಿಧಾನವೆಂದು ಕರೆಯಲಾಗುತ್ತದೆ. ಜೈವಿಕ ವೈವಿಧ್ಯತೆಯನ್ನು ಹೆಚ್ಚಿಸಲು ಎರಡು ಅಥವ ಹೆಚ್ಚು ಪರಸ್ಪರ ಪ್ರಯೋಜನ ಕಲ್ಪಿಸುವಂತಹ ಬೆಳೆಗಳನ್ನು ಅತ್ಯಂತ ಸಾಮಿಪ್ಯದಲ್ಲಿ ಬೆಳೆಯುವಂತಹ ವಿಧಾನವೇ ಅಂತರ್ ಬೆಳೆ ವಿಧಾನವಾಗಿದೆ. ಅಂತರ್ ಬೆಳೆ ವಿಧಾನ ಒಂದಕ್ಕೊಂದು ಪೂರಕವಾದಂತಹ ಬೆಳೆ ವಿಧಾನಗಳಾಗಿವೆ. ಉದಾಹರಣೆ: ಮೆಕ್ಕೆಜೋಳದೊಂದಿಗೆ ಉರುಳಿಕಾಯಿಯನ್ನು ಬೆಳೆಯುವುದು ಅಥವಾ ದ್ರಾಕ್ಷಿ ತೋಟದಲ್ಲಿ ಕುಂಬಳಕಾಯಿ ಬಳ್ಳಿಗಳನ್ನು ಬೆಳೆಯುವ ವಿಧಾನವಾಗಿದೆ. ಮೆಕ್ಕೆಜೋಳವು ಉರುಳಿಗೆ ಆಧಾರವನ್ನು ನೀಡಿದರೆ ಉರುಳಿಯು ಮೆಕ್ಕೆ ಜೋಳಕ್ಕೆ ಬೇಕಾದ ಸಾರಜನಕವನ್ನು ಒದಗಿಸುತ್ತದೆ.

**೫. ಜೈವಿಕ ಕೀಟ ನಿಯಂತ್ರಣ ಮತ್ತು ಜೈವಿಕ ಔಷಧಿಗಳು:** ಸಾವಯವ ಕೃಷಿಯು ಪರೋಪ ಜೀವಿಗಳಾದಂತಹ, ಜೇಡರ ಕಪ್ಪೆ, ಪಕ್ಷಿಗಳ ಇತ್ಯಾದಿಗಳಿಗೆ ಅನುಕೂಲ ಮಾಡಿಕೊಡುತ್ತದೆ. ಇವುಗಳು ಬೆಳೆಗಳನ್ನು ಹಾಳು ಮಾಡುವಂತಹ ಕೀಟಗಳನ್ನು ತಿಂದು ರೈತರ ಬೆಳೆಗಳನ್ನು ರಕ್ಷಣೆ ಮಾಡುತ್ತವೆ. ರೈತರು ತಮ್ಮ ಹೊಲಗಳ ಸುತ್ತಲು ಗಿಡ ಮರಗಳನ್ನು ಬೆಳೆಸುವುದರಿಂದ ಅವುಗಳು ಬಾವಲಿ, ಹಲವು ಬಗೆಯ ಪಕ್ಷಿಗಳಿಗೆ ವಾಸ ಸ್ಥಾನವಾಗಿ ಪರಿಣಮಿಸುತ್ತವೆ. ಇವುಗಳು ಕೂಡ ಹಾನಿಕಾರಕ ಕೀಟಗಳನ್ನು ತಿಂದು ತಾವುಗಳು ಕೂಡ ತಮ್ಮ ಸಂತತಿಯನ್ನು ಹೆಚ್ಚಿಸಿಕೊಳ್ಳುತ್ತದೆ. ಇದಕ್ಕೆ ಜೈವಿಕ ಕೀಟ ನಿಯಂತ್ರಣ ಎಂದು ಕರೆಯುತ್ತಾರೆ.

ಜೈವಿಕ ಔಷಧಿಗಳಲ್ಲಿ ಬೇವಿನ ಹಿಂಡಿ, ಬೇವಿನ ಎಣ್ಣೆ, ಹೊಂಗೆಯ ಹಿಂಡಿ ಸ್ಥಳೀಯವಾಗಿ ದೊರೆಯುವ ವಿವಿಧ ರೀತಿಯ ಗಿಡಬಳ್ಳಿಗಳನ್ನು ಕೊಳೆ ಹಾಕಿ ಅವುಗಳಿಂದ ರಸ ತೆಗೆದು ಅದನ್ನು ಸಿಂಪರಣೆ ಮಾಡುವುದರ ಮೂಲಕ ಬೆಳೆಗಳಿಗ ತಗಲುವ ಹಲವು ರೀತಿಯ ರೋಗಗಳನ್ನು ನಿಯಂತ್ರಿಸಬಹುದಾಗಿದೆ. ಮುಂಜಾನೆ ಮನೆಯಲ್ಲಿರುವ ಬೂದಿಯನ್ನು ಎರಚುವುದರ ಮೂಲಕ ಕೀಟಗಳನ್ನು ನಿಯಂತ್ರಿಸಬಹುದಾಗಿದೆ. ಅಲ್ಲದೆ, ಬೆಳೆಗಳ ಮೇಲೆ ಮುಳ್ಳಿನ ಸೊಪ್ಪನ್ನು ಎಳೆಯುವುದರಿಂದ ಬೆಳೆಗಳನ್ನು ತಿನ್ನುವಂತಹ ಕೀಟಗಳು ಕೆಳಗೆ ಬೀಳುತ್ತವೆ. ಪುನಃ ಅವುಗಳನ್ನು ಕಪ್ಪೆ ಇತ್ಯಾದಿಗಳು ತಿನ್ನುವುದರಿಂದ ಕೀಟ ಬಾಧೆಯನ್ನು ತಡೆಯಬಹುದಾಗಿದೆ. ಹೀಗೆ ಜೈವಿಕ ವಿಧಾನಗಳ ಮೂಲಕ ರೋಗಗಳನ್ನು ನಿಯಂತ್ರಿಸುವುದು ಬಹುಮುಖ್ಯ ವಿಧಾನವಾಗಿದೆ.

**೬. ಸ್ವಚ್ಚತೆ(Sanitation):** ರೈತರು ತಮ್ಮ ಹೊಲಗಳನ್ನು ಸ್ವಚ್ಚವಾಗಿ ನಿರ್ವಹಿಸುವುದು ಕೂಡ ಸಾವಯವ ಕೃಷಿಯ ಮತ್ತೊಂದು ಪ್ರಮುಖವಾದ ವಿಧಾನವಾಗಿದೆ. ಸ್ವಚ್ಚತೆಯು ರೈತರು ತಮ್ಮ ಜಮೀನುಗಳನ್ನು ಸಾಗುವಳಿ ಮಾಡಲು ಬಳಸುವ ಕೃಷಿ ಸಲಕರಣೆಗಳಿಗೂ ಸಂಬಂಧವಿರುತ್ತದೆ. ಸ್ವಚ್ಚತೆ ಹಲವಾರು ರೂಪಗಳಿಂದ ಕೂಡಿರುತ್ತದೆ.

- ಕೃಷಿ ಬೆಳೆಗಳ ಸುತ್ತ ಮುತ್ತ ಇರುವಂತಹ ಕಳೆಯನ್ನು ತೆಗೆದು ಹಾಕುವುದು ಹಾಗೂ ಹಾನಿಕಾರಕ ಕೀಟಗಳು ವಾಸಿಸಲು ಮಾಡಿಕೊಂಡಂತಹ ವಾಸ ಸ್ಥಾನವನ್ನು ನಾಶಪಡಿಸುವುದು.
- ರೈತರು ಕೃಷಿ ಉಪಕರಣಗಳನ್ನು ರಾಸಾಯನಿಕ ಕೃಷಿ ಚಟುವಟಿಕೆಗಳಲ್ಲಿ ಉಪಯೋಗಿಸಿದ್ದರೆ ಅವುಗಳನ್ನು ಸಂಪೂರ್ಣವಾಗಿ ತೊಳೆದು, ಅವುಗಳಲ್ಲಿ ಸಂಗ್ರಹವಾಗಿರುವಂತಹ ಕಳೆ ಬೀಜಗಳು, ರಾಸಾಯನಿಕ ಪದಾರ್ಥಗಳು ಸಾವಯವ ಭೂಮಿಗೆ ತಗುಲದಂತೆ ನೋಡಿಕೊಳ್ಳಬೇಕು.
- ಕೃಷಿ ಉಪಕರಣಗಳಿಗೆ ಸರಿಯಾದ ರೀತಿಯಲ್ಲಿ ಚಿಕಿತ್ಸೆ ಮಾಡುವುದರ ಮೂಲಕ ಸಾವಯವ ಕೃಷಿ ಕ್ಷೇತ್ರದಲ್ಲಿ ಬಳಸಬೇಕು.

ಹೀಗೆ ಉತ್ತಮ ಸಾವಯವ ರೈತ, ಸಾವಯವ ಕೃಷಿಯಲ್ಲಿ ಅನುಸರಿಸಬೇಕಾದ ವಿಧಾನದಲ್ಲಿ ಇದು ಸಹ ಅತ್ಯಂತ ಮಹತ್ವವಾದ ಅಂಶವಾಗಿದ್ದು ಮಾನವ ತನ್ನ ಮತ್ತು ಪ್ರಾಣಿಗಳ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳುತ್ತಾನೋ ಹಾಗೆ ಕೀಟ ಮತ್ತು ರೋಗ ಭಾದೆಯನ್ನು ಹತೋಟಿಗೆ ತರಲುಲ ನಿರಂತರವಾಗಿ ಕೃಷಿ ಭೂಮಿಯನ್ನು ಸ್ವಚ್ಚವಾಗಿ ಇಟ್ಟುಕೊಳ್ಳಬೇಕು.

**೭. ಮಲ್ಚಿಂಗ್ (Mulching):** ಸಾವಯವ ರೈತರು ಕೃಷಿ ಕಾರ್ಯಗಳನ್ನು ನಿರ್ವಹಿಸುವಂತಹ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಾನವಾಗಿದೆ. ಸಾಂಪ್ರದಾಯಕವಾಗಿ ಬೃಹತ್ ಪ್ರಮಾಣದಲ್ಲಿ ಸಾವಯವ ವಸ್ತುಗಳಾದ ಹಸಿರು ಮತ್ತು ಒಣಗಿದ ಹುಲ್ಲು, ಮರದ ತೌಡು ಮತ್ತು ಚೂರುಗಳು ಇತ್ಯಾದಿಗಳನ್ನು ಬೆಳೆಗಳಲ್ಲಿ ಉಪಯೋಗಿಸುವಂತಹ ವಿಧಾನವಾಗಿದೆ. ಮಣ್ಣಿನ ತೇವಾಂಶ ಮತ್ತು ಉಷ್ಣತೆಯನ್ನು ಕಾಯ್ದುಕೊಂಡು ಕಳೆಗಳನ್ನು ಹತೋಟಿಗೆ ತರುವುದು ಹಾಗೂ ಮಣ್ಣಿನ ಸಾವಯವ ಅಂಶಗಳನ್ನು ಒದಗಿಸುವಂತಹ ಒಂದು ಕಾರ್ಯಚಟುವಟಿಕೆಯನ್ನು ಎಂದು ಕರೆಯಲಾಗುತ್ತದೆ.

**೮. ಜೈವಿಕ ಗೊಬ್ಬರಗಳು:** ಜೈವಿಕ ಗೊಬ್ಬರಗಳು ಜೈವಿಕ ಉತ್ಪನ್ನಗಳಾಗಿದ್ದು ಬೆಳೆಗಳ ಇಳುವರಿಯನ್ನು ಹೆಚ್ಚಿಸುವಂತಹ ಅಮೂಲ್ಯ ಗುಣಗಳನ್ನು ಹೊಂದಿರುತ್ತವೆ. ಇವುಗಳು ಪರಿಸರ ಸ್ನೇಹ ಹಾನಿಕಾರಕವಲ್ಲದ ಮತ್ತು ಕಡಿಮೆ ವೆಚ್ಚದ ಜೈವಿಕ ಗೊಬ್ಬರಗಳಾಗಿದ್ದು, ಪ್ರಸ್ತುತ ದಿನಗಳಲ್ಲಿ ರಾಸಾಯನಿಕ ಗೊಬ್ಬರಗಳಿಗೆ ಪರ್ಯಾಯವಾಗಿ ಉಪಯೋಗಿಸುವುದು ಕಂಡುಬರುತ್ತದೆ. ಬಹುಮುಖ್ಯವಾದ ಜೈವಿಕ ಗೊಬ್ಬರಗಳೆಂದರೆ, ರೈಝೋಬಿಯಂ, ಅಝೋಟಬ್ಯಾಕ್ಟರ್, ಅಝೋಲ್ಲಾ, ಹಸಿರು-ನೀಲಿ ಅಲ್ಗಾ ಸೂಕ್ಷ್ಮಾಣು ಜೀವಿಗಳು. ಪಾಸ್ಫೇಟ್, ಸಾಲೋಬೊಲೈಜಿಂಗ್, ಸಸ್ಯಗಳ ಬೆಳವಣಿಗೆಗೆ ಉತ್ತೇಜನ ನೀಡುವ ರೈಝೋಬ್ಯಾಕ್ಟೀರಿಯಂ ಇತ್ಯಾದಿಗಳು, ಪ್ರತಿಯೊಂದು ಜೈವಿಕ ಸಂಪನ್ಮೂಲವು ಒಂದೊಂದು ರೀತಿಯ ಅನುಕೂಲವನ್ನು ಕೃಷಿ ಭೂಮಿಗೆ ಒದಗಿಸಿಕೊಡುತ್ತದೆ. ಆದ್ದರಿಂದ ರೈತರು ಇವುಗಳನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಂಡು ಬೆಳೇಗಳು ಸಮೃದ್ಧವಾಗಿ ಬೆಳೆದು ಅಧಿಕ ಇಳುವರಿ ಪಡೆಯಲು ಸಾಧ್ಯವಾಗುತ್ತದೆ.

**೯. ಜೀವಾಮೃತ:** ಜೀವಾಮೃತವು ರೈತರ ಬೆಳೆಗಳಿಗೆ ಔಷಧದ ಕೆಲಸದ ಜೊತೆಗೆ ಕೆಲವೊಂದು ರೋಗಗಳನ್ನು ಕೂಡ ನಿಯಂತ್ರಿಸುತ್ತದೆ. ಇಂತಹ ಜೀವಾಮೃತವನ್ನು ಆಕಳಿನ ಸಗಣಿ ೧೦ ಕಿಲೋ ಗಂಜಲ ೧೦ ಲೀಟರ್, ಬೆಲ್ಲ ೨ ಕಿಲೋ, ದ್ವಿದಳ ಧಾನ್ಯದ ಹಿಟ್ಟು ೨ ಕಿ ಸಾರಭರಿತ ಮೇಲ್ಮಣ್ಣು ಒಂದು ಹಿಡಿ ಇವುಗಳ ಮಿಶ್ರಣವನ್ನು ತೊಟ್ಟಿ ಅಥವ ಪ್ಲಾಸ್ಟಿಕ್‌ಡ್ರಮ್‌ನಲ್ಲಿ ಹಾಕಬೇಕು. ಇದಕ್ಕೆ ೨೦೦ ಲೀಟರ್ ನೀರನ್ನು ಕೂಡ ಹಾಕಬೇಕು. ಈ ದ್ರಾವಣವನ್ನು ಪ್ರತಿ ದಿನ ಪ್ರದಕ್ಷಿಣಾಕಾರವಾಗಿ ತಿರುಗಿಸಿದರೆ ಸುಮಾರು ಏಳನೇ ದಿವಸಕ್ಕೆ ಜೀವಾಮೃತ ಸಿದ್ಧವಾಗುತ್ತದೆ. ಇದನ್ನು ಕೊಟ್ಟಿಗೆ ಗೊಬ್ಬರದಲ್ಲಿ ಬೆರೆಸಿ ಬೆಳೆಗಳಿಗೆ ಕೊಡುವುದರಿಂದ ಫಸಲು ಸಮೃದ್ಧವಾಗಿ ಬೆಳೆಯುತ್ತದೆ ಅಥವಾ ಬೆಳೆಗೆ ಸಿಂಪರಣೆ ಮಾಡುವುದರಿಂದಲೂ ಯೋಗ್ಯ ಪರಿಣಾಮಗಳು ಉಂಟಾಗುತ್ತವೆ.

**೧೦. ಪಂಚಗವ್ಯ:** ಪಂಚಗವ್ಯವು ದೇಸಿ ಹಸುವಿನಿಂದ ಸಿಗುವ ಸಗಣಿ, ಗಂಜಲ, ಹಾಲು, ಮೊಸರು, ಮತ್ತು ತುಪ್ಪ ಈ ಐದು ವಸ್ತುಗಳಿಂದ ತಯಾರಿಸಲಾಗುತ್ತದೆ. ಇದನ್ನು ನೀರಿನೊಂದಿಗೆ ಸಮರ್ಪಕ ಪ್ರಮಾಣದಲ್ಲಿ ಬೆರಸಿ ಸಿಂಪರಣೆ ಮಾಡಬಹುದಾಗಿದೆ. ಬಿತ್ತನೆ ಬೀಜಗಳನ್ನು

ಇದರಲ್ಲಿ ನೆನೆಹಾಕಿ ನಂತರ ಬಿತ್ತನೆ ಮಾಡುವುದು ಅತ್ಯಂತ ಉತ್ತಮವಾದ ವಿಧಾನವಾಗಿದೆ. ಪಂಚಗವ್ಯ ತಯಾರಿಕೆಯಲ್ಲಿ ಬಳಸುವ ಪ್ರಮುಖ ವಸ್ತುಗಳೆಂದರೆ ತಾಜಾ ಸಗಣಿ ೫ ಕಿಲೊ. ಗಂಜಲ ೩ ಲೀಟರ್, ಹಸುವಿನ ಹಾಲು ೨ ಲೀಟರ್, ಮೊಸರು ೨ ಲೀಟರ್, ತುಪ್ಪ ೧/೨ ಕಿಲೊ, ಕಬ್ಬಿನ ಹಾಲು ೨ ಲೀಟರ್, ಬಾಳೆ ಹಣ್ಣು ೧೨ ಹಾಗೂ ನೀರು ೨ ಲೀಟರ್ ಬೆರೆಸಿ ತಯಾರಿಸಬೇಕು. ಒಂದು ಡ್ರಮ್‌ನಲ್ಲಿ ಸಗಣಿ ಹಾಗೂ ತುಪ್ಪವನ್ನು ಮೊದಲು ಹಾಕಿ ಮಿಶ್ರಣಮಾಡಬೇಕು. ನಾಲ್ಕನೆ ದಿನದ ನಂತರ ಉಳಿದ ಪದಾರ್ಥಗಳನ್ನು ಹಾಕಿ ಪ್ರತಿ ದಿನ ಬೆಳಿಗ್ಗೆ ಮತ್ತು ಸಂಜೆ ಕಲಕುವುದು ಹಾಗೂ ಡ್ರಮ್‌ನ ಬಾಯಿಗೆ ತೆಳುವಾದ ಬಟ್ಟೆಯನ್ನು ಕಟ್ಟಬೇಕು. ಈ ರೀತಿ ೧೮ ದಿನಗಳ ವರೆಗೆ ನಿರಂತರವಾಗಿ ಮಾಡಿದರೆ ಪಂಚಗವ್ಯ ಬಳಸಲು ಸಿದ್ಧವಾಗಿರುತ್ತದೆ. ಇದನ್ನು ಸೂಕ್ತ ಪ್ರಮಾಣದಲ್ಲಿ ನೀರಿನೊಂದಿಗೆ ಬೆರೆಸಿ ಬೆಳೆಗಳಿಗೆ ಕೊಡುತ್ತಿದ್ದರೆ ಬೆಳೆಗಳು ಅದ್ಭುತವಾಗಿ ಬೆಳೆಯುತ್ತವೆ. ಹೀಗೆ ಸಾವಯವ ಕೃಷಿಯನ್ನು ಅತ್ಯಂತ ಸುವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ಕಾರ್ಯಾಚರಣೆಯಲ್ಲಿ ತರಲು ಈ ಮೇಲಿನ ವಿಧಾನಗಳನ್ನು ಅನುಸರಿಸಬೇಕು. ಇದರಿಂದ ರೈತರು ತಮ್ಮ ಬೆಳೆಗಳಿಗೆ ಬೇಕಾದಂತಹ ಸಾವಯವ ಗೊಬ್ಬರಗಳನ್ನು ತಮ್ಮ ಸ್ವಂತ ಪ್ರಯತ್ನಗಳಿಂದ ತಯಾರಿಸಬಹುದು. ಅಲ್ಲದೆ ಅವರು ರಾಸಾಯನಿಕ ಒಳಸುರಿಗಳನ್ನು ಅವಲಂಬಿಸುವಂತಹ ಅಗತ್ಯತೆ ಇರುವುದಿಲ್ಲ. ಹೀಗೆ ಕಡಿಮೆ ಹಣದಿಂದ ತಮ್ಮ ಸುತ್ತಮುತ್ತಲೂ ಇರುವಂತಹ ಪರಿಸರವನ್ನು ಸಂರಕ್ಷಿಸಿಕೊಂಡು ಕೃಷಿ ಚಟುವಟಿಕೆಗಗಳನ್ನು ನಿರ್ವಹಿಸುವುದರ ಮೂಲಕ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ. ಇದೂ ಅಲ್ಲದೆ ಸಾವಯವ ಕೃಷಿ ನಿರ್ವಹಿಸಿಕೊಂಡು ಹೋಗಲು ಈಗಾಗಲೇ ವಿವರಿಸಿದ ವಿಧಾನ ಮತ್ತು ಒಳಸುರಿಗಳಲ್ಲದೆ, ಕಸಾಯಿ ಖಾನೆಯ ತ್ಯಾಜ್ಯಗಳು ನಗರ ಪಟ್ಟಣಗಳಲ್ಲಿ ದೊರೆಯುವ ಕಸಕಡ್ಡಿ(ಪ್ಲಾಸ್ಟಿಕ್, ಗಾಜು ಇತರ ಪದಾರ್ಥಗಳನ್ನು ಹೊರತುಪಡಿಸಿ.) ಚರಂಡಿಯ ಕೆಸರು, ಪ್ರಾಣಿಗಳ ಗೊರಸು, ಕೊಂಬು, ಎಲುಬು, ಪುರಸಭೆ, ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ದೇಶಿಯ ಮತ್ತು ಕೈಗಾರಿಕಾ ತ್ಯಾಜ್ಯಗಳಿಂದ ತಯಾರಿಸಿದ ಕಂಪೋಸ್ಟ್‌ಗೊಬ್ಬರಗಳು, ಬತ್ತದ ತೌಡು, ಮರಕೊರೆಯುವುದರಿಂದ ಬರುವ ತೌಡು ಬೆಳೆಗಳ ತ್ಯಾಜ್ಯ ಮತ್ತು ಅಪವ್ಯಯಗಳು, ಮರದ ಚಕ್ಕೆ, ರಂಬೆಗಳು, ಒಣಗಿದ ಎಲೆ ಇತ್ಯಾದಿಗಳನ್ನು ಕೂಡ ಕೃಷಿ ಚಟುವಟಿಕೆಗಳಲ್ಲಿ ಬಳಸಿಕೊಳ್ಳಬಹುದು. ಇವುಗಳ ಬಳಕೆಯಿಂದ ಪರಿಸರದ ಮೇಲೆ ಉಂಟಾಗುವ ಮಾರಕ ಪರಿಣಾಮಗಳನ್ನು ತಡೆಗಟ್ಟಬಹುದಲ್ಲದೆ ಸಾಗುವಳಿ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು. ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ಗೊಬ್ಬರ ಮತ್ತು ಔಷಧಿಗಳ ಬೆಲೆಗಳು ನಿರಂತರವಾಗಿ ಅಧಿಕವಾಗುತ್ತಿರುವುದಲ್ಲದೇ, ಅವುಗಳು ರೈತರಿಗೆ ಸಕಾಲದಲ್ಲಿ ದೊರೆಯುತ್ತಿಲ್ಲ. ಆದ್ದರಿಂದ ರೈತರು ಸಾವಯವ ಕೃಷಿ ಅನುಸರಿಸುವುದರ ಮೂಲಕ ಸ್ವಾವಲಂಬಿಗಳಾಗಿ ಕೃಷಿಯನ್ನು ನಿರ್ವಹಿಸಬಹುದಾಗಿದೆ.

**ಸಾವಯವ ಕೃಷಿಯ ಪ್ರೋತ್ಸಾಹ**

೨೦ನೇ ಶತಮಾನದ ಮಧ್ಯಭಾಗದವರೆಗೆ ರಾಸಾಯನಿಕ ಕೃಷಿಯು ಸಾಕಷ್ಟು ಜನಪ್ರಿಯವಾಯಿತು. ರೈತರು ತಮ್ಮ ಹೊಲಗದ್ದೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರ ಮತ್ತು ಔಷಧಿಗಳನ್ನು ಉಪಯೋಗಿಸಕೊಂಡು ಅತ್ಯಧಿಕ ಪ್ರಮಾಣದ ಉತ್ಪನ್ನ ಮತ್ತು ಆದಾಯವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು. ಆದರೆ ಇದು ಬಹಳ ಕಾಲ ಮುಂದುವರೆಯಲಿಲ್ಲ. ರಾಸಾಯನಿಕಗಳ ಅತಿಯಾದ ಬಳಕೆಯಿಂದ ರೈತರ ಕೃಷಿ ನಿರ್ವಹಣೆಯ ವೆಚ್ಚ ಅಧಿಕವಾಯಿತೆ ವಿನಹ ಅವರ ಬೆಳೆಗಳ ಇಳುವರಿ ಮಾತ್ರ ಹೆಚ್ಚಾಗಲಿಲ್ಲ ಅದು ಬಹಳಷ್ಟು ಕಡೆ ಸ್ಥಿರವಾಗಿದ್ದಲ್ಲದೆ, ಇಳಿಮುಖವಾಗುತ್ತಾ ಹೋಯಿತು. ಇದನ್ನು ಮನಗಂಡಂತಹ ರೈತರು ತಮ್ಮ ಕೃಷಿ ವ್ಯವಸ್ಥೆಯನ್ನು ಬದಲಾಯಿಸಿಕೊಳ್ಳಲು ಚಿಂತನೆ ಮಾಡಲು ಪ್ರಾರಂಭಿಸಿದರು.

ರಾಸಾಯನಿಕ ಕೃಷಿಯ ಹಾನಿಕಾರಕ ಪರಿಣಾಮಗಳನ್ನು ಯೂರೋಪಿನ ಕೆಲ ರೈತರು ೧೯೨೫ರಲ್ಲಿ ಚಿಂತನೆ ಮಾಡಲು ಪ್ರಾರಂಭಿಸಿದರು. ರಾಸಾಯನಿಕಗಳ ಉಪಯೋಗಗಳನ್ನು ಕಡಿಮೆ ಮಾಡಿ ಕೃಷಿ ಉತ್ಪಾದನೆ ಮಾಡಲು ಜೀವ ಚೈತನ್ಯ ಸಂಘಗಳನ್ನು ರೈತರು ಕಟ್ಟಿಕೊಂಡರು. ಹೀಗೆ ಸಾವಯವ ಕೃಷಿಯನ್ನು ಜೀವ ಚೈತನ್ಯ ಎಂಬುವುದರ ಮೂಲಕ ಪ್ರಚಾರ ಮಾಡಲು ರೈತರು ಆರಂಭಿಸಿದರು. ಇದಕ್ಕೆ ಒಂದು ನಿರಂತರ ಚಳುವಳಿಯ ರೂಪವನ್ನು ನೀಡಲು ಹಲವು ರೈತರು ಪ್ರಯತ್ನ ಮಾಡಿದರು. ಇದರ ಫಲವಾಗಿ ಹುಟ್ಟಿಕೊಂಡಂತಹ ಸಂಸ್ಥೆ

ಅಂತರರಾಷ್ಟ್ರೀಯ ಸಾವಯವ ಕೃಷಿ ಆಂದೋಲನ ಸಂಸ್ಥೆ (IFOAM-International Federation on Organic Agriculture Movement). ಇದು ೧೯೭೨ ರಲ್ಲಿ ಜರ್ಮನಿಯಲ್ಲಿ ಪ್ರಾರಂಭವಾಯಿತು.

**ಅಂತರರಾಷ್ಟ್ರೀಯ ಸಾವಯವ ಕೃಷಿ ಆಂದೋಲನ ಸಂಸ್ಥೆ (IFOAM)**

ಇದು ಸರ್ಕಾರೇತರ ಸಂಸ್ಥೆಯಾಗಿದ್ದು ಜಾಗತಿಕ ಮಟ್ಟದಲ್ಲಿ ಸಾವಯವ ಕೃಷಿಯನ್ನು ಪ್ರಚಾರಗೊಳಿಸುವ ಉದ್ದೇಶದಿಂದ ಪ್ರಾರಂಭವಾಗಿದೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳಿಂದ ಆಗುವಂತಹ ಪರಿಣಾಮಗಳನ್ನು ಜಾಗೃತಿ ಮೂಡಿಸುವುದು. ಅವರಲ್ಲಿ ಪರಿವರ್ತನೆಯನ್ನು ತಂದು ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಲು ಯೋಗ್ಯವಾದ ಮಾಹಿತಿಯನ್ನು ಇದು ನೀಡುತ್ತದೆ. ಅಲ್ಲದೆ ಸಾವಯವ ವಿಧಾನಗಳನ್ನು ಅನುಸರಿಸಲು ರೈತರಿಗೆ ಜಾಗತಿಕ ಮಟ್ಟದಲ್ಲಿ ಕಾರ್ಯಗಾರಗಳು, ಉಪನ್ಯಾಸ, ಚರ್ಚೆ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಾಡು ಮಾಡುತ್ತದೆ. ಇದು ಒಂದು ಲಾಭರಹಿತ ಸಂಸ್ಥೆಯಾಗಿದ್ದು ರೈತರಿಗೆ ಬೇಕಾದ ಅಗತ್ಯ ನೆರವನ್ನು ನೀಡುತ್ತದೆ.

**IFOAM ಸಂಸ್ಥೆಯ ಗುರಿಗಳು**

ಈ ಸಂಸ್ಥೆಯು ಕೆಲವೊಂದು ಪ್ರಮುಖ ಗುರಿಗಳನ್ನು ಹೊಂದಿದೆ. ಅವುಗಳು;

- ಜಾಗತಿಕ ಮಟ್ಟದಲ್ಲಿ ಸಾವಯವ ಕೃಷಿ ಬೆಳವಣಿಗೆಗೆ ಒಂದು ವೇದಿಕೆಯನ್ನು ನಿರ್ಮಾಣ ಮಾಡುವುದು.
- ಸಾವಯವ ತತ್ವಗಳನ್ನು ಸಮರ್ಥಿಸಿಕೊಳ್ಳುವುದು, ತಿಳಿಸಿಕೊಡುವುದು ಮತ್ತು ಅವುಗಳನ್ನು ಅಭಿವೃದ್ಧಿಪಡಿಸುವುದು.
- ಸಾವಯವ ಕೃಷಿ ವಿಧಾನಗಳನ್ನು ಪ್ರತಿಪಾದಿಸುವುದು ಮತ್ತು ಅಳವಡಿಸಿಕೊಳ್ಳಲು ಬೇಕಾದ ಸೌಲಭ್ಯಗಳನ್ನು ಕಲ್ಪಿಸುವುದು.
- ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆಯ ಅಭಿವೃದ್ಧಿ ಮತ್ತು ಉತ್ತೇಜನ
- ಸುಸ್ಥಿರ ಮತ್ತು ಸಾಕಷ್ಟು ಸಂಪನ್ಮೂಲಗಳೊಂದಿಗೆ ಪರಿಣಾಮಕಾರಿಯಾಗಿ ಸಾವಯವ ಸಂಸ್ಥೆಯನ್ನು ನಿರ್ಮಾಣ ಮಾಡುವುದು.

ಈ ಗುರಿಗಳೊಂದಿಗೆ ಪ್ರಗತಿಪರ ಚಿಂತಕರು, ಕೃಷಿವಿಜ್ಞಾನಿಗಳು, ರೈತರು ಸಂಶೋಧಕರು, ಸಮಾಜ ಸುಧಾರಕರು ಇತ್ಯಾದಿಯವರನ್ನೆಲ್ಲಾ ಒಳಗೊಂಡಂತೆ ಜಾಗತಿಕ ಮಟ್ಟದಲ್ಲಿ ಸಾವಯವ ಕೃಷಿಯನ್ನು ಜನಪ್ರಿಯಗೊಳಿಸುವುದು ಹಾಗೂ ರಾಸಾಯನಿಕ ಕೃಷಿಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಿಳಿಸಿಕೊಡಲು ಸ್ಥಾಪಿತವಾಗಿದೆ.

**ತತ್ವಗಳು**

ಈ ತತ್ವಗಳು ಸಾವಯವ ಕೃಷಿಯು ಬೆಳವಣಿಗೆ ಹೊಂದಲು ಅತ್ಯಂತ ಪ್ರಮುಖವಾದಂತವುಗಳು. ಅವುಗಳೆಂದರೆ:

೧. ಆರೋಗ್ಯ ತತ್ವ (Principle of Health)

೨. ಜೀವರಾಶಿ ತತ್ವ (Principle of Ecology)

೩. ನ್ಯಾಯಯುತ ತತ್ವ (Principle of Fairne)

೪. ಸುರಕ್ಷತೆಯ ತತ್ವ (Principle of Care)

ಸಾವಯವ ಕೃಷಿಯು ಮಣ್ಣು, ಸಸ್ಯವರ್ಗ, ಮಾನವ ಮತ್ತು ಎಲ್ಲಾ ಜೀವ ಜಗತ್ತಿನ ಆರೋಗ್ಯ ಸಂರಕ್ಷಣೆ ಮಾಡುತ್ತದೆ. ಸಕಲ ಜೀವರಾಶಿಯು ಸಂಪೂರ್ಣವಾಗಿ ಪರಸ್ಪರ ಸಹಕಾರದಿಂದ ಕಾರ್ಯನಿರ್ವಹಿಸುತ್ತಿರುವುದು. ಮತ್ತು ಅವುಗಳ ಸುರಕ್ಷತೆಯ ಬೆಳವಣಿಗೆಗೆ ಸಾಮಾನ್ಯ ಪರಿಸರ ಮತ್ತು ಜೀವನಾವಕಾಶಗಳೊಂದಿಗೆ ಪರಸ್ಪರ ನ್ಯಾಯಯುತವಾದ ಹಾಗೂ ಮುಕ್ತ ಸಂಬಂಧವನ್ನು ಕಲ್ಪಿಸಿಕೊಡುವುದು. ಕೊನೆಯದಾಗಿ ಸಾವಯವ ಕೃಷಿಯು ಪ್ರಸ್ತುತ ಮತ್ತು ಭವಿಷ್ಯದ ಸಕಲ ಜೀವರಾಶಿಗಳಿಗೆ ಸಂಪನ್ಮೂಲಗಳ ಸಂರಕ್ಷಣೆ ಮಾಡಿಕೊಂಡು, ಆರೋಗ್ಯ ಮತ್ತು ಉತ್ತಮ ರಕ್ಷಣೆಯನ್ನು ಒದಗಿಸುವುದು. ಹೀಗೆ ಸಾವಯವ ಕೃಷಿಯು ಅತ್ಯಂತ ವಿಶಾಲವಾದ ಪರಿಕಲ್ಪನೆಯಾಗಿದ್ದು ಕೇವಲ ಭೂಮಿ ಮತ್ತು ಇತರ ಜೀವರಾಶಿಯನ್ನು ಕೇವಲ ವ್ಯವಹಾರಿಕವಾಗಿ ಮಾನವ ತನ್ನ ಕಲ್ಯಾಣಕ್ಕಾಗಿ ಉಪಯೋಗಿಸಿಕೊಳ್ಳುವುದಕ್ಕೆ ಸೀಮಿತವಾಗಿರಬಾರದೆಂದು ತಿಳಿಸುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಆರಂಭವಾದ ಸಾವಯವ ಆಂದೋಲನವು ಇಮದು ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಸಾವಯವ ಕೃಷಿ ತನ್ನ ಜನಪ್ರಿಯತೆಗಳಿಸಲು ಸಹಾಯಕವಾಗಿದೆ.

**ಸಾವಯವ ಕೃಷಿ ಉತ್ಪಾದನೆ**

ಇತ್ತೀಚಿನ ದಿನಗಳಲ್ಲಿ ಗ್ರಾಹಕರಲ್ಲಿಯೂ ಕೂಡ ಸಾಕಷ್ಟು ಜಾಗೃತಿ ಉಂಟಾಗಿರುವುದರಿಂದ ಅವರು ಕೂಡ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಬಳಕೆಯಿಂದ ಉತ್ಪಾದಿಸಿದ ವಸ್ತುಗಳಿಗೆ ಬದಲಾಗಿ ಸಾವಯವ ಉತ್ಪನ್ನಗಳನ್ನು ಕೊಂಡುಕೊಳ್ಳಲು ಪ್ರಾರಂಭಿಸಿದ್ದಾರೆ. ಮುಂದುವರಿದ ರಾಷ್ಟ್ರಗಳಾದ ಅಮೇರಿಕ ಸಂಯುಕ್ತ ಸಂಸ್ಥಾನ, ಕೆನಡ, ಆಸ್ಟ್ರೇಲಿಯ, ಜಪಾನ್, ಇಂಗ್ಲೆಂಡ್‌ಹಾಗೂ ಯೂರೋಪಿನ ಆರ್ಥಿಕ ಒಕ್ಕೂಟ ಸದಸ್ಯ ರಾಷ್ಟ್ರಗಳಲ್ಲಿ ಅತಿ ಹೆಚ್ಚು ಜನರು ಸಾವಯವ ವಸ್ತುಗಳನ್ನು ಕೊಂಡುಕೊಂಡು ಅನುಭೋಗಿಸಲು ಪ್ರಾರಂಭಿಸಿದ್ದಾರೆ. ಇದರ ಜೊತೆಗೆ ಅಭಿವೃದ್ಧಿಶೀಲ ರಾಷ್ಟ್ರಗಳಾದ, ಭಾರತ, ಚೀನಾ ಈಜಿಪ್ಟ್‌ಇತ್ಯಾದಿ ರಾಷ್ಟ್ರಗಳಲ್ಲಿಯೂ ಕೂಡ ಅಸಾವಯವ ಉತ್ಪನ್ನಗಳ ಅಪಾಯಕಾರಿ ಪರಿಣಾಮಗಳ ತಿಳುವಳಿಕೆಯಿಂದ ಜನರು ಸಾವಯವ ಉತ್ಪನ್ನಗಳಿಗೆ ಹೆಚ್ಚು ಮರು ಹೋಗುತ್ತಿರುವುದು ಕಂಡುಬರುತ್ತದೆ. ಹೀಗಾಗಿ ಸಾವಯವ ಕೃಷಿ ಮತ್ತು ಉತ್ಪಾದನೆ ಕೇವಲ ಮುಂದುವರಿದ ರಾಷ್ಟ್ರಗಳಿಗೆ ಸೀಮಿತವಾಗಿರುವುದಿಲ್ಲ. ಇಂದು ಅಭಿವೃದ್ಧಿ ಹೊಂದುತ್ತಿರುವ ಏಷ್ಯ, ಆಫ್ರಿಕಾ ಖಂಡದ ಹಲವು ರಾಷ್ಟ್ರಗಳು ಕೂಡ ಸಾವಯವ ಕೃಷಿಯನ್ನು ಪ್ರೋತ್ಸಾಹಿಸುವುದರ ಜೊತೆಗೆ ಉತ್ಪಾದನೆಯನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿವೆ. ಮೇಲಾಗಿ ಪಾಶ್ಚಿಮಾತ್ಯ ರಾಷ್ಟ್ರಗಳ ಒಟ್ಟು ಕೃಷಿ ಭೂಮಿಯ ಶೇ. ೧.೭ರಷ್ಟನ್ನು ರಾಸಾಯನಿಕ ಕೃಷಿಯಿಂದ ಸಾವಯವ ಕೃಷಿಗೆ ಪರಿವರ್ತಿಸುವುದು ಬರದಿಂದ ಸಾಗುತ್ತಿದೆ.

ಹಲವು ರೈತರು ಸ್ವಿಇಚ್ಛೆಯಿಂದ ತಮ್ಮ ಕುಟುಂಬದ ಸದಸ್ಯರ ಆರೋಗ್ಯ ಪಶುಸಂಪತ್ತಿನ ಸಂರಕ್ಷಣೆಯ ದೃಷ್ಟಿಯಿಂದ, ತಮ್ಮ ಕೃಷಿಭೂಮಿಯನ್ನು ರಾಸಾಯನಿಕ ವಿಧಾನಗಳಿಂದ ಸಾವಯವ ವಿಧಾನಗಳಿಗೆ ಪರಿವರ್ತಿಸಿಕೊಳ್ಳುವುದು ವಿಶ್ವದ ಹಲವು ಭಾಗಗಳಲ್ಲಿ ಪ್ರಾರಂಭವಾಗಿದೆ. ಈ ರೀತಿಯ ಪರಿವರ್ತನೆಯಿಂದ ಬೆಳೆಗಳ ಇಳುವರಿ ಕುಂಠಿತವಾಗಿ ವಿಶ್ವದಲ್ಲಿ ಆಹಾರದ ಸಮಸ್ಯೆ ಉಂಟಾಗುತ್ತದೆ ಎಂದು ಹಲವು ತಜ್ಞರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದಾರೆ. ಆದರೆ ಇನ್ನು ಕೆಲವು ತಜ್ಞರ ಪ್ರಕಾರ ಸಾವಯವ ವಿಧಾನವು ಇಳುವರಿಯನ್ನು ನಿಧಾನವಾಗಿ ಹೆಚ್ಚಿಸುತ್ತದೆಯಲ್ಲದೆ ಕೃಷಿಚಟುವಟಿಕೆಗಳನ್ನು ಸುಸ್ಥಿರವಾಗಿ ನಿರ್ವಹಿಸಬಹುದು ಎಂದು ತಿಳಿಸುತ್ತಾರೆ. ಸಾವಯವ ಕೃಷಿಯು ಪ್ರಸ್ತುತ ಕೃಷಿವಲಯದಲ್ಲಿರುವ ಗಂಭೀರ ಸಮಸ್ಯೆಗಳನ್ನು ನಿವಾರಣೆ ಮಾಡಿ ರೈತರಿಗೆ ಆಕರ್ಷಕ ಪ್ರತಿಫಲ ದೊರಕಿಸುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

# ಸಾವಯವ ಕೃಷಿ ಒಂದು ವಿಶ್ಲೇಷಣೆ (3)

ವಿಶ್ವದಲ್ಲಿ ವಿವಿಧ ರಾಷ್ಟ್ರಗಳು ಯಾವ ಪ್ರಮಾಣದಲ್ಲಿ ತಮ್ಮ ಕೃಷಿಭೂಮಿಯನ್ನು ಸಾವಯವ ಕೃಷಿಗೆ ಪರಿವರ್ತಿಸಿವೆ ಎಂಬುದನ್ನು ಈ ಕೆಳಗಿನ ಕೋಷ್ಟಕದಿಂದ ತಿಳಿದುಕೊಳ್ಳಬಹುದಾಗಿದೆ.

**ಸಾವಯವ ಕೃಷಿಗೆ ಒಳಪಡಿಸಿದ ಸಾಗುವಳಿ ಭೂಮಿಯ ಪ್ರಮಾಣ**

| **ಕ್ರ. ಸಂ.** | **ಅಧಿಕ ಆದಾಯದ ಆರ್ಥಿಕತೆಯ ರಾಷ್ಟ್ರಗಳು** | **ಸಾವಯವ ಕೃಷಿಗೆಒಳಪಟ್ಟ ಪ್ರದೇಶ (ಹೆಕ್ಟೇರ್ ಗಳಲ್ಲಿ)** |
|---|---|---|
| ೧ | ಆಸ್ಟ್ರೀಯ | ೩೪೪೯೧೬ |
| ೨ | ಸ್ವಿಜ್ಜರ್ ಲ್ಯಾಂಡ್ | ೧೨೧೩೮೭ |
| ೩ | ಇಟಲಿ | ೯೫೪೩೬೭ |
| ೪ | ಫಿನ್ ಲ್ಯಾಂಡ್ | ೧೬೨೦೨೪ |
| ೫ | ಡೆನ್ಮಾರ್ಕ | ೧೫೪೯೨೧ |
| ೬ | ಸ್ವೀಡನ್ | ೨೦೬೫೨೪ |
| ೭ | ಇಂಗ್ಲೆಂಡ್ | ೬೯೦೨೭೦ |
| ೮ | ಜರ್ಮನಿ | ೭೬೭೮೯೧ |
| ೯ | ನಾರ್ವೇ | ೪೧೦೩೫ |
| ೧೦ | ಆಸ್ಟ್ರೇಲಿಯ | ೧೧೮೦೦೦೦ |
| ೧೧ | ನೆದರ್ ಲ್ಯಾಂಡ್ | ೪೮೧೫೨ |
| ೧೨ | ಸ್ಪೇನ್ | ೭೩೩೧೮೨ |
| ೧೩ | ಬೆಲ್ಜಿಯಂ | ೨೩೭೨೮ |
| ೧೪ | ಜಪಾನ್ | ೨೯೧೫೧ |
| ೧೫ | ಫ್ರಾನ್ಸ್ | ೫೩೪೦೩೭ |

**ಮೇಲಿನ ಮಧ್ಯಮ ಆದಾಯದ ಆರ್ಥಿಕತೆಯ ರಾಷ್ಟ್ರಗಳು**

| | | |
|---|---|---|
| ೧೬ | ಅರ್ಜೆಂಟೈನಾ | ೩೦೦೦೦೦೦ |
| ೧೭ | ಹಂಗೇರಿ | ೧೨೮೬೯೦ |
| ೧೮ | ಚಿಲಿ | ೬೩೯೨೦೦ |

**ಮಧ್ಯಮ ಆದಾಯ ಹೊಂದಿದ ಆರ್ಥಿಕತೆಯ ರಾಷ್ಟ್ರಗಳು**

| | | |
|---|---|---|
| ೧೯ | ಚೀನಾ | ೧೩೦೦೦೦೦ |
| ೨೦ | ಈಜಿಪ್ಟ್ | ೨೪೪೫೮ |
| ೨೧ | ಶ್ರೀಲಂಕ | ೧೫೩೭೯ |

**ಕಡಿಮೆ ಆದಾಯ ಹೊಂದಿದ ಆರ್ಥಿಕತೆಯ ರಾಷ್ಟ್ರಗಳು**

| | | |
|---|---|---|
| ೨೨ | ಭಾರತ | ೧೧೪೦೩೭ |
| ೨೩ | ಪಾಕಿಸ್ತಾನ | ೨೦೩೧೧ |
| ೨೪ | ಬಾಂಗ್ಲದೇಶ | ೧೭೭೭೭೦ |
| ೨೫ | ಕ್ಯಾಮಾರೂನ್ | ೭೦೦೦ |

(ಈ ಅಂಕಿ-ಅಂಶಗಳನ್ನು Yousuffi and Miller, ೨೦೦೭,೨೦೦೮ ನಿಂದ ಪಡೆದುಕೊಳ್ಳಲಾಗಿದೆ.)

ಈ ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ ಅತಿ ಹೆಚ್ಚು ಆದಾಯ ಹೊಂದಿದ ರಾಷ್ಟ್ರಗಳಲ್ಲದೆ, ಅತಿ ಹೆಚ್ಚು ಆದಾಯ ಹೊಂದಿದ ಮಧ್ಯಮಹಂತದಲ್ಲಿರುವ, ಮಧ್ಯಮ ಆದಾಯ ಹೊಂದಿದ ಹಾಗೂ ಕಡಿಮೆ ಆದಾಯ ಹೊಂದಿದ ರಾಷ್ಟ್ರಗಳಲ್ಲಿಯೂ ಕೂಡ ಬೃಹತ್‌ಪ್ರಮಾಣದಲ್ಲಿ ಕೃಷಿ ಭೂಮಿಯನ್ನು ಸಾವಯವ ಬೇಸಾಯಕ್ಕೆ ಪರಿವರ್ತಿಸುವುದು ಕಂಡುಬರುತ್ತದೆ.

ತಮ್ಮ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಸಾವಯವ ಕೃಷಿಗೆ ಹೆಚ್ಚು ಭೂಮಿಯನ್ನು ಪರಿವರ್ತಿಸಿದ ಉನ್ನತ ಸ್ಥಾನದಲ್ಲಿರುವ ೧೦ ರಾಷ್ಟ್ರಗಳನ್ನು ಪಟ್ಟಿ ಮಾಡಬಹುದು. ಇವುಗಳು ಅತಿ ಹೆಚ್ಚು ಶೇಕಡವಾರು ಸಾವಯವ ಸಾಗುವಳಿ ಭೂಮಿಯನ್ನು ಹೊಂದಿದ ಪ್ರಮುಖ ರಾಷ್ಟ್ರಗಳು (೨೦೦೬).

| **ಕ್ರ. ಸಂ** | **ರಾಷ್ಟ್ರಗಳು** | **ಸಾವಯವದ ಅಡಿಯಲ್ಲಿರುವ ಶೇಖಡವಾರು ಕೃಷಿಭೂಮಿ** |
|---|---|---|
| ೧ | ಲಿಚೆಸ್ಟನ್ | ೨೬.೪೦ |
| ೨. | ಆಸ್ಟ್ರೀಯ | ೧೩.೫೩ |
| ೩. | ಸ್ವಿಟ್ಜರ್ ಲ್ಯಾಂಡ್ | ೧೧.೩೩ |
| ೪. | ಫಿನ್‌ಲ್ಯಾಂಡ್ | ೭.೩೧ |
| ೫. | ಸ್ವೀಡನ್ | ೬.೮೦ |
| ೬. | ಇಟಲಿ | ೬.೨೨ |
| ೭. | ಝೆಕ್‌ಗಣರಾಜ್ಯ | ೬.೦೯ |
| ೮. | ಡೆನ್ಮಾರ್ಕ್ | ೫.೭೬ |
| ೯. | ಪೋರ್ಚುಗಲ್ | ೫.೪೨ |
| ೧೦. | ಈಸ್ಟೋನಿಯ | ೫.೧೭ |

**ಖಂಡವಾರು ಸಾವಯವ ಕೃಷಿಯ ಶೇಖಡವಾರು ಪ್ರಮಾಣ**

| ಕ್ರ. ಸಂ. | ಖಂಡ | ಒಟ್ಟು ಸಾವಯವ ಹಿಡುವಳಿಗಳು (ಶೇಖಡವಾರು) |
|---|---|---|
| ೧ | ದಕ್ಷಿಣ ಅಮೇರಿಕ | ೩೧ |
| ೨ | ಯೂರೋಪ್ | ೨೬ |
| ೩ | ಏಷ್ಯ | ೨೧ |
| ೪ | ಆಫ್ರಿಕಾ | ೧೮ |
| ೫ | ಉತ್ತರ ಅಮೇರಿಕ | ೨.೦ |
| ೬ | ಆಸ್ಟ್ರೇಲಿಯ (ceania) | ೧.೦ |

ಈ ಮೇಲಿನ ಕೋಷ್ಟಕಗಳಿಂದ ತಿಳಿದುಬರುವ ಪ್ರಮುಖ ಅಂಶಗಳೆಂದರೆ ಯೂರೋಪ್ಖಂಡದಲ್ಲಿರುವ ಬಹಳಷ್ಟು ಮುಂದುವರಿದ ರಾಷ್ಟ್ರಗಳು ತಮ್ಮಲ್ಲಿರುವ ರಾಸಾಯನಿಕ ಕೃಷಿ ಭೂಮಿಯನ್ನು ಸಾವಯವ ವಿಧಾನಗಳಿಗೆ ವ್ಯಾಪಕವಾಗಿ ಒಳಪಡಿಸುವುದು ಕಂಡುಬರುತ್ತದೆ. ಅದರಂತೆ ನಾವು ಖಂಡವಾರು ಸಾಗುವಳಿ ಹಿಡುವಳಿಗಳನ್ನು ಗಮನಿಸಿದಾಗ ಅತಿ ಹೆಚ್ಚಿನ ಪ್ರಮಾಣದ ಸಾಗುವಳಿ ಭೂಮಿಯನ್ನು ಪರಿವರ್ತಿಸುವಂತಹದ್ದು ದಕ್ಷಿಣಾಮೇರಿಕ ಖಂಡದಲ್ಲಿ ಕಂಢುಬರುತ್ತದೆ. ಏಕೆಂದರೆ ಈ ಖಂಡದಲ್ಲಿರುವ ರಾಷ್ಟ್ರಗಳು ಪರಿಸರ ಸಹ್ಯ ಕೃಷಿಯ ಪ್ರಯೋಜನವನ್ನು ಹೊಂದಿರುವುದರ ಜೊತೆಗೆ, ಅಲ್ಲಿ ಶಿಕ್ಷಣ ಮತ್ತು ವಿಸ್ತರಣೆಗೆ ಸಂಬಂಧಿಸಿದಂತೆ ವ್ಯಾಪಕ ಕ್ರಮಗಳನ್ನು ಕೈಗೊಳ್ಳುತ್ತಿವೆ. ಆದ್ದರಿಂದ ಇತರ ಎಲ್ಲಾ ಖಂಡಗಳಿಗಿಂತ ಲ್ಯಾಟಿನ್ಅಮೇರಿಕ ಖಂಡದಲ್ಲಿ ಸಾವಯವ ಕೃಷಿಯ ಬೆಳವಣಿಗೆಯ ದರ ಅತ್ಯಂತ ತೀವ್ರವಾಗಿರುತ್ತದೆ. ಪ್ರದೇಶವಾರು ಸಾಗುವಳಿ ಕೃಷಿಗೆ ಸಂಬಂಧಿಸಿದಂತೆ ಯೂರೋಪ್ದ್ವಿತೀಯ ಸ್ಥಾನದಲ್ಲಿರುವುದು ಅದರ ಶೇಕಡವಾರು ಪ್ರಮಾಣದಿಂದ ಕಂಡುಬರುತ್ತದೆ. ಓಶೀನಿಯಾದಲ್ಲಿ ಶೇಕಡವಾರು ಪ್ರದೇಶ ಸಾವಯವ ವ್ಯಾಪ್ತಿಗೆ ಒಳಪಟ್ಟಿರುವುದು ಬಹಳ ಕಡಿಮೆಯಿರುತ್ತದೆ. ಹೀಗೆ ಸಾವಯವ ಕೃಷಿ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಪ್ರಮಾಣದಲ್ಲಿ ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ವಿಸ್ತರಿಸಲ್ಪಡುತ್ತಿದೆ.

**ಪ್ರಮುಖ ಸಾವಯವ ಉತ್ಪನ್ನಗಳು**

ಆರೋಗ್ಯ ಮತ್ತು ಸುರಕ್ಷತೆಯ ಕಾರಣಗಳಿಂದಾಗಿ ಜನರು ಸಾವಯವ ಉತ್ಪನ್ನಗಳನ್ನು ಉಪಯೋಗಿಸುವುದು ಪ್ರಾರಂಭವಾಗಿದೆ. ಇಂದು ಸಾಕಷ್ಟು ಪ್ರಮಾಣದಲ್ಲಿ ಸಾವಯವ ವಸ್ತುಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ಅಂತಹ ಪ್ರಮುಖ ಉತ್ಪನ್ನಗಳೆಂದರೆ, ಹಣ್ಣು ತರಕಾರಿಗಳು, ಆಹಾರ ಧಾನ್ಯಗಳು, ಸಾವಯವ ಹತ್ತಿ ಮತ್ತು ಅದರ ಉತ್ಪನ್ನಗಳು, ಮಾಂಸ ಮತ್ತು ಮಾಂಸದ ಪದಾರ್ಥಗಳು, ಹಾಲು ಮತ್ತು ಹಾಲಿನ ಉತ್ಪನ್ನಗಳು ಇತ್ಯಾದಿ. ಈ ಎಲ್ಲಾ ಸಾವಯವ ಉತ್ಪನ್ನಗಳಿಗೆ ವಿಶ್ವದಾದ್ಯಂತಹ ಅತೀ ಹೆಚ್ಚು ಬೇಡಿಕೆ ಇದೆ. ಇವುಗಳ ಬೆಲೆಗಳು, ರಾಸಾಯನಿಕದಿಂದ ಉತ್ಪಾದಿಸಲ್ಪಟ್ಟ ಉತ್ಪನ್ನಗಳಿಗಿಂತ ದುಪ್ಪಟ್ಟು ಬೆಲೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿರುತ್ತದೆ.

ನಿಸ್ಸಂಕೋಚವಾಗಿ, ಸಾವಯವ ಉತ್ಪನ್ನಗಳಿಗೆ ವಿಶ್ವಮಾರುಕಟ್ಟೆಯಲ್ಲಿ ಅತೀ ಹೆಚ್ಚು ಬೆಲೆ ಇರುವುದಲ್ಲದೆ, ಅವುಗಳಿಗೆ ವ್ಯಾಪಕವಾದಂತಹ ಬೇಡಿಕೆಯು ಕೂಡ ಇದೆ. ಹಾಗಾದರೆ ಸಾವಯವ ವಸ್ತುಗಳನ್ನು ಗುರುತಿಸುವುದು ಹೇಗೆ? ಸಾವಯವ ಮತ್ತು ರಾಸಾಯನಿಕ ಉತ್ಪನ್ನಗಳನ್ನು ಹೇಗೆ ಪ್ರತ್ಯೇಕಿಸಬೇಕು? ಸಾವಯವ ಎಂದು ದೃಢೀಕರಿಸಬೇಕಾದರೆ ರೈತರು ಯಾವ ವಿಧಾನಗಳನ್ನು ಅನುಸರಿಸಬೇಕು? ಎಂಬ ಹಲವು ಸಮಸ್ಯೆಗಳು ಉದ್ಭವಿಸುತ್ತದೆ. ಈ ಸಮಸ್ಯೆ ಮತ್ತು ಗೊಂದಲಗಳನ್ನು ನಿವಾರಿಸಲು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಂಸ್ಥೆಗಳು ಕಾರ್ಯನಿರತವಾಗಿದೆ.

**ಸಾವಯವ ಉತ್ಪನ್ನಗಳ ದೃಢೀಕರಣ ವಿಧಾನ**

ಸಾವಯವ ಉತ್ಪನ್ನಗಳು ಅತ್ಯಂತ ಆಕರ್ಷಕವಾಗಿ, ತಾಜಾತನದಿಂದ ಕಂಡು ಬಂದರೂ ಸಹ ರಾಸಾಯನಿಕಗಳಿಂದ ಉತ್ಪಾದಿಸಲ್ಪಟ್ಟ ಉತ್ಪನ್ನಗಳ ಮಧ್ಯ ವ್ಯತ್ಯಾಸ ಕಲ್ಪಿಸುವುದು ಬಹಳ ಕಷ್ಟಕರವಾಗಿರುತ್ತದೆ. ಈ ಕಾರಣದಿಂದಾಗಿ ಸಾವಯವ ಉತ್ಪನ್ನ ವಿಧಾನಗಳಿಗೆ ದೃಢೀಕರಣ ಮಾಡುವುದು ಅತ್ಯಂತ ಸೂಕ್ತವಾದುದ್ದು ಸಮಂಜಸವಾಗಿರುತ್ತದೆ. ವಿವಿಧ ರಾಷ್ಟ್ರಗಳು ವಿವಿಧ ರೀತಿಯ ದೃಢೀಕರಣ ವಿಧಾನಗಳನ್ನು ಅಭಿವೃದ್ಧಿಪಡಿಸಿ ಅವುಗಳನ್ನು ಅಳವಡಿಸಿಕೊಂಡಿವೆ. ಅವುಗಳನ್ನು ಅನುಸರಿಸುವ ವಿಧಾನಗಳಲ್ಲಿ ಸಾಕಷ್ಟು ಭಿನ್ನತೆ ಇದ್ದರೂ- ಅವುಗಳಲ್ಲಿ ಕೆಲವೊಂದು ಸಾಮಾನ್ಯವಾದ ನಿಯಮಗಳನ್ನು ಪ್ರತಿಯೊಂದು ಸಂಸ್ಥೆಯು ಅನುಸರಿಸಿಕೊಂಡು ಬರುತ್ತದೆ. ಸಾವಯವ ಉತ್ಪನ್ನದ ದೃಢೀಕರಣದಲ್ಲಿ ನಿರತವಾಗಿರುವ ಅಂತರ್ ರಾಷ್ಟ್ರೀಯ ಸಂಸ್ಥೆಗಳು ತಮ್ಮ ಕಛೇರಿಯನ್ನು ಭಾರತದಲ್ಲಿ ಆರಂಭಿಸಿ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಅಂತಹ ಪ್ರಮುಖವಾದ ಸಂಸ್ಥೆಗಳೆಂದರೆ:

* Burea Veritas
Certification Private Limited, Mumbai

* ECOCERTSA

**Branch Office, Aurangabad, Maharastra**

* IMO Control Pvt. Ltd., Bangalore

* Indian Organic Certification Agency Pvt.Ltd. Cochin, Kerala

* Natural Organic Certification Agency(NOCA), Pune in Maharastra

* Lacon Quality Certification Pvt. Ltd., Thiruvalla, Tamilnadu

* One Cert Asia Agri Certification Pvt Limited, Jaipura Rajasthan

* S.G.S. India pvt Ltd, Gurogaon, Harayana

* Control Union Certifications, Mumbai, Maharastra
(ಮೊದಲು ಇದನ್ನು ಅಂತರರಾಷ್ಟ್ರೀಯ ನಿಯಮತಿ, ಎಂದು ಕರೆಯಲಾಗುತ್ತಿತ್ತು).

* ಉತ್ತರಾಂಚಲ ರಾಜ್ಯ ಸಾವಯವ ದೃಢೀಕರಣ ಏಜೆನ್ಸಿ (USOCA) Dehradun, Utharanchal

* APOF Organic Certification Agency (ACOCA) Bangalore

ಈ ಮೇಲಿನ ಸಂಸ್ಥೆಗಳು ಭಾರತದಲ್ಲಿ ಸಾವಯವ ಕೃಷಿ ಮತ್ತು ಉತ್ಪನ್ನಗಳ ದೃಢೀಕರಿಸುವಲ್ಲಿ ನಿರತವಾಗಿವೆ. ಅಲ್ಲದೆ ಅವುಗಳೆಲ್ಲವೂ ಕೂಡ ಒಂದಲ್ಲಾ ಒಂದು ಅಂತರರಾಷ್ಟ್ರೀಯ ಸಾವಯವ ದೃಢೀಕರಣ ಸಂಸ್ಥೆಗಳ ಅಡಿಯಲ್ಲಿ ಕಾರ್ಯವನ್ನು ನಿರ್ವಹಿಸುತ್ತವೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿರುವ ಸಂಸ್ಥೆಗಳೆಂದರೆ:

೧. ಡಿಮೀಟರ್ (Demeter):- ಇದು ೧೯೨೮ರಲ್ಲಿ ಜರ್ಮನಿಯಲ್ಲಿ ಸ್ಥಾಪಿತವಾಗಿದ್ದು, ಅತ್ಯಂತ ಹಳೆಯ ಸಾವಯವ ದೃಢೀಕರಣ ಸಂಸ್ಥೆಯಾಗಿದೆ. ಸಾವಯವಕ್ಕೆ ಒಳಪಡಲು ಅನುಸರಿಸಬೇಕಾದ ನೀತಿ ಮತ್ತು ನಿಯಮಗಳನ್ನು ರೂಪಿಸಿದೆ. ಆ ನಿಯಮಗಳನ್ನು

ಒಪ್ಪಿಕೊಂಡು ಸಾವಯವ ಕೃಷಿ ಕೈಗೊಂಡರೆ ಈ ಸಂಸ್ಥೆಯು ದೃಢೀಕರಣ ಮಾಡುವುದಲ್ಲದೆ ತನ್ನ ಮುದ್ರೆಯನ್ನು ಸಾವಯವ ಉತ್ಪನ್ನಗಳ ಮೇಲೆ ನಮೂದಿಸುತ್ತದೆ. ಇದರ ಅಂತರ ಜಾಲದ ವಿಳಾಸ: www.demeter.net

೨. ನೆಟೂರ್ ಲ್ಯಾಂಡ್(Naturland):- ಇದೂ ಕೂಡ ಜರ್ಮನಿಯಲ್ಲಿ ೧೯೮೨ರಲ್ಲಿ ಪ್ರಾರಂಬವಾಗಿದೆ. ಮೇಲಿನ ಸಂಸ್ಥೆಯಂತೆ ಕಾರ್ಯ ನಿರ್ವಹಿಸುತ್ತದೆ. ಇದರ ಅಂತರ ಜಾಲದ ವಿಳಾಸ. www.naturland.de.

೩. ಬಯೋಸ್ವಿಸ್ (Biosuise):- ಸ್ವಿಡ್ಜರ್ ಲ್ಯಾಂಡಿನಲ್ಲಿ ೧೯೮೫ ರಲ್ಲಿ ಅಸ್ಥಿತ್ವಕ್ಕೆ ಬಂದಿದೆ. ಈ ಸಂಸ್ಥೆಯು ಕೂಡ ತನ್ನ ಶಾಖೆಗಳನ್ನು ಹಲವಾರು ದೇಶಗಳಲ್ಲಿ ಪ್ರಾರಂಭಿಸಿ ಅವುಗಳ ಮೂಲಕ ದೃಢೀಕರಣ ಕೆಲಸವನ್ನು ನಿರ್ವಹಿಸುತ್ತದೆ. ಇದರ ವಿಳಾಸ ww.biosuisse.ch.

೪. ಸಾಯಿಲ್ಅಸೋಸಿಯೇಷನ್(Soil Association):- ಇದು ಇಂಗ್ಲೆಂಡಿನಲ್ಲಿ ಪ್ರಾರಂಭವಾದ ಸಾವಯವ ದೃಢೀಕರಣ ಸಂಸ್ಥೆ. ಈ ಸಂಸ್ಥೆ ಕೆಲವೊಂದು ಕಟ್ಟುನಿಟ್ಟಾದ ನಿಯಮಗಳನ್ನು ರೂಪಿಸಿದೆ ಪರಿವರ್ತನಾ ಕಾಲದಲ್ಲಿ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಯೋಜನೆಗಳಿರಬೇಕು, ಅಕ್ಕಪಕ್ಕದಲ್ಲಿ ಕುಲಾಂತರಿ ಬೆಳೆಗಳಿರಬಾರದು, ರಾಸಾಯನಿಕ ಹೊಲಗಳು ಹತ್ತಿರವಿದ್ದರೆ ಜೈವಿಕ ಬೇಲಿ ಅಥವಾ ತಡೆಗೋಡೆಯನ್ನು ನಿರ್ಮಿಸಬೇಕೆಂದು ಸೂಚಿಸುತ್ತದೆ.

೫. ಅಂತರರಾಷ್ಟ್ರೀಯ ಸಾವಯವ ಕೃಷಿ ಆಂದೋಲನ ಸಂಸ್ಥೆ (IFOAM): ಇದು ೧೯೭೨ ರಲ್ಲಿ ಜರ್ಮನಿಯಲ್ಲಿ ಸ್ಥಾಪಿತವಾಗಿದ್ದು ಕೇವಲ ಸಾವಯವ ಚಳುವಳಿಗೆ ಸೀಮಿತವಾಗಿರದೇ ದೃಢೀಕರಣದಲ್ಲಿಯೂ ಕೂಡ ನಿರತವಾಗಿದೆ. ಇದರ ವಿಳಾಸ: www.ifoam.org

ಹೀಗೆ ಸಾವಯವ ಉತ್ಪನ್ನಗಳನ್ನು ದೃಢೀಕರಿಸಲು ಹಲವಾರು ಸಂಘ ಸಂಸ್ಥೆ, ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಕೂಡ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿವೆ.

**ಸಾವಯವ ದೃಢೀಕರಣಕ್ಕೆ ಒಳಪಡುವ ಪದಾರ್ಥಗಳು**

ಸಾವಯವ ದೃಢೀಕರಣವು ಒಂದು ಸಂಕೀರ್ಣವಾದ ಪ್ರಕ್ರಿಯೆಯಾಗಿದೆ. ಇದರ ವ್ಯಾಪ್ತಿಗೆ ಒಳಪಡುವಂತಹ ಬಹುಮುಖ್ಯವಾದ ಪದಾರ್ಥಗಳೆಂದರೆ;

- ಹೊಲ ಮತ್ತು ತೋಟದ ಬೆಳೆಗಳು ಎಲ್ಲಾ ಆಹಾರದ ಬೆಳೆಗಳು, ಹತ್ತಿ ಸೆಣಬಿನಂತಹ ವಾಣಿಜ್ಯ ಬೆಳೆಗಳು, ರೇಶ್ಮೆ ಮತ್ತು ಅದರ ಸಂಸ್ಕರಣೆ.
- ಅರಣ್ಯ ಉತ್ಪನ್ನಗಳ ಸಂಗ್ರಹ (ಜೇನು, ಅಣಬೆ, ಔಷಧಿ ಉತ್ಪನ್ನಗಳು) ಮತ್ತು ಅದರ ಸಂಸ್ಕರಣೆ.
- ಪ್ರಾಣಿ (ದನ, ಆಡು, ಹಂದಿ, ಮಾಂಸ, ಮೊಟ್ಟೆ, ಹಾಲು ಮತ್ತು ಉತ್ಪನ್ನಗಳು) ಕೋಳಿ, ಉಣ್ಣೆ, ಚರ್ಮ ಇತ್ಯಾದಿ ಮತ್ತು ಅವುಗಳ ಸಂಸ್ಕರಣೆ.
- ಜಲಚರಗಳು (ಮೀನು, ಸಿಗಡಿ, ಸ್ಪಿರುಲೀನಾ) ಮತ್ತು ಅವುಗಳ ಸಂಸ್ಕರಣೆ
- ಬೆಳೆಸಿದ ಜೇನು, ಅಣಬೆ ಮತ್ತು ಅದರ ಸಂಸ್ಕರಣೆ.
- ನಾರು, ಜವಳಿ, ಮರ ಮತ್ತು ಅವುಗಳ ಸಂಸ್ಕರಣೆ.
- ಕೃಷಿ ಒಳಸುರಿಗಳು ಇತ್ಯಾದಿ.

ಈ ಮೇಲಿನ ಉತ್ಪನ್ನಗಳು, ಉತ್ಪಾದನಾ ವಿಧಾನಗಳನ್ನು ಸಾವಯುವ ದೃಢೀಕರಣಕ್ಕೆ ಒಳಪಡಿಸಬಹುದಾಗಿದೆ. ಹೀಗೆ ದೃಢೀಕರಣ ಎಂಬುದು ಸಾವಯುವ ಕೃಷಿ ಪದ್ಧತಿಯನ್ನು ಹೊರಜಗತ್ತಿಗೆ ದೃಢೀಕರಿಸುವ ಮಾರ್ಗವಾಗಿದೆ.

**ದೃಢೀಕರಣಕ್ಕೆ ಒಳಪಡಿಸುವುದು ಹೇಗೆ?**

ಸಾವಯುವ ಉತ್ಪನ್ನ ಮತ್ತು ಉತ್ಪಾದನಾ ವಿಧಾನಗಳನ್ನು ದೃಢೀಕರಿಸಲು ಅಂತರ ರಾಷ್ಟ್ರೀಯ ಮತ್ತು ರಾಷ್ಟ್ರೀಯಮಟ್ಟದಲ್ಲಿ ಹಲವಾರು ಸಂಸ್ಥೆಗಳು ನಿರತವಾಗಿವೆ. ಹಾಗಿದ್ದರೆ ನಮ್ಮ ರೈತರು ಸಾವಯುವ ಕೃಷಿಯನ್ನು ದೃಢೀಕರಣಕ್ಕೆ ಒಳಪಡಿಸಿ ಹೇಗೆ ಪ್ರಮಾಣ ಪತ್ರವನ್ನು ಪಡೆದುಕೊಳ್ಳಬೇಕು ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ತಮ್ಮ ಕೃಷಿ ವಿಧಾನಗಳನ್ನು ಸಾವಯುವಕ್ಕೆ ಒಳಪಡಿಸಲು ರೈತರು ಸಾಕಷ್ಟು ಪರಿಶ್ರಮ ಪಡಬೇಕಾಗುತ್ತದೆ. ಅದಕ್ಕಾಗಿ ಅವರು ಹಲವಾರು ಮುಂಜಾಗ್ರತಾ ಕ್ರಮಕೈಗೊಳ್ಳಬೇಕು. ಅವುಗಳೆಂದರೆ:

೧. ತಮ್ಮ ಕೃಷಿ ಭೂಮಿಗೆ ಸಂಬಂಧಿಸಿದಂತೆ ಒಂದು ಯೋಜನೆಯನ್ನು ತಯಾರಿಸಿ ಕೊಳ್ಳಬೇಕು.

೨. ಯಾವ ರೀತಿಯಲ್ಲಿ ಕೃಷಿ ಭೂಮಿಯನ್ನು ಸಾಗುವಳಿ ಮಾಡಲಾಗುತ್ತದೆ ಎಂಬುದರ ಕುರಿತು ಸಮಗ್ರ ಮಾಹಿತಿಯನ್ನು ದಾಖಲೆ ಮಾಡಿಕೊಂಡಿರಬೇಕು.

೩. ಸಾವಯುವ ಸಂಸ್ಥೆಗಳು ಅನುಮೋದಿಸಿರುವಂತಹ ಒಳಸುರಿಗಳನ್ನು ಮಾತ್ರ ಬಳಸಿರಬೇಕು.

೪. ಯಾವುದೇ ರೀತಿಯ ರಾಸಾಯನಿಕ ಗೊಬ್ಬರ, ಕೀಟನಾಶಕಗಳು, ಬೆಳವಣಿಗೆ ಉತ್ತೇಜಿಸುವಂತಹ ರಾಸಾಯನಿಕ ಪದಾರ್ಥಗಳನ್ನು ಬಳಸಬಾರದು.

೫. ಸುಗ್ಗಿಯ ಅಥವಾ ಕೊಯ್ಲಿ ಸಂದರ್ಭದಲ್ಲಿಯೂ ಅತ್ಯಂತ ವೈಜ್ಞಾನಿಕವಾಗಿ ನಿರ್ವಹಿಸಬೇಕು. ಯಾವುದೇ ರೀತಿಯ ಕಲಬೆರೆಕೆ ಮತ್ತು ಮಿಶ್ರಣ ಗಳುಂಟಾಗದಂತೆ ನೋಡಿಕೊಳ್ಳಬೇಕು.

೬. ಅಕ್ಕ ಪಕ್ಕದ ರೈತರು ಉಪಯೋಗಿಸುವ ರಾಸಾಯನಿಕಗಳಿಂದ ತಮ್ಮ ಸಾಗುವಳಿ ಭೂಮಿಯನ್ನು ಸಂಪೂರ್ಣವಾಗಿ ಸಂರಕ್ಷಿಸಿಕೊಂಡಿರಬೇಕು.

೭. ರಾಸಾಯನಿಕ ಕೃಷಿಯಿಂದ ಹರಿದು ಬರುವಂತಹ ನೀರು ಸಾವಯುವ ಕೃಷಿ ಭೂಮಿಗೆ ಸೇರದಂತೆ ಬಸಿಕಾಲುವೆಗಳನ್ನು ನಿರ್ಮಾಣ ಮಾಡಿಕೊಂಡಿರಬೇಕು.

೮. ಸಾವಯುವ ವಿಧಾನಗಳಿಂದ ಉತ್ಪಾದಿಸಿದ ಉತ್ಪನ್ನವನ್ನು ಸಂಗ್ರಹಿಸುವಾಗಲೂ ಯಾವುದೇ ರೀತಿಯ ರಾಸಾಯನಿಕಗಳನ್ನು ಉಪಯೋಗಿಸಬಾರದು.

ಈ ಮೇಲಿನ ವಿಧಾನಗಳಲ್ಲದೆ, ಸಂಸ್ಥೆಯು ನೀಡಿದ ಎಲ್ಲಾ ಸಲಹೆ ಮತ್ತು ಮಾರ್ಗದರ್ಶನಗಳನ್ನು ಪಾಲಿಸಿದ ನಂತರ ಮತ್ತು ರೈತರು ಅನುಸರಿಸಿದ ಕೃಷಿ ವಿಧಾನಗಳು ಅವರು ಒದಗಿಸಿದ ದಾಖಲೆಗಳು ಸಮರ್ಪಕವಾಗಿದ್ದರೆ, ಆದ್ದರಿಂದ ಸಂಸ್ಥೆಯು ತೃಪ್ತಿಯನ್ನು ಹೊಂದಿದರೆ ಆಗ ರೈತರ ಉತ್ಪಾದನಾ ವಿಧಾನ ಮತ್ತು ಉತ್ಪನ್ನವನ್ನು ಸಾವಯುವ ಎಂದು ದೃಢೀಕರಣ ಮಾಡಲಾಗುತ್ತದೆ. ಆದರೆ ಇಲ್ಲಿ ಇನ್ನೊಂದು ಅಂಶವನಕ್ಕು ಗಮನಿಸಬೇಕಾಗಿರುತ್ತದೆ. ಅದು ಇದುವರೆಗೂ ರಾಸಾಯನಿಕ ಕೃಷಿಯನ್ನು ಅನುಸರಿಸುತ್ತ ಬಂದಿದ್ದು ಸಾವಯುವಕ್ಕೆ ರೈತರು ತಮ್ಮ ಜಮೀನನ್ನು ಪರಿವರ್ತಿಸಿದರೆ ಅಂತಹ ಕೃಷಿಗೆ ಸಾವಯುವ ದೃಢೀಕರಣ ಪಡೆಯಲು ಸಾಧ್ಯವಿಲ್ಲ. ಏಕೆಂದರೆ ಅಂತಹ ಕೃಷಿ

ಭೂಮಿಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಾಸಾಯನಿಕ ಅಂಶಗಳು ಮಣ್ಣಿನಲ್ಲಿ ಉಳಿದಿರುತ್ತವೆ. ಆದ್ದರಿಂದ ರೈತರು ಕೆಲ ಕಾಲದವರೆಗೆ ಸಾವಯವವನ್ನು ಅನುಸರಿಸಿಕೊಂಡು ಹೋಗಬೇಕು.

**ಸಾವಯವ ಕೃಷಿಗೆ ಪರಿವರ್ತನೆ**

ರೈತರು ತಮ್ಮ ಒಟ್ಟು ಜಮೀನಿನ ಪೂರ್ಣ ಅಥವಾ ಒಂದು ಭಾಗವನ್ನು ಸಾವಯವ ಕೃಷಿಗೆ ಅಳವಡಿಸಿಕೊಳ್ಳಬಹುದು. ಹೀಗೆ ಜಮೀನನ್ನು ಸಾವಯವ ಸಾಗುವಳಿಗೆ ಪರಿವರ್ತಿಸಿದಾಗ ಆರಂಭದಲ್ಲಿ ಇಳುವರಿ ಬಹಳ ಕಡಿಮೆಯಾಗುತ್ತದೆ. ಅದರಿಂದ ರೈತರು ಧೃತಿಗೆಡದೆ, ನಿರಂತರವಾಗಿ ಸಾವಯವ ಕೃಷಿಯನ್ನು ಅನುಸರಿಸಿಕೊಂಡು ಹೋಗಬೇಕು. ಆಗ ಇಳುವರಿ ಸ್ಥಿರ ಪ್ರಮಾಣದಲ್ಲಿ ಅಧಿಕವಾಗುತ್ತ ಹೋಗುತ್ತದೆ. ಸಾವಯವಕ್ಕೆ ಒಳಪಡಿಸಿದ ನಂತರ ೨೪ ತಿಂಗಳಕಾಲ ಹೊಲದ ಬೆಳೆಗಳಿಗೆ ಹಾಗೂ ತೋಟದ ಬೆಳೆಗಳಿಗೆ ೩೬ ತಿಂಗಳ ಅವಧಿಯನ್ನು ನಿಗದಿಗೊಳಸಲಾಗಿದೆ. ಈ ಅವಧಿ ಮುಗಿದ ನಂತರವೆ ಅ ಭೂಮಿಯು ಸಾವಯವ ದೃಢೀಕರಣಕ್ಕೆ ಒಳಪಡಿಸಲಾಗುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ಪರಿವರ್ತನೆಯ ಅವಧಿಯನ್ನು ೨ ಅಥವಾ ೩ ವರ್ಷಗಳಿಗಿಂತ ಕಡಿಮೆ ನಿಗದಿಗೊಳಿಸಬಹುದು. ಉದಾ: ಅರಣ್ಯ ಪ್ರದೇಶವನ್ನು ಸಾಗುವಳಿಗೆ ಒಳಪಡಿಸಿದಾಗ ಅಂತಹ ಜಮೀನನ್ನು ಒಂದು ವರ್ಷದ ನಂತರ ಸಾವಯವವೆಂದು ದೃಢೀಕರಿಸಬಹುದಾಗಿದೆ ಅಥವಾ ಬಂಜರು ಭೂಮಿಯನ್ನು ಸಾಗುವಳಿಗೆ ಪರಿವರ್ತಿಸಿದಾಗ ಅಥವಾ ಬುಡಕಟ್ಟು ವರ್ಗದವರು ವಾಸಿಸುವ ಪ್ರದೇಶಗಳಲ್ಲಿ ಅವರು ನಿರ್ವಹಿಸುವ ಕೃಷಿ ಚಟುವಟಿಕೆಗಳನ್ನು ಒಂದು ವರ್ಷಕ್ಕೆ ಕಡಿಮೆ ಇಲ್ಲದಂತೆ ಕೃಷಿ ಚಟುವಟಿಕೆಗಳನ್ನು ಸಾವಯವದ ಮೂಲಕ ನಿರ್ವಹಿಸಿದ ಮೇಲೆ ಅವುಗಳನ್ನು ಸಾವಯವ ದೃಢೀಕರಣಕ್ಕೆ ಒಳಪಡಿಸಬಹುದು. ಹೀಗೆ ಸಾವಯವ ಕೃಷಿ ಪರಿವರ್ತನೆಗೆ ಸಂಬಂಧಿಸಿದಂತೆ ನಿಗದಿಗೊಳಿಸಿದ ಅವಧಿಯು ಎಲ್ಲಾ ರಾಷ್ಟ್ರಗಳಲ್ಲಿ ಏಕ ಪ್ರಕಾರವಾಗಿರುವುದಿಲ್ಲ. ಕೆಲವು ರಾಷ್ಟ್ರಗಳಲ್ಲಿ ಮಳೆಗಾಲದ ಬೆಳೆಗೆ ಒಂದು ವರ್ಷದ ನಂತರ ಸಾವಯವ ದೃಢೀಕರಣಕ್ಕೆ ಒಳಪಟ್ಟರೆ ನೀರಾವರಿ ಪ್ರದೇಶದ ಬೆಳೆಗಳಾದರೆ ಸಾವಯವಕ್ಕೆ ಪರಿವರ್ತಿಸಿ ಎರಡು ಬೆಳೆಗಳನ್ನು ಬೆಳೆದ ಮೇಲೆ ಅಂತಹ ಕೃಷಿ ಭೂಮಿಯನ್ನು ಸಾವಯವ ದೃಢೀಕರಣಕ್ಕೆ ಒಳಪಡಿಸಬಹುದು. ಹೀಗೆ ಸಾವಯವ ದೃಢೀಕರಣ ಅವಧಿಗೆ ಸಂಬಂಧಿಸಿದಂತೆ ಒಂದೇ ರೀತಿಯ ವಿಧಾನಗಳನ್ನು ಅನುಸರಿಸುವಂತಿಲ್ಲ.

**ಸಾವಯವ ದೃಢೀಕರಣದ ವೆಚ್ಚ**

ದೃಢೀಕರಣವೆಂದರೆ ಕೇವಲ ಉತ್ಪನ್ನದ ದೃಢೀಕರಣವೆಂದು ತಿಳಿಯಬಾರದು. ಕೃಷಿ ವ್ಯವಸ್ಥೆ ಮತ್ತು ವಿಧಾನಗಳ ಪೂರ್ಣಪ್ರಮಾಣದ ದೃಢೀಕರಣವಾಗಿದೆ. ಇದಕ್ಕೆ ತಗಲುವ ವೆಚ್ಚ ಅಧಿಕವಾಗಿದ್ದು ಅದನ್ನು ಸಂಪೂರ್ಣವಾಗಿ ರೈತರೇ ಭರಿಸಬೇಕಾಗುತ್ತದೆ. ಏಕೆಂದರೆ ರೈತರ ಜಮೀನುಗಳು ದೃಢೀಕರಣಕ್ಕೆ ಅರ್ಹತೆಯನ್ನು ಪಡೆದುಕೊಂಡ ಮೇಲೆ ಸಂಸ್ಥೆಯು ನುರಿತ ತಜ್ಞರನ್ನು, ತನಿಖಾಧಿಕಾರಿಗಳನ್ನು ಜಮೀನುಗಳಿಗೆ ಭೇಟಿ ನೀಡಿ ಪರೀಕ್ಷಿಸಲು ಮತ್ತು ಮೇಲ್ವಿಚಾರಣೆ ಮಾಡಲು ಕಳುಹಿಸಿ ಕೊಡುತ್ತದೆ. ಇದರೊಂದಿಗೆ ದೃಢೀಕರಣ ಪ್ರಮಾಣ ಪತ್ರವನ್ನು ನೀಡಲು ಶುಲ್ಕವನ್ನು ರೈತರೇ ಪಾವತಿ ಮಾಡಬೇಕು. ಆಗಾಗಿ ದೃಢೀಕರಣದ ವೆಚ್ಚ ಹಿಂದುಳಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ರೈತರಿಗೆ ಬಹಳ ದುಬಾರಿಯಾಗುತ್ತದೆ. ಈ ವೆಚ್ಚವು ಏಕರೂಪವಾಗಿರದೆ ಸಾಕಷ್ಟು ಭಿನ್ನವಾಗಿರುತ್ತದೆ. ಅಂದರೆ ಸೀಮಾಂತ ಮತ್ತು ಚಿಕ್ಕ ರೈತರಿಗೆ, ಮಧ್ಯಮ ರೈತರಿಗೆ ಹಾಗೂ ದೊಡ್ಡ ಮತ್ತು ಸಂಸ್ಕರಣದಾರರಿಗೂ ಕೂಡ ವಿವಿಧ ಬಗೆಯ ದೃಢೀಕರಣ ಶುಲ್ಕವನ್ನು ವಿಧಿಸಲಾಗುತ್ತದೆ. ದೃಢೀಕರಣ ಶುಲ್ಕವು ಈ ಕೆಳಗಿನಂತಿರುತ್ತದೆ.

೧. ಚಿಕ್ಕ ರೈತರಿಗೆ ರೂ. ೨೨೦೦೦ (ಇದರಲ್ಲಿ ಪ್ರಯಾಣ ಮತ್ತು ತನಿಖಾ ವೆಚ್ಚವು ಸುಮಾರು ರೂ. ೧೨೦೦೦. ವರದಿ ತಯಾರಿಸಲು ರೂ. ೫೦೦೦ ಹಾಗೂ ದೃಢೀಕರಣ ಪ್ರಮಾಣಪತ್ರದ ಶುಲ್ಕ ರೂ. ೫೦೦೦ ಆಗಿರುತ್ತದೆ.

೨. ಮಧ್ಯಮ ಮತ್ತು ದೊಡ್ಡ ರೈತರಿಗೆ ರೂ. ೨೬೮೦೦ ಗಳಾಗಿರುತ್ತದೆ.

೩. ಎಸ್ಟೇಟ್‌ಮ್ಯಾನ್ಯು ಪ್ಯಾಕ್ಚರರ್ಸ್ ಮತ್ತು ರಫ್ತುದಾರರಿಗೆ ರೂ. ೨೯೨೦೦ ಇದರಲ್ಲಿ ಪ್ರಮಾಣ ಮತ್ತು ತನಿಖಾ ವೆಚ್ಚವಾಗಿ ಸುಮಾರು ರೂ. ೧೯೨೦೦ಗಳನ್ನು ಹಾಗೂ ವರದಿ ತಯಾರಿಸಲು ಮತ್ತು ದೃಢೀಕರಣ ಪ್ರಮಾಣ ಪತ್ರ ನೀಡಲು ರೂ. ೧೦,೦೦೦ಗಳನ್ನು ನೀಡಬೇಕಾಗಿರುತ್ತದೆ. (Org.Mrg. 2002) ಹೀಗೆ ಸಾವಯವ ಕೃಷಿ ಪದ್ಧತಿ ಮತ್ತು ವಿಧಾನಗಳನ್ನು ಪ್ರಮಾಣೀಕರಿಸಲು ರೈತರು ಅತ್ಯಂತ ಅಧಿಕ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ. ಮೇಲಾಗಿ ಆಹಾರ ಬೆಳೆಗಳಿಗೆ ಪ್ರತಿವರ್ಷ ಕೂಡ ದೃಢೀಕರಣ ಪತ್ರ ಪಡೆಯಬೇಕಾಗಿರುವುದರಿಂದ ಸಾಮಾನ್ಯ ರೈತರಿಗೆ ಬಹಳ ದುಬಾರಿಯಾದಂತಹ ವಿಧಾನವಾಗಿದೆ. ಇತ್ತೀಚಿನ ದಿನಗಳಲ್ಲಿ ಹಲವು ದೃಢೀಕರಣ ಸಂಸ್ಥೆಗಳು ತಮ್ಮ ಶಾಖೆಗಳನ್ನು ವಿವಿಧ ದೇಶಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಆರಂಭಿಸಿವೆ. ಆದ್ದರಿಂದ ದೃಢೀಕರಣ ವೆಚ್ಚವು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿದೆ. ವೈಯಕ್ತಿಕವಾಗಿ ದೃಢೀಕರಣ ಪಡೆಯುವುದರ ಬದಲಾಗಿ ರೈತರು ಗುಂಪು ಅಥವಾ ಸಮೂಹಗಳ ಮೂಲಕ ದೃಢೀಕರಣಕ್ಕೆ ಒಳಪಡುವುದು ಸಾಕಷ್ಟು ಮಿತವ್ಯಯಕಾರಿಯಾಗಿರುತ್ತದೆ. ಆದಗ್ಯೂ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿರುವ ಸೀಮಾಂತ ಮತ್ತು ಚಿಕ್ಕ ರೈತರಿಗೆ ದೃಢೀಕರಣವು ಅತ್ಯಂತ ಹೆಚ್ಚು ಹೊರೆಯಾಗಿರುತ್ತದೆ.

## ಸಾವಯವ ಕೃಷಿ ಒಂದು ವಿಶ್ಲೇಷಣೆ (4)

**ಸಾವಯವ ಮಾರುಕಟ್ಟೆ ಸ್ಥಿತಿಗತಿ**

ಜಾಗತಿಕ ಮಟ್ಟದಲ್ಲಿ ಸಾವಯವ ಉತ್ಪನ್ನಗಳಿಗೆ ಬೇಡಿಕೆಯು ಗಣನೀಯ ಪ್ರಮಾಣದಲ್ಲಿ ವಿಸ್ತರಿಸಲ್ಪಡುತ್ತಿದೆ. ಆದರೆ ಪೂರೈಕೆ ಮಾತ್ರ ಸಾಕಷ್ಟು ಅಸ್ಥಿರತೆಯನ್ನು ಹೊಂದಿದೆ. ಇತ್ತೀಚಿನ ದಿನಗಳಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾದ ಅಮೇರಿಕ ಸಂಯುಕ್ತ ಸಂಸ್ಥಾನ, ಕೆನಡ, ಆಸ್ಟ್ರೇಲಿಯಾ, ಜಪಾನ್, ಇಂಗ್ಲೆಂಡ್, ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರಗಳ ಜನರು ತಮ್ಮ ಆರೋಗ್ಯದ ಬಗ್ಗೆ ಬಹಳಷ್ಟು ಕಾಳಜಿಯನ್ನೊಂದಿದ್ದು ಸಾವಯವ ಉತ್ಪನ್ನಗಳನ್ನು ಅತಿಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳುತ್ತಿದ್ದಾರೆ ಅಭಿವೃದ್ಧಿ ಹೊಂದುತ್ತಿರುವ ಈಜಿಪ್ಟ್, ಚೀನಾ, ಭಾರತ ಇತ್ಯಾದಿ ರಾಷ್ಟ್ರಗಳಲ್ಲಿರುವ ಶ್ರೀಮಂತ ಮತ್ತು ಮಧ್ಯಮ ವರ್ಗದ ಜನರು ಕೂಡ ಸಾವಯವ ಉತ್ಪನ್ನಗಳನ್ನು ಕೊಂಡು ಕೊಳ್ಳುತ್ತಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಸಾವಯವ ಉತ್ಪನ್ನಗಳು ಜಾಗತಿಕ ಮಟ್ಟದಲ್ಲಿ ಬಹಳಷ್ಟು ಗಮನವನ್ನು ಸೆಳೆಯುತ್ತಿವೆ. ಪ್ರಸ್ತುತ ಹಲವು ಶತಕಕೋಟಿ ಡಾಲರ್ ಗಳಲ್ಲಿ ಸಾವಯವ ಉತ್ಪನ್ನಗಳ ವಹಿವಾಟು ನಡೆಯುತ್ತಿದೆ. ಈ ಕೆಳಗಿನ ಕೋಷ್ಟಕದಿಂದ ಸಾವಯವ ಉತ್ಪನ್ನಗಳ ವ್ಯವಹಾರವನ್ನು ತಿಳಿಯಬಹುದಾಗಿದೆ.

**ಜಾಗತಿಕ ಸಾವಯವ ಉತ್ಪನ್ನಗಳ ಮಾರುಕಟ್ಟೆ (೨೦೦೦)**

| | | | |
|---|---|---|---|
| ರಾಷ್ಟ್ರಗಳ | ಶೇಕಡವಾರು ಮಾರಾಟ | (ದಶಲಕ್ಷ ಡಾಲರ್ ಗಳಲ್ಲಿ) | |
| ಬೆಳವಣಿಗೆ | ಒಟ್ಟು (% ಪ್ರತಿವರ್ಷ) | | |
| ಬೆಳವಣಿಗೆ | US$ ಗಳಲ್ಲಿ ನಿರೀಕ್ಷಿತ | | |
| ಆಸ್ಟ್ರೇಲಿಯಾ | ೨೦೦-೨೨೫ | ೧.೮-೨.೦ | ೧೦-೧೫ |
| ಡೆನ್ಮಾರ್ಕ | ೩೫೦-೩೭೫ | ೨.೫-೩.೦ | ೧೦-೧೫ |
| ಫ್ರಾನ್ಸ್ | ೮೦೦-೮೫೦ | ೦.೮-೧.೦ | ೧೦-೧೫ |
| ಸ್ವಿಟ್ಜರ್ ಲ್ಯಾಂಡ್ | ೪೫೦-೪೭೫ | ೨.೦-೨.೫ | ೧೦-೧೫ |
| ಜರ್ಮನಿ | ೨೧೦೦-೨೨೦೦ | ೧.೬-೧.೮ | ೧೦-೧೫ |
| ಜಪಾನ್ | ೨೦೦೦-೨೫೦೦ | – | – |

| | | | |
|---|---|---|---|
| ಇಂಗ್ಲೆಂಡ್ | ೧೧೦೦-೧೨೦೦ | ೧.೦-೨.೫ | ೧೫-೨೦ |
| ಅಮೇರಿಕಾ ಸಂಯುಕ್ತ ಸಂಸ್ಥಾನ | ೭೫೦೦-೮೦೦೦ | ೧.೫-೨.೦ | ೨೦ |

ಮೂಲ: Better crop (2003)

ಸಾವಯವದಲ್ಲಿ ಉತ್ಪಾದಿಸಿದ ಉತ್ಪನ್ನಗಳ ಜಾಗತಿಕ ಮಾರುಕಟ್ಟೆಯಲ್ಲಿನ ಅಂದಾಜು ವಹಿವಾಟು ಸುಮಾರು $. ೩೦ ಶತಕೋಟಿಗಳೆಂದು (ರೂ. ೧೪೩೦೦ ಕೋಟಿ) ೨೦೦೫ರಲ್ಲಿ ಅಂದಾಜು ಮಾಡಲಾಗಿದೆ. ಇದು ಪುನಃ ೨೦೨೦ರ ವೇಳೆಗೆ ೧೦೨ ಶತಕೋಟಿ ಅಮೇರಿಕ ಸಂಯುಕ್ತ ಸಂಸ್ಥಾನದ ಡಾಲರ್ ಗಳಲ್ಲಿ ಹೆಚ್ಚಾಗಲಿರುವುದು ಎಂದು ಒಂದು ಅಂದಾಜು ತಿಳಿಸುತ್ತದೆ. ಹೀಗೆ ಮೇಲಿನ ಕೋಷ್ಟಕದಿಂದ ನಮಗೆ ತಿಳಿಯುವುದೇನೆಂದರೆ ಮುಂದುವರಿದ ರಾಷ್ಟ್ರಗಳಲ್ಲಿ ಸಾವಯವ ವಸ್ತುಗಳಿಗೆ ಜಾಗತಿಕ ಮಾರುಕಟ್ಟೆಯ, ಪ್ರತಿವರ್ಷ ಅತ್ಯಂತ ತೀವ್ರವಾಗಿ ಬೆಳೆಯುತ್ತಿದೆ. .ಅದರಲ್ಲೂ ಜಪಾನ್, ಇಂಗ್ಲೆಂಡ್ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಬಹಳ ದೊಡ್ಡ ಮಾರುಕಟ್ಟೆ ಇರುವುದು ಕಂಡುಬರುತ್ತದೆ. ಆದ್ದರಿಂದ ಭಾರತ ಮತ್ತು ಇತರ ಅಭಿವೃದ್ಧಿಶೀಲ ರಾಷ್ಟ್ರಗಳು ತಮ್ಮ ಸಾವಯವ ಉತ್ಪಾದನೆಯನ್ನು ವಿಸ್ತರಿಸುವುದರ ಕಡೆಗೆ ಹೆಚ್ಚು ಗಮನ ನೀಡುವುದು ಬಹಳಷ್ಟು ಸೂಕ್ತವಾಗಿದೆ.

**ಭಾರತದಲ್ಲಿ ಸಾವಯವ ಕೃಷಿ**

ವಿಶ್ವ ಮಾರುಕಟ್ಟೆಯಲ್ಲಿ ಸಾವಯವ ಉತ್ಪನ್ನಗಳಿಗೆ ನಿರಂತರವಾಗಿ ಮಾರುಕಟ್ಟೆ ಮೂರು ಪಟ್ಟು ವಿಸ್ತರಿಸುತ್ತಿದೆ. ಅದು ಅನುಕೂಲಕರವಾದ ಪ್ರಭಾವವನ್ನು ನಮ್ಮ ಕೃಷಿ ಮೇಲೆ ಬೀರುತ್ತಿರುವುದು ಕಂಡುಬರುತ್ತಿದೆ. ನಮ್ಮ ದೇಶದಲ್ಲಿ ಸಾವಯವ ಕೃಷಿಯನ್ನು ಬಹಳ ಹಿಂದಿನಿಂದಲೂ ಕೆಲವು ಭಾಗಗಳಲ್ಲಿ ಅನುಸರಿಸಿಕೊಂಡು ಬರುತ್ತಿದ್ದಾರೆ. ಅಂತಹ ಭಾಗಗಳನ್ನು ಗುರುತಿಸುವುದರೊಂದಿಗೆ, ಆ ಭಾಗದ ರೈತರಿಗೆ ಸೂಕ್ತ ಮಾಹಿತಿ ನೀಡಿ ಸಾವಯವ ಕೃಷಿ ವ್ಯಾಪ್ತಿಗೆ ತರುವಂತಹ ಕೆಲಸ ಮಾಡಬೇಕಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರದ ಕೃಷಿ ಮತ್ತು ಸಹಕಾರ ಮಂತ್ರಾಲಯವು ೨೦೦೦ದಲ್ಲಿ ಗುಜರಾತಿನ ನಿವೃತ್ತ ಕೃಷಿ ನಿರ್ದೇಶಕರಾದ ಡಾ|| ಕನವರ್ಜಿಬಾಯ್ಯಾದವ್ರವರ ನೇತೃತ್ವದಲ್ಲಿ ಸಾವಯವ ಕೃಷಿ ಟಾಸ್ಕಫೋರ್ಸ್ ಎಂಬ ಸಮಿತಿಯನ್ನು ರಚಿಸಿತು. ಈ ಸಮಿತಿ ಸಾವಯವ ಕೃಷಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವುದು, ಕ್ರೂಢೀಕರಿಸುವುದು ಹಾಗೂ ಸಾವಯವ ಕೃಷಿಯ ಅನುಕೂಲಗಳನ್ನು ತನ್ನ ವರದಿಯಲ್ಲಿ ತಿಳಿಸಿ ಇವುಗಳನ್ನು ರೈತರಿಗೆ ತಲುಪಿಸಲು ಸೂಚಿಸಿದೆ.

ಹತ್ತನೆ ಪಂಚವಾರ್ಷಿಕ ಯೋಜನೆಯಲ್ಲಿ ಸಾವಯವ ಕೃಷಿಯು ಅತ್ಯಂತ ಪ್ರಮುಖವಾದ ಕ್ಷೇತ್ರವೆಂದು ಪರಿಗಣಿಸಿ ಅದನ್ನು ಸಾಕಷ್ಟು ವಿಸ್ತರಿಸಲು ಮತ್ತು ಜನಪ್ರಿಯಗೊಳಿಸಲು ಕ್ರಮಗಳನ್ನು ಕೈಗೊಳ್ಳಬೇಕೆಂದು ಡಾ|| ಸ್ವಾಮಿನಾಥನ್ಸಮಿತಿಯು ಸೂಚಿಸಿತು. ಅಲ್ಲದೆ ನಮ್ಮ ದೇಶದ ಗುಡ್ಡಗಾಡು ಮತ್ತು ಮಳೆ ಆಶ್ರಿತ ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳನ್ನು ಬಳಸುವುದು ಬಹಳ ಕಡಿಮೆ ಇದೆ. ಆದ್ದರಿಂದ ಈ ಸ್ಥಳಗಳಲ್ಲಿ ಸಾವಯವ ಕೃಷಿಯನ್ನು ಅನುಸರಿಸಲು ರೈತರಿಗೆ ಸೂಕ್ತವಾದಂತಹ ಮಾಹಿತಿ ಮತ್ತು ಸಲಹೆಯನ್ನು ನೀಡಬೇಕೆಂದು ಅಭಿಪ್ರಾಯಪಟ್ಟಿತು. ಮಧ್ಯಪ್ರದೇಶ ಇತರ ಎಲ್ಲಾ ರಾಜ್ಯಗಳಿಗಿಂತ ಮೊಟ್ಟಮೊದಲು ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಲು ಕ್ರಮ ಕೈಗೊಂಡಿತು. ಅನಂತರ ಉತ್ತರಾಂಚಲ ಮತ್ತು ಸಿಕ್ಕಿಂ ರಾಜ್ಯಗಳು ತಮ್ಮ ಕೃಷಿಯನ್ನು ಸಾವಯವ ಕೃಷಿ ಎಂದು ಘೋಷಿಸಿಕೊಂಡವು. ಇವುಗಳ ಜೊತೆಗೆ ಈಶಾನ್ಯ ರಾಜ್ಯಗಳು ಸಾವಯವ ಕೃಷಿಗೆ ಮಹತ್ವವನ್ನು ನೀಡಿದವು. ನಮ್ಮ ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಾಲಯವು ಏಪ್ರಿಲ್೨೦೦೦ದಂದು ರಾಷ್ಟ್ರೀಯ ಸಾವಯವ ಯೋಜನೆ(National Organic Programme) ಯನ್ನು ಅನುಷ್ಠಾನಕ್ಕೆ ತಂದಿತು. ಸಾವಯವ ಉತ್ಪಾದನೆಗಾಗಿ ರಾಷ್ಟ್ರೀಯ ಯೋಜನೆ (National Programme for Organic Production NPOP) ಎಂಬ ಯೋಜನೆಯನ್ನು ವಾಣಿಜ್ಯ ಮಂತ್ರಾಲಯದ ಅಡಿಯಲ್ಲಿರುವ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ

(Agricultural and Processed Food Products Export Development Authority APEDA) ಜಾರಿಗೆ ತಂದಿತು. ಈ ಯೋಜನೆಯ ಅಡಿಯಲ್ಲಿ ರಾಷ್ಟ್ರೀಯ ಗುಣಮಟ್ಟ, ಮಾನ್ಯತೆಯ ವಿಧಾನ, ತನಿಖಾ ವಿಧಾನ, ದೃಢೀಕರಣ ಸಂಸ್ಥೆಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ತಯಾರಿಸಿ ಅದನ್ನು ರಾಷ್ಟ್ರಿಯ ಸ್ಟೀರಿಂಗ್‌ಸಮಿತಿಯಿಂದ ಅನುಮೊದನೆ ಪಡೆದುಕೊಳ್ಳಲಾಗಿದೆ. ಹೀಗೆ ನಮ್ಮ ದೇಶದಲ್ಲಿ ಸಾವಯವ ಕೃಷಿಯನ್ನು ವಿಸ್ತರಿಸುವ ಸಲುವಾಗಿ ಕೇಂದ್ರ ಸರ್ಕಾರವು ಕೆಲವು ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳ ಮೂಲಕ ಇನ್ನಷ್ಟು ಅಭಿವೃದ್ಧಿ ಪಡಿಸಲು ಪ್ರಯತ್ನಿಸುತ್ತಿದೆ.

**ಸಾವಯವ ಕೃಷಿಯ ಪ್ರಮಾಣ**

ನಮ್ಮ ದೇಶದಲ್ಲಿ ಹಲವು ರಾಜ್ಯಗಳು ಸಾವಯವ ಕೃಷಿಯನ್ನು ವಿಸ್ತರಿಸಲು ಸಾಕಷ್ಟು ಪ್ರಯತ್ನಗಳನ್ನು ಮಾಡುತ್ತಿವೆ. ಸುಮಾರು ೬೬೦೦೦ ಹೆಕ್ಟೇರ್ ಆಹಾರ ಧಾನ್ಯಗಳನ್ನು ಬೆಳೆಯುವ ಸಾಗುವಳಿ ಭೂಮಿ ಈಗಾಗಲೆ ದೃಢೀಕರಣ ಪಡೆದ ಸಾವಯವ ಕೃಷಿಯಾಗಿದೆ. ಅಲ್ಲದೆ ೨.೪ ದಶಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶವು ಸಾವಯವ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತದೆಂದು ಅಂದಾಜು ಮಾಡಲಾಗಿದೆ. ಆದರೆ ವಾಸ್ತವವಾಗಿ ಸಾವಯವ ಕೃಷಿಗೆ ಒಳಪಟ್ಟ ಸಾಗುವಳಿ ಭೂಮಿ ಅತ್ಯಂತ ಅಧಿಕವಿರುವುದು ಗಮನಾರ್ಹವಾಗಿದೆ. ವಿವಿಧ ರಾಜ್ಯಗಳು ಸಾವಯವ ಕೃಷಿಗೆ ಸಾಕಷ್ಟು ಆದ್ಯತೆಯನ್ನು ನೀಡುತ್ತಿವೆ. ಮಹಾರಾಷ್ಟ್ರದಲ್ಲಿ ೨೦೦೩ರಿಂದ ಸುಮಾರು ೫೦೦೦೦ ಹೆಕ್ಟೇರ್ ಭೂಮಿ ಸಾವಯವ ಕೃಷಿ ವ್ಯಾಪ್ತಿಗೆ ಒಳಪಟ್ಟಿದೆ. ಇದರಲ್ಲಿ ಸುಮಾರು ೧೦೦೦೦ ಹೆಕ್ಟೇರ್ ಪ್ರದೇಶವು ದೃಢೀಕರಣ ಪಡೆದ ಸಾವಯವ ಕೃಷಿ ಭೂಮಿಯಾಗಿದೆ. ನಾಗಲ್ಯಾಂಡಿನಲ್ಲಿ ಸುಮಾರು ೩೦೦೦ ಸಾವಿರ ಹೆಕ್ಟೇರ್ ಪ್ರದೇಶ ಸಾವಯವ ವ್ಯಾಪ್ತಿಗೆ ಒಳಪಟ್ಟಿದ್ದು, ಮೆಕ್ಕೆಜೋಳ, ಸೋಯಾಬೀನಾ, ಶುಂಠಿ, ಏಲಕ್ಕಿ, ಮೆಣಸಿನಕಾಯಿ, ಪ್ಯಾಷನ್‌ಫ್ರೂಟ್(Passion fruit) ಗಳನ್ನು ಬೆಳೆಯಲಾಗುತ್ತಿದೆ. ರಾಜಸ್ಥಾನದಲ್ಲಿಯೂ ಕೂಡ ಸುಮಾರು ೫೬೩೧ ಹೆಕ್ಟೇರ್ ಪ್ರದೇಶ ಸಾವಯವ ಕೃಷಿ ವ್ಯಾಪ್ತಿಗೆ ಒಳಪಟ್ಟಿದ್ದು ಹಲವಾರು ಬೆಳೆಗಳನ್ನು ಸಾವಯವದಲ್ಲಿ ಬೆಳೆಯಲಾಗುತ್ತಿದೆ. ಇತರ ರಾಜ್ಯಗಳಂತೆ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಸಾವಯವ ಕೃಷಿಗೆ ಸಾಕಷ್ಟು ಮಹತ್ವವನ್ನು ೨೦೦೮ರಿಂದ ನೀಡಲಾಗುತ್ತಿದೆ. ಅದಕ್ಕಾಗಿ ಕರ್ನಾಟಕ ಸರ್ಕಾರ ಸಾವಯವ ಕೃಷಿ ಮಿಷನ್(Karnataka Organic Agricultural Mission) ಸ್ಥಾಪಿಸಿ ಇದರ ಮೂಲಕ ಸರ್ಕಾರವು ರೈತರಿಗೆ ಸಾವಯವ ಕೃಷಿಗೆ ಸಂಬಂಧಿಸಿದಂತೆ, ಮಾಹಿತಿ, ತರಬೇತಿ, ಕಾರ್ಯಾಗಾರಗಳು ಮತ್ತು ಸಹಾಯಧನವನ್ನು ಒದಗಿಸಿಕೊಡುತ್ತಿದೆ.

**ಭಾರತದಲ್ಲಿ ಸಾವಯವ ಉತ್ಪನ್ನಗಳು**

ಅಂತರ ರಾಷ್ಟ್ರೀಯ ಮಾರುಕಟ್ಟೆಯನ್ನು ಗಮನದಲ್ಲಿಟ್ಟುಕೊಂಡು ನಾವು ಕೃಷಿ ಉತ್ಪನ್ನಗಳನ್ನು ಗುರುತಿಸಿ ಅವುಗಳನ್ನು ಸಾವಯವದಲ್ಲಿ ಬೆಳೆಯಲು ಹೆಚ್ಚು ಪ್ರಾಶಸ್ತ್ಯ ನೀಡಬೇಕು. ಪ್ರಸ್ತುತ ಜಾಗತಿಕ ಮಾರುಕಟ್ಟೆಯಲ್ಲಿ ಅತೀ ಹೆಚ್ಚು ಬೇಡಿಕೆ ಇರುವ ಉತ್ಪನ್ನಗಳೆಂದರೆ ಹಣ್ಣು ಮತ್ತು ತರಕಾರಿಗಳು, ಸಾಂಬಾರ ಪದಾರ್ಥಗಳು, ಔಷಧಿ ಗಿಡಮೂಲಿಕೆಗಳು, ಎಣ್ಣೆ ಬೀಜಗಳು, ಧಾನ್ಯಗಳು, ಹತ್ತಿ, ಗೋಧಿ ಮತ್ತು ಬಾಸುಮತಿ ಅಕ್ಕಿ ಇತ್ಯಾದಿಗಳು. ಇವುಗಳನ್ನು ಸಾವಯವದಲ್ಲಿ ಉತ್ಪಾದಿಸಲು ಬೇಕಾದ ಎಲ್ಲಾ ಅಗತ್ಯ ಕ್ರಮಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದುಕೊಳ್ಳಬೇಕು.

**ಭಾರತದಿಂದ ರಫ್ತಾಗುತ್ತಿರುವ ಸಾವಯವ ಉತ್ಪನ್ನಗಳು**

| ಕ್ರ ಸಂ | ಸಾವಯವ ಆಹಾರ | ಮಾರಾಟ (ಟನ್‌ಗಳಲ್ಲಿ) |
|---|---|---|
| ೧ | ಟೀ | ೩೦೦೦ |
| ೨ | ಕಾಫಿ | ೫೫೦ |

| | | |
|---|---|---|
| ೩ | ಸಾಂಬಾರ ಪದಾರ್ಥಗಳು | ೭೦೦ |
| ೪ | ಅಕ್ಕಿ | ೨೫೦೦ |
| ೫ | ಗೋಧಿ | ೧೧೫೦ |
| ೬ | ಧಾನ್ಯಗಳು | ೩೦೦ |
| ೭ | ಎಣ್ಣೆ ಬೀಜಗಳು | ೧೦೦ |
| ೮ | ಹಣ್ಣು ಮತ್ತು ತರಕಾರಿಗಳು | ೧೮೦೦ |
| ೯ | ಗೋಡಂಬಿ ಬೀಜ | ೩೭೫ |
| ೧೦ | ಹತ್ತಿ | ೧೨೦೦ |
| ೧೧ | ಗಿಡ ಮೂಲಿಕೆಗಳು | ೨೫೦ |
| | **ಒಟ್ಟು** | **೧೧೯೨೫** |

ಹೀಗೆ ಕೇಂದ್ರ ಸರ್ಕಾರವನ್ನೊಳಗೊಂಡು ರಾಜ್ಯ ಸರ್ಕಾರಗಳು ಸಾವಯವ ಕೃಷಿಗೆ ವಿಶೇಷವಾದ ಪ್ರಾಶಸ್ತ್ಯವನ್ನು ನೀಡುತ್ತಿರುವುದರಿಂದ ರೈತರು ರಾಸಾಯನಿಕ ಕೃಷಿಯಿಂದ ಸಾವಯವ ಕೃಷಿಯ ಕಡೆಗೆ ನಿಧಾನವಾಗಿ ತಿರುಗಿಬರುತ್ತಿರುವುದು ಸಾಮಾನ್ಯವಾಗಿದೆ. ಏಕೆಂದರೆ ಭಾರತ ಸರ್ಕಾರವು ಹತ್ತನೆ ಪಂಚವಾರ್ಷಿಕ ಯೋಜನೆಯಲ್ಲಿ ಸಾವಯವ ಕೃಷಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಗಾಗಿ ಸುಮಾರು ರೂ. ೧೦೦ ಕೋಟಿಗಳನ್ನು ವಿನಿಯೋಗ ಮಾಡಿದೆ.

ನಮ್ಮ ದೇಶದಲ್ಲಿ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರವು ಸಾವಯವ ಕೃಷಿಯನ್ನು ದೃಢೀಕರಿಸಲು ಸರಳವಾದ ವಿಧಾನವನ್ನು ಅನುಸರಿಸುತ್ತದೆ. ಹಾಗಾಗಿ ಕೃಷಿಯನ್ನು ದೃಢೀಕರಿಸಲು ಸರಳವಾದ ವಿಧಾನವನ್ನು ಅನುಸರಿಸುತ್ತದೆ. ಹಾಗಾಗಿ ಸೀಮಾಂತ ಮತ್ತು ಚಿಕ್ಕ ರೈತರಾದಿಯಾಗಿ ಅತ್ಯಂತ ಸುಲಭವಾಗಿ ತಮ್ಮ ಕೃಷಿ ವ್ಯವಸ್ಥೆಗೆ ಸಾವಯವ ದೃಢೀಕರಣ ಪ್ರಮಾಣ ಪತ್ರವನ್ನು ಪಡೆಯಬಹುದಾಗಿದೆ. ಅಲ್ಲದೆ ರಾಜ್ಯಸರ್ಕಾರಗಳು ತಮ್ಮ ಕೃಷಿ ಇಲಾಖೆಯ ಮೂಲಕ ಅತ್ಯಂತ ಕಡಿಮೆ ಶುಲ್ಕದೊಂದಿಗೆ ದೃಢೀಕರಣ ನೀಡುವ ವ್ಯವಸ್ಥೆಯನ್ನು ಮಾಡಿವೆ. ದೃಢೀಕರಣಕ್ಕೆ ಒಳಪಟ್ಟಂತಹ ಕೃಷಿಕರು ತಮ್ಮ ಉತ್ಪನ್ನಗಳ ಪ್ಯಾಕೆಟ್‌ಮೇಲೆ ಸರ್ಕಾರದ ಅಧಿಕೃತ ಚಿಹ್ನೆಯಾದ "ಇಂಡಿಯನ್‌ಆರ್ಗ್ಯಾನಿಕ್" ಎಂದು ನಮೂದಿಸಿ ರಫ್ತು ಮಾಡಬಹುದಾಗಿದೆ. ಇಂತಹ ಚಿಹ್ನೆ ಹೊಂದಿದ ವಸ್ತುಗಳು ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇ.೨೫ ರಿಂದ ಶೇ ೫೦ಕ್ಕಿಂತ ಹೆಚ್ಚು ಬೆಲೆಗಳಿಸುತ್ತವೆ. ಈ ವಸ್ತುಗಳ ಬೆಲೆಗಳು ರಾಸಾಯನಿಕದಲ್ಲಿ ಉತ್ಪಾದಿಸಿದ ಉತ್ಪನ್ನಗಳ ಬೆಲೆಗಳಿಗಿಂತ ಅಧಿಕವಾಗಿದ್ದರೂ ಗ್ರಾಹಕರು ಆರೋಗ್ಯದ ದೃಷ್ಟಿಯಿಂದ ಹೆಚ್ಚು ಕೊಂಡುಕೊಳ್ಳುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಕೇವಲ ಬೃಹತ್‌ನಗರಗಳಲ್ಲಿ ವಾಸಿಸುವಂತಹ ಕೆಲವೇ ಶ್ರೀಮಂತ ಮತ್ತು ಮಧ್ಯಮ ವರ್ಗದ ಜನರು ಸಾವಯವ ಉತ್ಪನ್ನಗಳನ್ನು ಕೊಂಡುಕೊಳ್ಳುತ್ತಾರೆ. ಆದ್ದರಿಂದ ನಮ್ಮ ಒಟ್ಟು ಸಾವಯವ ಉತ್ಪನ್ನದಲ್ಲಿ ಶೇ.೫೦ಕ್ಕಿಂತ ಹೆಚ್ಚಿನ ಭಾಗವು ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಹೀಗೆ ಸಾವಯವಯ ಕೃಷಿ ನಮ್ಮ ದೇಶದಲ್ಲಿ ಪ್ರಸ್ತುತ ದಿನಗಳಲ್ಲಿ ಬೆಳೆಯುತ್ತಿರುವುದರಿಂದ ಅದನ್ನು ಉತ್ತೇಜಿಸಲು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

**ಕರ್ನಾಟಕದಲ್ಲಿ ಸಾವಯವ ಕೃಷಿ**

ನಮ್ಮ ರಾಜ್ಯದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲು ಇತರ ರಾಜ್ಯಗಳಂತೆ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಷ್ಟ್ರಮಟ್ಟದಲ್ಲಿರುವಂತೆ ನಮ್ಮ ರಾಜ್ಯದಲ್ಲಿ ಮಣ್ಣಿನ ಫಲವತ್ತತೆಯನ್ನು ಕಾಯ್ದುಕೊಂಡು ರಾಸಾಯನಿಕರಹಿತ ಮತ್ತು ಪರಿಸರಸ್ನೇಹಿ ಸಾವಯವ ವಸ್ತುಗಳನ್ನು ಉತ್ಪಾದಿಸುವ ಉದ್ದೇಶದಿಂದ ಮಾರ್ಚ್ ೨೦೦೪ ರಂದು ಕರ್ನಾಟಕ ರಾಜ್ಯ ಸಾವಯವ ವ್ಯವಸಾಯ ಯೋಜನೆಯನ್ನು ಜಾರಿಗೆ ತಂದಿತು. ಇದರ ಬಹುಮುಖ್ಯ ಉದ್ದೇಶಗಳೆಂದರೆ;

೧. ರೈತರ ಸಾಲದ ಹೊರೆಯನ್ನು ಕಡಿಮೆ ಮಾಡುವುದು ಮತ್ತು ಅವರಲ್ಲಿ ಸ್ಥಿರತೆ ಮತ್ತು ಸ್ವಾಭಿಮಾನವನ್ನು ವೃದ್ಧಿಸುವುದು.

೨. ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವುದು ಮತ್ತು ಉತ್ಪಾದಕತೆಯನ್ನು ವೃದ್ಧಿಸುವುದು.

೩. ಕೃಷಿ ಉತ್ಪಾದನ ವೆಚ್ಚವನ್ನು ತಗ್ಗಿಸುವುದು.

೪. ಉತ್ತಮ ಗುಣಮಟ್ಟದ ಉತ್ಪನ್ನದೊಂದಿಗೆ ರೈತರ ಆದಾಯವನ್ನು ಅಧಿಕಗೊಳಿಸುವುದು.

೫. ಸಾಂಪ್ರದಾಯಿಕ ಬೆಳೆಗಳನ್ನು ಪ್ರೋತ್ಸಾಹಿಸುವುದರ ಮೂಲಕ ಆಹಾರ ಭದ್ರತೆ.

೬. ಗ್ರಾಮೀಣ ಉದ್ಯೋಗವಕಾಶಗಳನ್ನು ಹೆಚ್ಚಿಸುವುದು.

೭. ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ಮುಕ್ತಗೊಳಿಸುವುದರೊಂದಿಗೆ ಮನುಷ್ಯ ಮತ್ತು ಪ್ರಾಣಿಗಳ ಆರೋಗ್ಯವನ್ನು ರಕ್ಷಿಸುವುದು.

೮. ಬರ ಪೀಡಿತ ಮತ್ತು ಮಳೆ ಆಶ್ರಿತ ಪ್ರದೇಶಗಳ ರೈತರ ಸಮಸ್ಯೆಗಳನ್ನು ಸಮರ್ಪಕವಾಗಿ ಮತ್ತು ಪರಿಣಾಮಕಾರಿಯಾಗಿ ಎದುರಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಹೀಗೆ ಈ ಎಲ್ಲಾ ಉದ್ದೇಶಗಳನ್ನು ಇಟ್ಟುಕೊಂಡು ಸಾವಯವ ಕೃಷಿಯನ್ನು ಬೆಳೆಸಲು ಕರ್ನಾಟಕ ರಾಜ್ಯ ಸರ್ಕಾರ ೨೦೦೪ರಲ್ಲಿ ಕಾರ್ಯಪ್ರವೃತ್ತವಾಯಿತು. ತದನಂತರ ೨೦೦೮ರಲ್ಲಿ ನಮ್ಮ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರವು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಿತು. ಅದುವರೆಗೂ ಸಾವಯವ ಕೃಷಿಯನ್ನು ಕೃಷಿ ಇಲಾಖೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿತ್ತು. ಈ ಇಲಾಖೆ ಪ್ರತಿಯೊಂದು ತಾಲೂಕಿನಲ್ಲಿ ಒಂದು ಗ್ರಾಮವನ್ನು ಆಯ್ಕೆಮಾಡಿಕೊಂಡು ಆ ಗ್ರಾಮಗಳಲ್ಲಿ ಸಾವಯವ ಕೃಷಿಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿತ್ತು. ಅಂತಹ ಯೋಜನೆಗಳಿಗೆ ಒಳಪಟ್ಟ ಗ್ರಾಮಗಳನ್ನು ಸಾವಯವ ಗ್ರಾಮಗಳೆಂದು ಕರೆಯಲಾಗುತ್ತಿತ್ತು.. ಆದರೆ ಈಗಿನ ಸರ್ಕಾರವು ಇದನ್ನು ರದ್ದುಪಡಿಸಿ ಕರ್ನಾಟಕ ಸಾವಯವ ಕೃಷಿ ಮಿಷನ್‌ಸ್ಥಾಪಿಸಿದೆ. ಇದಕ್ಕೆ ಒಬ್ಬ ಅಧ್ಯಕ್ಷರನ್ನು ಸರ್ಕಾರವೇ ನೇಮಿಸುತ್ತದೆ. ಈ ಮಿಷನ್‌ಕೃಷಿ ಇಲಾಖೆಯ ನೆರವಿನೊಂದಿಗೆ ಪ್ರತಿಯೊಂದು ತಾಲ್ಲೂಕಿನಲ್ಲಿ ಸಾವಯವ ರೈತರ ಸಂಘಗಳನ್ನು ಸ್ಥಾಪಿಸಿದೆ. ಈ ಸಂಘಗಳಿಗೆ ಅನುದಾನಗಳನ್ನು ನೀಡುವುದರ ಮೂಲಕ ಸಾವಯವ ಕೃಷಿಯನ್ನು ಹೆಚ್ಚು ಜನಪ್ರಿಯಗೊಳಿಸುತ್ತಿದೆ. ಉದಾ: ಶಿವಮೊಗ್ಗ ಜಿಲ್ಲೆಯಲ್ಲಿ ಸಾವಯವ ಕೃಷಿ ಹೇಗೆ ಪ್ರಚಾರ ಪಡೆದುಕೊಳ್ಳುತ್ತಿದೆ ಮತ್ತು ಅದರ ಕಾರ್ಯನಿರ್ವಹಣೆ ಕುರಿತು ಇಲ್ಲಿ ವಿಶ್ಲೇಷಿಸಬಹುದು.

**ಶಿವಮೊಗ್ಗ ಜಿಲ್ಲೆಯಲ್ಲಿ ಸಾವಯವ ಕೃಷಿ**

ನಮ್ಮ ರಾಜ್ಯದಲ್ಲಿ ಸುಮಾರು ೩೦ ಜಿಲ್ಲೆಗಳಿದ್ದು ಅವುಗಳಲ್ಲಿ ಶಿವಮೊಗ್ಗವು ಕೂಡ ಒಂದು ಪ್ರಮುಖ ಜಿಲ್ಲೆಯಾಗಿದೆ. ಏಕೆಂದರೆ ಇತರ ಜಿಲ್ಲೆಗಳಿಗಿಂತ ಮೊದಲು ಸಾವಯವ ಕೃಷಿ ಈ ಜಿಲ್ಲೆಯಲ್ಲಿ ಪ್ರಾರಂಭವಾಯಿತು. ಈ ಜಿಲ್ಲೆಯಲ್ಲಿ ಸಾವಯವ ಕೃಷಿ ಪದ್ಧತಿಯನ್ನು ೧೯೮೦ಕ್ಕಿಂತ ಮೊದಲೇ ಅಳವಡಿಸಿಕೊಂಡು ಬಂದ ಹಲವಾರು ಪ್ರಗತಿಪರ ರೈತರಿದ್ದಾರೆ. ಅವರು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಕೂಡ ಹೊಂದಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಶಿವಮೊಗ್ಗ ಜಿಲ್ಲೆಯು ಬಹಳ ಹಿಂದಿನಿಂದಲೂ ಸಾವಯವ ಕೃಷಿಯಲ್ಲಿ ಮುಂಚೂಣಿಯಲ್ಲಿದೆ. ೨೦೦೪ ರಿಂದ ೨೦೦೮ರ ವರೆಗೆ ರಾಜ್ಯ ಸರ್ಕಾರವು ಸಾವಯವ ಕೃಷಿಯನ್ನು, ಸಾವಯವ ಕೃಷಿ ಘಟಕವನ್ನು ಸ್ಥಾಪಿಸಿ ಕೃಷಿ ಇಲಾಖೆಯ ಮೂಲಕ ಸಾವಯವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿತ್ತು. ಅದರಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಕೆಲವೊಂದು ತಾಲ್ಲೂಕುಗಳನ್ನು ಆಯ್ದುಕೊಂಡು ಅವುಗಳಲ್ಲಿ ಸಾವಯವ ಗ್ರಾಮ ಎಂಬ ಯೋಜನೆಯ ಮೂಲಕ ಸಾವಯವ ಕೃಷಿ ಅನುಷ್ಟಾನಗೊಳಿಸಲಾಗುತ್ತಿತ್ತು. ತದನಂತರ ಕೆಲವೊಂದು ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸಿ ಅವುಗಳಿಗೆ ಸಾವಯವ ಕೃಷಿಯನ್ನು ವಿಸ್ತರಿಸುವ ಹೊಣೆಗಾರಿಕೆ ನೀಡಲಾಯಿತು. ಅದರಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಈ ಕೆಳಗಿನ ಕೆಲವೊಂದು ಸರ್ಕಾರೇತರ ಸಂಸ್ಥೆಗಳನ್ನು ಗುರುತಿಸಿ ಸಾವಯವ ಕೃಷಿಯ ಜವಾಬ್ದಾರಿ ವಹಿಸಲಾಯಿತು. ಅಂತಹ ಸಂಸ್ಥೆಗಳೆಂದರೆ:

೧. ಪುರುಷೋತ್ತಮ ಸಾವಯವ ಕೃಷಿ ಪರಿಹಾರ (ರಿ) ತೀರ್ಥಹಳ್ಳಿ

೨. ಅಕ್ಷಯ ಜೀವನ ಸಾವಯವ ಕೃಷಿ ಪರಿಹಾರ (ರಿ) ಚಕ್ಕೋಡ ಬೈಲು, ತೀರ್ಥಹಳ್ಳಿ

೩. ಸೋಸಿಯಲ್‌ಅಕ್ಷನ್‌ಫಾರ್ ಹೆಲ್ತ್‌ಅವೇರೆನ್ಸ್, ನಳನಿಕೊಪ್ಪ ಶಿಕಾರಿಪುರ

೪. ಮಾನಸ ಗ್ರಾಮೀಣ ಸಂಸ್ಥೆ, ಒಟೂರು ಸೊರಬ

೫. ಕುಟುಂಬ ಶಿಕ್ಷಣ ಸಂಸ್ಥೆ, ಹೊಳಹಳ್ಳಿ ಶಿವಮೊಗ್ಗ

೬. ಸಾವಯವ ಕೃಷಿ ಉತ್ತೇಜನ ಸಂಘ, ಭದ್ರಾವತಿ

೭ ಗ್ರಾಮ ಭಾರತಿ ಸಂಸ್ಥೆ ಹೊಸನಗರ ಶಿವಮೊಗ್ಗ

ಹೀಗೆ ಏಳು ಸರ್ಕಾರೇತರ ಸಂಸ್ಥೆಗಳಿಗೆ ಸಾವಯವ ಕೃಷಿಯನ್ನು ವಿಸ್ತರಿಸುವ ಜವಾಬ್ದಾರಿಯನ್ನು ವಹಿಸಿತು. ಈ ಸಂಸ್ಥೆಗಳಿಗೆ ಸರ್ಕಾರವು ಕೃಷಿ ಇಲಾಖೆಯ ಮೂಲಕ ಸಹಾಯಧನ, ಸಾವಯವ ಪರಿಕರಗಳನ್ನು ಒದಗಿಸುತ್ತಿತ್ತು.. ಆದರೆ ೨೦೦೮ ರಿಂದೆ ಸಾವಯವ ಕೃಷಿಯನ್ನು ಹೆಚ್ಚು ಉತ್ತೇಜಿಸುವ ಉದ್ದೇಶದಿಂದ ಸರ್ಕಾರವು ಕೃಷಿ ಇಲಾಖೆಯನ್ನು ಕೇವಲ ಯೋಜನೆಗೆ ಹಣಕಾಸು ಒದಗಿಸುವ ಕಾರ್ಯಕ್ಕೆ ಸೀಮಿತಗೊಳಿಸಿದೆ. ಸಾವಯವ ಕೃಷಿ ಮಿಷನ್‌ನೇರವಾಗಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಸಾವಯವ ಕೃಷಿಕರ ಸಂಘಗಳನ್ನು ಸ್ಥಾಪಿಸಿ ಅವುಗಳ ಮೂಲಕ ರೈತರು ಸಾವಯವ ಕೃಷಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ. ಸರ್ಕಾರ ಕೃಷಿ ಇಲಾಖೆಯ ಮೂಲಕ ನೇರವಾಗಿ ಈ ಸಂಘಗಳಿಗೆ ಹಣಕಾಸಿನ ನೆರವನ್ನು ನೀಡುತ್ತದೆ. ಪ್ರಸ್ತುತ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದೊಂದು ಸಾವಯವ ಕೃಷಿಕರ ಸಂಘ ಕಾರ್ಯ ನಿರ್ವಹಿಸುತ್ತಿದೆ. ಅವುಗಳೆಂದರೆ;

- ಪುರುಷೋತ್ತಮರಾಯರ ಸಾವಯವ ಕೃಷಿಕರ ಪರಿವಾರ, ತೀರ್ಥಹಳ್ಳಿ
- ಅಶ್ವಿನಿ ಸಾವಯವ ಕೃಷಿಕರ ಪರಿವಾರ, ಹೊಸನಗರ
- ಶರಾವತಿ ಸಾವಯವ ಕೃಷಿ ಈ ಕೆಳಗಿನ ಪರಿಕರಗಳಿಗೆ ರಾಜ್ಯ ಸಾವಯವ ಕೃಷಿ ಮಿಷನ್‌ಕೃಷಿ ಇಲಾಖೆಯ ಮೂಲಕ ನೇರವಾಗಿ ಹಣಕಾಸನ್ನು ಸಾವಯವ ಕೃಷಿಕರಿಗೆ ನೀಡುತ್ತದೆ. ಇದನ್ನು ಕ್ರಿಯಾ ಯೋಜನೆ ಎಂದು ಕರೆಯಲಾಗುತ್ತದೆ.

**ಕ್ರಿಯಾ ಯೋಜನೆ ೨೦೦೮೯–೨೦೦೯**

ಕ್ರ.ಸಂ. ಯೋಜನೆಗಳ ವಿವರ, ಸರ್ಕಾರದ ಸಹಾಯಧನ (ಶೇ). ಗರಿಷ್ಟ(ರೂ.ಗಳು) ಪ್ರಥಮ ಹಂತದಲ್ಲಿ ಪ್ರತಿ ತಾಲ್ಲೂಕಿನ ಗುರಿ

೧. ಹಸಿರೆಲೆ ಗೊಬ್ಬರ ಬೀಜಗಳ ಖರೀದಿಗೆ ಪ್ರತಿ ಎಕರೆಗೆ ೨೫೦/-೧೦೨ ಎಕರೆಗೆ

೨. ದೇಶೀಯ ಬೀಜಗಳ ಖರೀದಿಗೆ ಪ್ರತಿ ಎಕರೆಗೆ ೨೫೦/- ೬೦ ಎಕರೆಗೆ

೩. ಎರೆತೊಟ್ಟಿ ನಿರ್ಮಾಣ ಘಟಕವೊಂದಕ್ಕೆ ೨೦೦೦/-೬೦ ಘಟಕಗಳು

೪. ಬಯೋ ಡೈಜೆಸ್ಟರ್ ಘಟಕವೊಂದಕ್ಕೆ ೧೦೦೦೦/- ೩೦ ಘಟಕಗಳು

೫. ಗೋರಾತಿ/ಹವಿ/ಕೊಟ್ಟಿಗೆಯಲ್ಲಿ ಗೋಮೂತ್ರ ಸಂಗ್ರಹಣೆಗೆ/ಕಲ್ಲ ಚಪ್ಪಡಿ ಹಾಸಲು/ಗಾರೆ ಪ್ರತಿ ಕುಟುಂಬಕ್ಕೆ ೩೦೦೦/- ೩೦ ಘಟಕಗಳು

೬. ಜೀವಾಮೃತ ಅಥವಾ ದ್ರವರೂಪಿ ಗೊಬ್ಬರ ತಯಾರಿಸಲು ಬೇಕಾಗುವ ಪ್ಲಾಸ್ಟಿಕ್‌ಡ್ರಮ್‌ಖರೀದಿ ಪ್ರತಿ ಡ್ರಂಗೆ ೪೦೦/- ೬೦ ಡ್ರಂ

೭. ಸುಣ್ಣ/ಜಿಪ್ಸಂ ಪ್ರತಿ ಟನ್‌ಗೆ ೧೦೦೦/-೩೦ ತಾಲ್ಲೂಕಿಗೆ

೮. ಕೃಷಿ ಹೊಂಡ ಪ್ರತಿ ಹೊಂಡಕ್ಕೆ ೬೦೦೦/-೩೦ ತಾಲ್ಲೂಕಿಗೆ

೯. ಇಂಗು ಗುಂಡಿ ಪ್ರತಿ ಕುಟುಂಬಕ್ಕೆ ೧೦೦೦/೧೮೦ ತಾಲ್ಲೂಕಿಗೆ

೧೦. ಸಮಪಾಳಿ ಬದುಗಳಿಗೆ ಪ್ರತಿ ಕುಟುಂಬಕ್ಕೆ ೧೦೦೦/-೧೮೦ ತಾಲ್ಲೂಕಿಗೆ

೧೧. ಕೊಳಮೌನಿ/ತೆರೆದ ಬಾವಿ ಮರುಪೂರಣ ಕೊಳವೆ/ತೆರದಬಾವಿ ಮರುಪೂರಣ ಪ್ರತಿ ಕುಟುಂಬಕ್ಕೆ ೨೫೦೦/-೧೮೦ ತಾಲ್ಲೂಕಿಗೆ

೧೨. ಜೇನು ಸಾಕಾಣಿಕೆಗೆ ಪ್ರತಿ ಪೆಟ್ಟಿಗೆ ೧೦೦೦/-೬೦ ತಾಲ್ಲೂಕಿಗೆ

೧೩. ಮೇಲಿನ ಸಂಪನ್ಮೂಲ ಅಭಿವೃದ್ಧಿ ಪ್ರತಿ ಕುಟುಂಬಕ್ಕೆ ೧೦೦೦/-೯೦ ತಾಲ್ಲೂಕಿಗೆ

೧೪. ಗೋಬರ ಗ್ಯಾಸ್‌ಸ್ಥಾವರ ಪ್ರತಿ ಘಟಕಕ್ಕೆ ೧೦೦೦೦/-೭೦ ಘಟಕಕ್ಕೆ

೧೫. ಶೌಚಾಲಯ ಪ್ರತಿ ಶೌಚಕ್ಕೆ ೨೦೦೦/-೩೦ ತಾಲ್ಲೂಕಿಗೆ

೧೬. ಕೈತೋಟ ತರಕಾರಿ ಬೆಳೆಯಲು ಪ್ರತಿ ಕುಟುಂಬಕ್ಕೆ ೨೦೦೦/-೩೦ ತಾಲ್ಲೂಕಿಗೆ

೧೭. ಧನ್ಯ ಸಂಗ್ರಹಣೆಗಾಗಿ/ಪಣತ ಪ್ರತಿ ಕುಟುಂಬಕ್ಕೆ ೨೦೦೦/-೩೦ ತಾಲ್ಲೂಕಿಗೆ

೧೮. ದೇಶಿಯ ಅಕಳು ಖರೀದಿಗೆ ಪ್ರತಿ ಆಕಳಿಗೆ ೩೦೦೦೦/-೩೦ ತಾಲ್ಲೂಕಿಗೆ

೧೯. ಹಾಚ್‌ಪಂಪ್‌ಪ್ರತಿ ಪಂಪ್‌ಗೆ ೭೫೦/-೧೦ ತಾಲ್ಲೂಕಿಗೆ.

ಹೀಗೆ ಸರ್ಕಾರವು ಒಂದು ಕ್ರಿಯೆ ಯೋಜನೆಯನ್ನು ಪ್ರಾರಂಭಿಸಿದ್ದು. ಈ ಯೋಜನೆಯ ಮೂಲಕ ಸಾವಯವ ರೈತರಿಗೆ ವಿವಿಧ ರೀತಿಯ ಪರಿಕರಗಳನ್ನು ಖರೀದಿಸಲು ಸಹಾಯಧನ ನೀಡಿ ಆ ಮೂಲಕ ಸಾವಯವ ಕೃಷಿಯನ್ನು ಅಭಿವೃದ್ಧಿಪಡಿಸುತ್ತಿದೆ. ಇದರಂತೆ ನಮ್ಮ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಸಾವಯವ ಕೃಷಿಕರ ಪರಿವಾರಗಳನ್ನು ಆರಂಭಿಸಿ ಅವುಗಳ ಮೂಲಕ ಸದಸ್ಯರನ್ನು ಆಯ್ಕೆ ಮಾಡಿಕೊಂಡು ಸಾವಯವ ವಿಧಾನಗಳನ್ನು ಅಳವಡಿಸಿಕೊಳ್ಳಲು ಮಾಹಿತಿ, ತರಬೇತಿ, ಇತ್ಯಾದಿಗಳನ್ನು ನೀಡಲಾಗುತ್ತದೆ. ಪ್ರಸ್ತುತ ನಮ್ಮ ರಾಜ್ಯದಲ್ಲಿ ಇತರ ರಾಜ್ಯಗಳಂತೆ ಸಾವಯವ ಕೃಷಿಯನ್ನು ಪ್ರೋತ್ಸಾಹಿಸುವ ಹಲವಾರು ಕಾರ್ಯಕ್ರಮಗಳು, ಯೋಜನೆಗಳು ಸಮರ್ಪಕವಾಗಿ ಜಾರಿಗೆ ಬಂದಿವೆ.

# ಸಾವಯವ ಕೃಷಿ ಒಂದು ವಿಶ್ಲೇಷಣೆ (5)

**ಸಾವಯವ ಮತ್ತು ರಾಸಾಯನಿಕ ಕೃಷಿಗೆ ಇರುವ ವ್ಯತ್ಯಾಸಗಳು**

ಇತ್ತೀಚಿನ ದಿನಗಳಲ್ಲಿ ಸಾವಯವ ಕೃಷಿ ವಿಶ್ವದಾದ್ಯಂತ ಸಾಕಷ್ಟು ವೇಗವಾಗಿ ಬೆಳೆಯುತ್ತಿದೆ. ಇಂತಹ ಕೃಷಿಯು ಪ್ರಸ್ತುತ ದಿನಗಳಲ್ಲಿ ದೊಡ್ಡ ಪ್ರಮಾಣದ ರಾಸಾಯನಿಕ ಕೃಷಿಗಿಂತ ಭಿನ್ನವಾಗಿದೆ. ಅಂತಹ ಭಿನ್ನತೆಗಳೆಂದರೆ:

- ಅಸಾವಯವ ಅಥವಾ ರಾಸಾಯನಿಕ ಕೃಷಿಯು ನಾಟಿಗೆ ಮೊದಲು ಮತ್ತು ನಂತದ ದೊಡ್ಡ ಕೃಷಿ ಉಪಕರಣಗಳು, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಕೆ ಮಾಡಿಕೊಳ್ಳುತ್ತದೆ. ಆದ್ದರಿಂದ ರಾಸಾಯನಿಕ ಕೃಷಿಯಲ್ಲಿ ಬಹಟ್ಟು ಮಟ್ಟಿಗೆ ಬೆಳೆಗಳ ಕೇಂದ್ರೀಕರಣವಿರುತ್ತದೆ. ಆದರೆ ಸಾವಯವ ಕೃಷಿ ಬೆಳೆಗಳಲ್ಲಿ ವೈವಿಧ್ಯತೆ ಹೊಂದಿರುತ್ತದೆ.
- ಸಾವಯವ ರೈತ ದೊಡ್ಡ ಮೊತ್ತದ ಸಾಲದ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಅವರು ಬಾಹ್ಯವಾಗಿ ಅತಿ ಹೆಚ್ಚು ವೆಚ್ಚದಾಯಕ ಒಳಸುರಿಗಳನ್ನು ಕೊಂಡು ಕೊಳ್ಳುವುದಿಲ್ಲ ಹಾಗೂ ಅವರ ಕೃಷಿ ಭೂಮಿ ಅತ್ಯಂತ ವೈವಿಧ್ಯತೆಯನ್ನು ಹೊಂದಿರುವುದರಿಂದ ವೆಚ್ಚ ಮತ್ತು ಆದಾಯಗಳು ವರ್ಷಪೂರ್ತಿ ಸಮವಾಗಿ ಹಂಚಲ್ಪಟ್ಟಿರುತ್ತದೆ. ಆದರೆ ಅಸಾವಯವ ಕೃಷಿಯಲ್ಲಿ ಸಾಲದ ಅವಶ್ಯಕತೆ ಅತ್ಯಂತ ಹೆಚ್ಚಾಗಿರುತ್ತದೆ. ಅಲ್ಲದೆ ಅವರು ಒಂದೇ ರೀತಿ ಬೆಳೆಗಳನ್ನು ಮಾತ್ರ ಬೆಳೆಯುತ್ತಿರುತ್ತಾರೆ.
- ಸಾವಯವ ಕೃಷಿ ಹಿಡುವಳಿಗಳು ಚಿಕ್ಕ ಮತ್ತು ಸೀಮಾಂತ ಹಿಡುವಳಿ ಗಾಳಾಗಿರುತ್ತಯವೆ. ಆದರೆ ರಾಸಾಯನಿಕ ಕೃಷಿ ಹಿಡುವಳಿಗಳು ಅತ್ಯಂತ ದೊಡ್ಡ ಹಿಡುವಳಿಗಾಳಾಗಿರುತ್ತವೆ.
- ಸಾವಯವ ಕೃಷಿಕರು ಯಾಂತ್ರಿಕ ವಿಧಾನಗಳ ಮೂಲಕ ಬೆಳೆಗಳನ್ನು ಬೆಳೆಯುತ್ತಾರೆ ಮತ್ತು ಸುಗ್ಗಿ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಅಲ್ಲದೆ ಅದು ಸಾವಯವ ಎರೆಹುಳು ಗೊಬ್ಬರ, ಜೈವಿಕ ಗೊಬ್ಬರ ಮತ್ತು ಔಷಧಿಗಳನ್ನು ಉಪಯೋಗಿಸುತ್ತದೆ. ಆದರೆ ಅಸಾವಯವ ಕೃಷಿಕರ ಸಂಪೂರ್ಣವಾಗಿ ರಾಸಾಯನಿಕ ಗೊಬ್ಬರ, ಔಷಧಿಗಳು, ಬೆಳವಣಿಗೆಯ ನಿಯಂತ್ರಕ ಮತ್ತು ವೇಗರ್ವಕಗಳು, ಉದ್ದೀಪನಗೊಳಿಸುವಂತಹ ರಾಸಾಯನಿಕಗಳನ್ನು ಹೆಚ್ಚಾಗಿ ಬಳಸುತ್ತಾರೆ.

- ಸಾವಯವ ಕೃಷಿಯಲ್ಲಿ ಉಪಯೋಗಿಸುವ ತಂತ್ರಜ್ಞಾನವು, ನೈಸರ್ಗಿಕ, ಪರಿಸರ ಸ್ನೇಹಿ ಮತ್ತು ಸುಸ್ಥಿರವಾದಂತದ್ದು. ಆದರೆ ರಾಸಾಯನಿಕ ಕೃಷಿ ತಂತ್ರಜ್ಞಾನ ಅಸ್ಥಿರ ಪರಿಸರ ಮಾಲಿನ್ಯ ಮತ್ತು ಮಣ್ಣಿನ ಫಲವತ್ತತೆಯನ್ನು ನಾಶಮಾಡುವಂತಹದ್ದಾಗಿರುತ್ತದೆ.
- ಸಾವಯವ ವಿಧಾನಗಳಿಲಿಂದ ತಯಾರಿಸಿದ ಉತ್ಪನ್ನಗಳು ಅತ್ಯಂತ ರುಚಿಕರ, ಸುವಾಸನೆಯುಕ್ತವಾಗಿರುವುದಲ್ಲದೆ, ರಾಸಾಯನಿಕಗಳಿಂದ ಮುಕ್ತವಾಗಿ ಬಹಳ ತಾಜತನವನ್ನು ಹೊಂದಿರುತ್ತವೆ. ಆದರೆ ಅಸಾವಯವ ಕೃಷಿಯ ಉತ್ಪನ್ನಗಳು ರುಚಿರಹಿತ ವಿಷಪೂರಿತವಾಗಿದ್ದು ಆರೋಗ್ಯದ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತವೆ.
- ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ನೇರವಾದ, ಚಿಕ್ಕದಾದ ವ್ಯಾಪ್ತಿಯೊಂದಿರುವಂತಹದ್ದು. ಆದರೆ ರಾಸಾಯನಿಕ ಕೃಷಿ ಉತ್ಪನ್ನಗಳಿಗೆ ಅತ್ಯಂತ ದೂರದ ವಿಶಾಲವಾದ ಮಾರುಕಟ್ಟೆ ಇರುತ್ತದೆ.
- ಸಾವಯವ ಕೃಷಿಯು ಅಲ್ಪಕಾಲದಲ್ಲಿ ರೈತರಿಗೆ ಸಾಕಷ್ಟು ಆದಾಯವನ್ನು ನೀಡುವಂತ ಕೃಷಿಯಲ್ಲ. ಇದು ರೈತರಿಗೆ ದೀರ್ಘಾವಧಿಯಲ್ಲಿ ಸಾಕಷ್ಟು ಪ್ರತಿಫಲ ನೀಡುತ್ತದೆ ಹಾಗೂ ಪ್ರತಿಫಲ ನಿರಂತರವಾಗಿ ಅಧಿಕವಾಗುತ್ತದೆ.. ಆದರೆ ಅಸಾವಯವ ಕೃಷಿಯಲ್ಲಿ ರೈತರಿಗೆ ದೊರಕುವ ಆದಾಯ ಹೆಚ್ಚು ಇದ್ದು ಅಲ್ಪಾವಧಿಗೆ ಸೀಮಿತವಾಗಿರುತ್ತದೆ. ಹೀಗೆ ಸಾವಯವದಲ್ಲಿ ಪತಿಫಲವು ಸುಸ್ಥಿರ ಮತ್ತು ದೀರ್ಘಾವಧಿಗೆ ಸಂಬಂಧಿಸಿರುತ್ತದೆ. ರಾಸಾಯನಿಕ ಕೃಷಿಯಲ್ಲಿ ಪ್ರತಿಫಲ ಅಲ್ಪಾವಧಿಗೆ ಸೀಮಿತವಾಗಿದ್ದು ದೀರ್ಘಾಕಾಲದಲ್ಲಿ ಇಳಿಮುಖವಾಗುತ್ತದೆ.

ಸಾವಯವ ಮತ್ತು ಅಸಾವಯವ ಕೃಷಿಯ ಮಧ್ಯ ಹಲವಾರು ವ್ಯತ್ಯಾಸಗಳು ಕಂಡುಬರುತ್ತವೆ. ಇವುಗಳ ವೆಚ್ಚ ಆದಾಯ, ಉತ್ಪನ್ನಗಳ ಗುಣಮಟ್ಟ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಭಿನ್ನತೆ ಹೊಂದಿದಂತಹ ಕೃಷಿ ವಿಧಾನವಾಗಿದೆ. ಸಾವಯವವಲ್ಲದ ಉತ್ಪನ್ನಗಳನ್ನು ಸೇವಿಸುವುದರಿಂದ ಹಲವಾರು ರೀತಿಯ ತೊಂದರೆಗಳು ಉಂಟಾಗುತ್ತದೆ ಎಂಬ ಭಾವನೆ ಮತ್ತು ತಿಳಿವಳಿಕೆ ಜನರಲ್ಲಿ ಮೂಡುತ್ತಿದೆ. ಅಲ್ಲದೆ ಇದನ್ನು ಅನೇಕ ಅಧ್ಯಯನಗಳು ಪುಷ್ಟೀಕರಿಸುತ್ತವೆ. ಅಸಾವಯವ ಉತ್ಪನ್ನಗಳನ್ನು ಅನುಭೋಗಿಸುವುದರಿಂದ ರಕ್ತದ ಒತ್ತಡ, ಹೃದಯ ಮತ್ತು ಮೂತ್ರಪಿಂಡ ತೊಂದರೆಗಳು, ಮಾನಸಿಕ ವ್ಯಾಕುಲತೆ, ಕ್ಯಾನ್ಸರ್ ಇತ್ಯಾದಿ ರೋಗಗಳು ಹೆಚ್ಚಾಗುತ್ತವೆ ಎಂಬುದಾಗಿ ಥಾಕೂರ್ ಮತ್ತು ಶರ್ಮ(೨೦೦೫) ತಮ್ಮ ಅಧ್ಯಯನದಲ್ಲಿ ತಿಳಿಸುತ್ತಾರೆ. ಹಾಗಾಗಿ ಪ್ರಸ್ತುತ ದಿನಗಳಲ್ಲಿ ನಮ್ಮ ದೇಶದಲ್ಲಿ ರೈತರು ಅತಿಯಾಗಿ ರಾಸಾಯನಿಕ ಒಳಸುರಿಗಳನ್ನು ಅಧಿಕ ಬೆಲೆ ಕೊಟ್ಟು ಕೊಂಡು ತಮ್ಮ ಜಮೀನುಗಳಿಗೆ ಉಪಯೋಗಿಸುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ ಪರಿಣಾಮವನ್ನು ಸಮಾಜ ಮತ್ತು ನಮ್ಮ ಸುತ್ತ ಮುತ್ತಲಿನ ಪರಿಸರದ ಮೇಲೆ ಬೀರುತ್ತದೆ. ಅಲ್ಲದೆ ರೈತರ ಕೃಷಿ ವೆಚ್ಚವು ಅವರ ಉತ್ಪಾದನೆಗಿಂತ ಅಧಿಕವಾಗಿ ಕೃಷಿ ಒಂದು ಲಾಭ ರಹಿತ ಉದ್ಯಮವಾಗಿ ಬೆಳೆಯುತ್ತಿದೆ. ಆದ್ದರಿಂದ ರೈತರು ತಮ್ಮ ಹೊಲಗದ್ದೆಗಳನ್ನು ಮಾರಾಟ ಮಾಡಿ ನಗರ ಮತ್ತು ಪಟ್ಟಣಗಳಿಗೆ ವಲಸೆ ಹೋಗುತ್ತಿರುವುದು ಈಗಾಗಲೇ ಹಲವು ಭಾಗಗಳಲ್ಲಿ ಪ್ರಾರಂಭವಾಗಿದೆ. ಆದ್ದರಿಂದ ಕೃಷಿ ವೆಚ್ಚ ಕಡಿಮೆ ಮಾಡಿ ಸುಸ್ಥಿರವಾದ ಪ್ರತಿಫಲ ಪಡೆಯಲು ಸಾವಯವ ಕೃಷಿ ಅತ್ಯಂತ ಸೂಕ್ತವಾದ ವಿಧಾನವಾಗಿದೆ. ಇದನ್ನು ಇನ್ನಷ್ಟು ಜನಪ್ರಿಯಗೊಳಿಸಬೇಕಾದ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲಿದೆ.

**ಸಾವಯವ ಕೃಷಿ ನಿರ್ವಹಣೆಯ ಸಮಸ್ಯೆಗಳು**

ಸಾವಯವ ಕೃಷಿ ನಿರ್ವಹಿಸುವುದು ಸುಲಭವಾದಂತಹದ್ದೇನಲ್ಲ. ಈ ವಿಧಾನವನ್ನು ಅನುಸರಿಸುವಾಗ ರೈತರು ದೃಡವಾದ ಇಚ್ಛೆ, ಶಕ್ತಿಯನ್ನು ಹೊಂದಿರಬೇಕು, ಅಲ್ಲದೆ ಆರಂಭದಲ್ಲಿ ಇದನ್ನು ನಿರ್ವಹಿಸುವುದು ಹೆಚ್ಚು ತ್ರಾಸದಾಯಕವೂ ಹೌದು, ಶ್ರಮದಾಯಕವೂ ಕೂಡ ಆಗಿರುತ್ತದೆ. ಸಾವಯವಕ್ಕೆ ರೈತರು ಒಮ್ಮೊಂದೊಮ್ಮೆಲೆ ತಮ್ಮೆಲ್ಲಾ ಜಮೀನನ್ನು ಪರಿವರ್ತಿಸದೆ, ಹಂತ ಹಂತವಾಗಿ ಪರಿವರ್ತಿಸಬೇಕು. ಆಗ ಸಾವಯವವನ್ನು ಮುಂದುವರಿಸಿಕೊಂಡು ಹೋಗುವುದು ಅತ್ಯಂತ ಸುಲಭವಾಗಿರುತ್ತದೆ. ಆದಾಗ್ಯೂ ಸಾವಯವ ಕೃಷಿಗೆ ಹಲವಾರು ರೀತಿಯ ಮೂಲಸೌಕರ್ಯಗಳು ಬೇಕಾಗುತ್ತವೆ. ಇವುಗಳನ್ನು ಸರ್ಕಾರ ರೈತರು ಗ್ರಾಹಕ ಮತ್ತು ಸಮಾಜ ಎಲ್ಲರೂ ಪರಸ್ಪರ

ಸಹಕಾರದೊಂದಿಗೆ ಕಲ್ಪಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ರೈತರು ಸಾವಯುವ ಕೃಷಿ ಅಳವಡಿಸಿಕೊಂಡಾಗ ಹಲವಾರು ಸಮಸ್ಯೆಗಳು ಉದ್ಭವಿಸುತ್ತವೆ. ಅವುಗಳೆಂದರೆ:

೧. ಮಣ್ಣಿನ ವೈಜ್ಞಾನಿಕ ನಿರ್ವಹಣೆಯ ತಾಂತ್ರಿಕ ಜ್ಞಾನದ ಕೊರತೆ.
೨. ಕೀಟಗಳ ಬಾಧೆ ಮತ್ತು ರೋಗ ನಿಯಂತ್ರಣ ವಿಧಾನಗಳ ಅನುಭವ ಇಲ್ಲದೆ ಇರುವುದು.
೩. ಆರಂಭದಲ್ಲಿ ಇಳುವರಿ ತೀವ್ರವಾಗಿ ಕಡಿಮೆಯಾಗುತ್ತದೆ.
೪. ಉತ್ತಮ ತಳಿಯ ಸುಧಾರಿತ ಬೀಜಗಳ ಕೊರತೆ.
೫. ಸಾವಯುವ ಒಳಸುರಿಗಳು(Input) ಮತ್ತು ಕೊಟ್ಟಿಗೆ ಗೊಬ್ಬರ ಸಮಸ್ಯೆ.
೬. ಜೈವಿಕಗೊಬ್ಬರ ಮತ್ತು ಔಷಧಿಗಳ ಅಲಭ್ಯತೆ.
೭. ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಇರುವುದು.
೮. ದೃಢೀಕರಣ ವ್ಯವಸ್ಥೆಯ ಕೇಂದ್ರೀಕರಣ ಮತ್ತು ಅತ್ಯಂತ ದುಬಾರಿಯಾಗಿರುವುದರಿಂದ ಚಿಕ್ಕ ಮತ್ತು ಸೀಮಾಂತ ರೈತರಿಗೆ ವೆಚ್ಚ ಭರಿಸಲು ಸಾಧ್ಯವಿಲ್ಲ.
೯. ಸರ್ಕಾರದ ನಿರ್ಲಕ್ಷ್ಯ ಮನೋಭಾವನೆ ಕಡಿಮೆ ಸಹಾಯಧನ ಮತ್ತು ಅಗತ್ಯ ಮೂಲ ಸೌಕರ್ಯ ಒದಗಿಸದೇ ಇರುವುದು.
೧೦. ಸಾವಯುವ ಕೃಷಿಯ ಮಾಹಿತಿ ಕೊರತೆ.

ಹೀಗೆ ರೈತರು ಸಾವಯುವ ಕೃಷಿಯಲ್ಲಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಮೇಲಿನ ಸಮಸ್ಯೆಗಳಲ್ಲಿ ಮುಖ್ಯವಾದಂತಹವು. ಇಳುವರಿ ಆರಂಭದಲ್ಲಿ ಬಹಳ ಕಡಿಮೆ ಇರುವುದು. ಇದನ್ನು ತುಂಬಿಕೊಡುವಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಹಾಗಾಗಿ ಹೆಚ್ಚು ರೈತರು ಸಾವಯುವ ಕೃಷಿಯ ಕಡೆ ತಿರುಗಿ ಬರಲು ಹಿಂಜರಿಯುತ್ತಿದ್ದಾರೆ. ಇನ್ನೊಂದು ರೈತರು ಸಾವಯುದಲ್ಲಿ ಉತ್ಪಾದಿಸಿದಂತಹ ಉತ್ಪನ್ನಗಳಿಗೆ ಪ್ರತ್ಯೇಕವಾದ ಮಾರುಕಟ್ಟೆ ಮತ್ತು ಬೆಲೆ ಕೂಡ ದೊರೆಯದೇ ಇರುವುದು. ಸರ್ಕಾರ ಕೇವಲ ಸಾವಯುವ ಒಳಸುರಿಗಳಿಗೆ ಸಹಾಯಧನ ನೀಡಿದರೆ ಸಾಕಾಗುವುದಿಲ್ಲ. ಸಾವಯುವ ಕೃಷಿಗೆ ಬೇಕಾದಂತಹ ಮೂಲ ಸೌಕರ್ಯಗಳನ್ನು ನಿರ್ಮಾಣ ಮಾಡಬೇಕು. ಆಗ ರೈತರು ಸಾವಯುವ ಕೃಷಿಯನ್ನು ಅನುಸರಿಸಲು ಮುಂದೆ ಬರುತ್ತಾರೆ.

**ಗ್ರಾಹಕರಿಗೆ ಸಂಬಂಧಿಸಿದ ಸಮಸ್ಯೆಗಳು**

ಸಾವಯುವ ಕೃಷಿಯಲ್ಲಿ ಕೇವಲ ರೈತರು ಮಾತ್ರ ಸಮಸ್ಯೆಗಳನ್ನು ಎದುರಿಸುತ್ತಿಲ್ಲ. ಗ್ರಾಹಕರು ಕೂಡ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸಾವಯುವದಲ್ಲಿ ರೈತ ಮತ್ತು ಗ್ರಾಹಕರ ಮಧ್ಯ ಸಂಪರ್ಕವಿರಬೇಕು. ಗ್ರಾಹಕರು ಕೂಡ ಸಾವಯುವದಲ್ಲಿ ಪಾಲ್ಗೊಳ್ಳಬೇಕು. ಆಗ ಅದರಲ್ಲಿರುವ ಸಮಸ್ಯೆಗಳನ್ನು ನಿವಾರಣೆ ಮಾಡಬಹುದು. .ಉದಾ: ಜಪಾನಿನಲ್ಲಿ ಟೆಕ್ಕಿ ಪದ್ಧತಿ (Tekke System) ಇದ್ದು ಗ್ರಾಹಕರು ಕೂಡ ರೈತರ ಜಮೀನಿನಲ್ಲಿ ಕೆಲವು ದಿನ ಕೆಲಸ ಮಾಡುವುದರ ಮೂಲಕ ರೈತರ ಕೃಷಿ ಚಟುವಟಿಕೆಗಳಿಗೆ ನೆರವಾಗುತ್ತಾರೆ. ಅಲ್ಲದೆ ಅವರ ಉತ್ಪನ್ನವನ್ನು ನೇರವಾಗಿ ಕೊಂಡುಕೊಳ್ಳುತ್ತಾರೆ. ಆಗ ಸಾವಯುವ ಕೃಷಿ ಬೆಳೆಯಲು ಸಾಧ್ಯವಾಗುತ್ತದೆ. ಗ್ರಾಹಕರಿಗೆ ಸಂಬಂಧಿಸಿದ ಕೆಲವು ಸಮಸ್ಯೆಗಳೆಂದರೆ:

- ಸಾವಯುವ ಉತ್ಪನ್ನಗಳ ಮಾಹಿತಿಯ ಕೊರತೆ.
- ಸಾವಯುವ ಉತ್ಪನ್ನಗಳಿಗೆ ಸಂಬಂಧಿಸಿದಂತೆ ತಿಳುವಳಿಕೆ ಇಲ್ಲದೆ ಇರುವುದು.
- ರಾಸಾಯನಿಕ ಕೃಷಿ ಮತ್ತು ಸಾವಯುವ ಉತ್ಪನ್ನಗಳ ಮಧ್ಯ ವ್ಯತ್ಯಾಸ ಕಲ್ಪಿಸುವುದು ಬಹಳ ಕಷ್ಟಕರವಾಗಿರುತ್ತದೆ.
- ಸಾವಯುವ ಉತ್ಪನ್ನಗಳ ಬೆಲೆಗಳು ಅಧಿಕವಾಗಿರುತ್ತವೆ.

- ಸಾವಯವ ಉತ್ಪನ್ನಗಳ ನಿರಂತರ ಪೂರೈಕೆ ಮತ್ತು ಲಭ್ಯತೆ ಇಲ್ಲದೆ ಇರುವುದು.
- ಸಾವಯವ ವಸ್ತುಗಳ ಗುಣಮಟ್ಟದ ಸಮಸ್ಯೆ.
- ಕಲಬೆರೆಕೆ ಮತ್ತು ಮಿಶ್ರಣ
- ಉತ್ತಮವಾದ ಜಾಹೀರಾತು ಮತ್ತು ಸಂಘಟಿತ ಮಾರುಕಟ್ಟೆ ಇಲ್ಲದೆ ಇರುವುದು.

ಹೀಗೆ ಸಾವಯವ ಪದಾರ್ಥಗಳ ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ರೈತರು ಮತ್ತು ಗ್ರಾಹಕರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬರುತ್ತದೆ. ಗ್ರಾಹಕರು ಆರೋಗ್ಯದ ದೃಷ್ಟಿಯಿಂದ ಅತಿ ಹೆಚ್ಚು ಬೆಲೆಗೆ ಖರೀದಿ ಮಾಡಲು ತಯಾರಿದ್ದಾರೆ. ಆದರೆ ಸಾವಯವ ಉತ್ಪನ್ನಗಳು ವರ್ಷ ಪೂರ್ತಿ ಲಭ್ಯವಾಗುತ್ತಿಲ್ಲ. ರೈತರು ಕೂಡ ಸಾವಯವ ವಿಧಾನದಲ್ಲಿ ಉತ್ಪಾದನೆ ಮಾಡಲು ಪ್ರಾರಂಭಿಸಿದ್ದಾರೆ. ಅವುಗಳನ್ನು ಹೇಗೆ ಮಾರುಕಟ್ಟೆಗೆ ಸರಬರಾಜು ಮಾಡಬೇಕು, ಅಥವಾ ನೇರವಾಗಿ ಗ್ರಾಹಕಿರಿಗೆ ಸರಬರಾಜು ಮಾಡಬೇಕೋ ಎಂಬುವಂತಹ ಮಾಹಿತಿಯ ಇರುವುದಿಲ್ಲ. ಆದ್ದರಿಂದ ಸರ್ಕಾರವು ರೈತರ ಮತ್ತು ಗ್ರಾಹಕರ ನಡುವೆ ಸಂಪರ್ಕ ಕಲ್ಪಿಸಿದರೆ ಉತ್ತಮವಾದ ಬೆಲೆ ದೊರೆಯುತ್ತದೆ. ಹಾಗೆಯೇ ಗ್ರಾಹಕರಿಗೆ ಯೋಗ್ಯ ಉತ್ಪನ್ನಗಳು ದೊರೆತು ಗೊಂದಲ ನಿವಾರಣೆಯಾಗುತ್ತದೆ. ಆದ್ದರಿಂದ ಸರ್ಕಾರ ಕೆಲವು ಯೋಗ್ಯ ಕ್ರಮಗಳನ್ನು ಕೈಗೊಂಡು ಕೃಷಿಕರು ಮತ್ತು ಗ್ರಾಹಕರ ನಡುವೆ ಉತ್ತಮವಾದ ಸಂಪರ್ಕವೇರ್ಪಡಿಸಬೇಕು ಇದಕ್ಕಾಗಿ ಕೆಲವು ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು.

**ಸಾವಯವ ಕೃಷಿ ಸುಧಾರಿಸಲು ಕೈಗೊಳ್ಳಬಹುದಾದ ಕ್ರಮಗಳು**

ಸಾವಯವ ಕೃಷಿ ಅತ್ಯಂತ ವೇಗವಾಗಿ ಬೆಳೆಯುವ ಕೃಷಿ ವಿಧಾನವಾಗಿದೆ. ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆಯೂ ಸಹ ವಿಸ್ತರಿಸುತ್ತಿದೆ. ಇಂತಹ ಸ್ಥಿತಿಯ ಲಾಭವನ್ನು ಪಡೆದುಕೊಳ್ಳಲು ಸಾವಯವ ಕೃಷಿ ಕ್ಷೇತ್ರವನ್ನು ವಿಸ್ತರಿಸಲು ಸಾಕಷ್ಟು ಪ್ರಯತ್ನವನ್ನು ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಭಾರತವನ್ನು ಒಳಗೊಂಡಂತೆ ಅನೇಕ ರಾಷ್ಟ್ರಗಳು ಕ್ರಮ ಕೈಗೊಳ್ಳುತ್ತಿವೆ, ಅಂತಹ ಕ್ರಮಗಳೆಂದರೆ:

೧. ಸರ್ಕಾರವು ಸಾವಯವ ಕೃಷಿಗೆ ಹೆಚ್ಚು ಅನುದಾನ ನೀಡಬೇಕು.
೨. ಚರ್ಮ ಉದ್ಯಮಕ್ಕೆ ಬದಲು ಪಶುಪಾಲನೆಗೆ ಇನ್ನೂ ಅಧಿಕ ನೆರವು ನೀಡಬೇಕು.
೩. ಅಧಿಕ ಇಳುವರಿ ಕೊಡುವ ದೇಶೀಯ ತಳಿಯ ಬೀಜಗಳನ್ನು ಅಭಿವೃದ್ಧಿಪಡಿಸಬೇಕು.
೪. ಸಾವಯವ ಪರಿಕರಗಳನ್ನು ಹೆಚ್ಚು ಮತ್ತು ಸಮರ್ಪಕ ಕಾಲದಲ್ಲಿ ರೈತರಿಗೆ ಸರಬರಾಜು ಮಾಡಬೇಕು.
೫. ಸಾವಯವ ಕೃಷಿಗೆ ಬೇಕಾದ ಮೂಲ ಸೌಕರ್ಯಗಳನ್ನು ನೀಡಬೇಕು.
೬. ಸಾವಯವ ಕೃಷಿಯಲ್ಲಿ ನಿರತರಾಗಿರುವ ಉತ್ತಮ ರೈತರ ಸಲಹೆಗಳನ್ನು ಇತರ ರೈತರಿಗೆ ತಲುಪಿಸುವಂತಹ ಕ್ರಮ ಕೈಗೊಳ್ಳಬೇಕು.
೭. ಸಾವಯವ ರೈತರಿಗೆ ಸ್ಪರ್ಧೆಗಳನ್ನು ತಾಲ್ಲೂಕು ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಏರ್ಪಡಿಸಬೇಕು. ಇದು ಸಾವಯವ ಪದ್ಧತಿ ಮತ್ತು ಇಳುವರಿಗೆ ಸಂಬಂಧಿಸಿದ್ದಾಗಿರಬೇಕು.
೮. ರೈತರಿಗೆ ತರಬೇತಿ, ಉಪಾನ್ಯಾಸ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಬೇಕು.
೯. ಸಾವಯವ ಪರಿಕರಗಳನ್ನು ರೈತರೆ ಸ್ವತಃ ಉತ್ಪಾದನೆ ಮಾಡಲು ಬೇಕಾದ ಮಾಹಿತಿ, ತರಬೇತಿಯನ್ನು ನೀಡಬೇಕು.
೧೦. ಸಾವಯವ ಕೃಷಿಗೆ ಸಂಬಂಧಿಸಿದಂತೆ ಪ್ರತ್ಯೇಕ ಇಲಾಖೆಯನ್ನು ಸರ್ಕಾರ ಪ್ರಾರಂಭಿಸಬೇಕು. ಹೀಗೆ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲು ಈ ಮೇಲಿನ ಕ್ರಮಗಳಲ್ಲದೆ. ಇನ್ನು ಅನೇಕ ರೀತಿಯ ಸೌಲಭ್ಯಗಳನ್ನು ಒದಗಿಸಿ, ರೈತರ ಕೃಷಿ ವೆಚ್ಚವನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಬೇಕು.

**ಸಾವಯವ ಕೃಷಿ ಮಾರುಕಟ್ಟೆ ಸುಧಾರಿಸಲು ಕೈಗೊಳ್ಳಬಹುದಾದ ಕ್ರಮಗಳು**

ಸಾವಯವ ವಸ್ತುಗಳಿಗೆ ಜಗತ್ತಿನಾದ್ಯಂತ ಬೇಡಿಕೆಯ ಪ್ರಮಾಣ ಅತ್ಯಂತ ವೇಗವಾಗಿ ವಿಸ್ತರಿಸುತ್ತಿದೆ.. ಆದ್ದರಿಂದ ಮಾರುಕಟ್ಟೆಗೆ ವಿಶೇಷವಾದ ಪ್ರಾಶಸ್ತ್ಯವನ್ನು ನೀಡಬೇಕು. ಈ ದಿಕ್ಕಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳೆಂದರೆ,

೧. ಸಾವಯವ ಉತ್ಪನ್ನಕ್ಕೆ ಪ್ರತ್ಯೇಕವಾದ ಮಾರುಕಟ್ಟೆಯನ್ನು ಜನವಸತಿಯ ಸಮೀಪದಲ್ಲಿ ಸ್ಥಾಪಿಸಬೇಕು.
೨. ಉತ್ತಮವಾದ ಸಾರಿಗೆ ಸಂಪರ್ಕ ವ್ಯವಸ್ಥೆಯೊಂದಿಗೆ ವಾಹನ ನಿಲ್ದಾಣವನ್ನು ಸಾವಯವ ಮಾರುಕಟ್ಟೆ ಹೊಂದಿರಬೇಕು.
೩. ಸಾವಯವ ಉತ್ಪನ್ನಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಅತ್ಯಂತ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.
೪. ಕಲಬೆರೆಕೆ, ಮಿಶ್ರಣ ಇತ್ಯಾದಿಗಳನ್ನು ಕಠಿಣಕ್ರಮಗಳ ಮೂಲಕ ನಿಯಂತ್ರಿಸಿ ಸಾವಯವ ಪದಾರ್ಥಗಳ ಮತ್ತು ಉತ್ಪಾದಕರ ಗೌರವವನ್ನು ಕಾಯ್ದುಕೊಳ್ಳಬೇಕು.
೫. ಸಮೂಹ ಮಾಧ್ಯಮಗಳ ಮೂಲಕ ಪರಿಣಾಮಕಾರಿ ಜಾಹೀರಾತುಗಳನ್ನು ನೀಡಿ ಅನುಭೋಗಿಗಳಿಗೆ ಸಾವಯವ ಉತ್ಪನ್ನಗಳ ಮಾಹಿತಿ ನೀಡಬೇಕು.
೬. ಸಾವಯವ ಉತ್ಪನ್ನಗಳ ಪ್ಯಾಕೇಟ್‌ಗಳ ಮೇಲೆ ಕಟ್ಟುನಿಟ್ಟಾಗಿ ಸಾವಯವ ಮುದ್ರೆಯನ್ನು ಹಾಕಬೇಕು ಇದರಿಂದ ಅನುಭೋಗಿಗಳಲ್ಲಿರುವ ಅಪನಂಬಿಕೆಯನ್ನು ಹೋಗಲಾಡಿಸಬಹುದು.
೭. ಸರ್ಕಾರ ಸಾವಯವ ಪದಾರ್ಥಗಳಿಗೆ ಹೆಚ್ಚು ಧನಸಹಾಯ ನೀಡಿ ಅವುಗಳ ಬೆಲೆಗಳು ಅನುಭೋಗಿಗಳಿಗೆ ಅನುಕೂಲಕರವಾಗುವಂತೆ ನೋಡಿಕೊಳ್ಳಬೇಕು.
೮. ಸಾವಯವ ಪದಾರ್ಥಗಳಿಗೆ ಬೇಡಿಕೆ ಹೆಚ್ಚಿಸಲು ಮತ್ತು ಮಾರುಕಟ್ಟೆಯನ್ನು ವಿಸ್ತರಿಸಲು ಸರ್ಕಾರವು ಮಧ್ಯಾಹ್ನದ ಊಟದ ಯೋಜನೆಗೆ ಬೇಕಾದ ಆಹಾರ ಧಾನ್ಯಗಳನ್ನು ಸಾವಯವದಲ್ಲಿಯೇ ಉತ್ಪಾದಿಸಿದ ಉತ್ಪನ್ನಗಳನ್ನು ಕೊಂಡುಕೊಳ್ಳಬೇಕು.
೯. ಸರ್ಕಾರ ನಡೆಸುವಂತಹ, ಹೋಟೇಲ್‌ಕ್ಯಾಂಟೀನ್, ಆಸ್ಪತ್ರೆಗಳಲ್ಲಿ ಸಾವಯವ ಪದಾರ್ಥಗಳನ್ನು ಕೊಂಡುಕೊಳ್ಳುವಂತೆ ಕ್ರಮ ತೆಗೆದುಕೊಳ್ಳಬೇಕು.
೧೦. ಮಠ, ಮಂದಿರಗಳು, ದೇವಸ್ಥಾನಗಳು, ಅನ್ನದಾಸೋಹ ಕಾರ್ಯಕ್ರಮ ನಡೆಸುತ್ತಿವೆ. ಅವುಗಳು ಕೂಡ ಸಾವಯವ ಆಹಾರೋತ್ಪನ್ನಗಳನ್ನು ಕೊಂಡುಕೊಳ್ಳಲು ಮುಂದೆ ಬರಬೇಕು.
೧೧. ಸಭೆ, ಸಮಾರಂಭ ಸಮ್ಮೇಳನ ಕಾರ್ಯಾಗಾರ, ಪ್ರದರ್ಶನ ಇತ್ಯಾದಿಗಳ ಮೂಲಕ ಸಾವಯವ ಉತ್ಪನ್ನಗಳಿಗೆ ಹೆಚ್ಚು ಪ್ರಚಾರ
೧೨. ದೃಢೀಕರಣದ ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರವು ಭರಿಸಬೇಕು.

ಹೀಗೆ ಸಾವಯವ ಕೃಷಿಯನ್ನು ವಿಸ್ತರಿಸಲು ಮತ್ತು ರೈತರನ್ನು ಸಾವಯವ ಕೃಷಿಯ ಕಡೆಗೆ ಆಕರ್ಷಿಸಲು ಸರ್ಕಾರವು ಅತ್ಯಂತ ತೃಪ್ತಿದಾಯಕ ಹಾಗೂ ರಚನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೃಷಿ ಮತ್ತು ಕೃಷಿಕರ ಸ್ಥಿತಿಗತಿಗಳು ಅತ್ಯಂತ ಶೋಚನೀಯವಾಗಿರುತ್ತವೆ. ಕೃಷಿ ಕ್ಷೇತ್ರದ ಬೆಳವಣಿಗೆ ಸಂಪೂರ್ಣವಾಗಿ ಋಣಾತ್ಮಕವಾಗಿದೆ. ರಾಸಾಯನಿಕ ಕೃಷಿಯಿಂದಾಗಿ ರೈತರ ಕೃಷಿ ವೆಚ್ಚ ನಿರಂತರವಾಗಿ ಏರುತ್ತಿದೆ. ಆದರೆ ಅವರ ಇಳುವರಿ ಮಾತ್ರ ಕಡಿಮೆಯಾಗುತ್ತಿದೆ. ಅನೇಕ ರೈತರು ತಮ್ಮ ಕೃಷಿ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದಾರೆ. ತಮ್ಮ ಬೆಳೆಗಳನ್ನು ಕ್ರಿಮಿಕೀಟಗಳಿಂದ ರಕ್ಷಿಸಲು ರಾಸಾಯನಿಕ ಕೀಟನಾಶಕಗಳನ್ನು ಸಿಂಪರಣೆ ಮಾಡುತ್ತಿದ್ದಾರೆ. ಕೀಟಗಳು ಮಾತ್ರ ಸಾಯುತ್ತಿಲ್ಲ. ಅಂತಹ ಔಷಧಿಗಳನ್ನು ಸೇವಿಸಿದ ರೈತರು ಸಾಯುತ್ತಿದ್ದಾರೆ. ಹಾಗಾಗಿ ರಾಸಾಯನಿಕ ಕೃಷಿ ಸಂಪೂರ್ಣವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಕೃಷಿಯನ್ನು ಹಾಳುಗೆಡಹಿದೆ. ಇಂತಹ ಸ್ಥಿತಿಯಿಂದ ರೈತರು ಹೊರಬರಲು ಸಾವಯವ ಕೃಷಿ ಅತ್ಯಂತ ಸೂಕ್ತವಾದ ಕೃಷಿ ಪದ್ಧತಿಯಾಗಿದೆ. ರೈತರು ಕೃಷಿಗೆ ಬೇಕಾದ ಒಳಸುರಿಗಳನ್ನು ತಾವೇ ಕ್ರೋಡೀಕರಿಸಿಕೊಳ್ಳುವುದರಿಂದ ಕೃಷಿ ವೆಚ್ಚವನ್ನು ತಗ್ಗಿಸಬಹುದು. ಅಲ್ಲದೆ ಸಾವಯವ ವಿಧಾನದಲ್ಲಿ ಉತ್ಪಾದನೆ ಸ್ಥಿರವಾಗಿರುವುದಲ್ಲದೆ ನಿರಂತರವಾಗಿ ಹೆಚ್ಚಾಗುತ್ತದೆ.

ಇಂತಹ ಕೃಷಿಯಿಂದ ಉತ್ಪಾದಿಸಿದ ವಸ್ತುಗಳು ಜನರ ಆರೋಗ್ಯಕ್ಕೆ ಉತ್ತಮವಾದವುಗಳು. ಪರಿಸರ ಸ್ನೇಹಿ ಕೂಡ ಆಗಿರುತ್ತವೆ. ಮೇಲಾಗಿ ಅಂತರ ರಾಷ್ಟ್ರೀಯ, ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾವಯವ ಪದಾರ್ಥಗಳ ಬೆಲೆಗಳು ರಾಸಾಯನಿಕಗಳಿಂದ ಉತ್ಪಾದಿಸಿದ ಪದಾರ್ಥಗಳಿಗಿಂತ ೨ ರಿಂದ ಪಟ್ಟು ಅಧಿಕವಾಗಿರುತ್ತವೆ. ಆದ್ದರಿಂದ ಸಾವಯವ ಕೃಷಿಯನ್ನು ವಿಸ್ತರಿಸಲು ಮತ್ತು ರೈತರನ್ನು ಇತ್ತ ಕಡೆ ಆಕರ್ಷಿಸಲು ಸರ್ಕಾರವು ಗಂಭೀರವಾದ ಪ್ರಯತ್ನ ಮಾಡಬೇಕು. ಇದರಿಂದ ಸಮಾಜದಲ್ಲಿ ಮುಂದೆ ಆಗುವ ಅವಘಡಗಳನ್ನು ತಡೆಯಬಹುದಾಗಿದೆ.

<u>ಆಧಾರಗಳು</u>


೧. ಕೃಷ್ಣ ಪ್ರಸಾದ್.ಜಿ. “ಸಾವಯವ ಕೃಷಿಯತ್ತ ಹತ್ತು ಹೆಜ್ಜೆಗಳು”, ಸಹಜ ಸಮೃದ್ಧ ಪ್ರಕಾಶನ, ಬೆಂಗಳೂರು(೨೦೦೪).

೨. ವಾಸುದೇವ ಅದಮೂರು, “ಸಾವಯವ ದೃಢೀಕರಣ”, ಸಹಜ ಸಮೃದ್ಧ ಪ್ರಕಾಶನ ಬೆಂಗಳೂರು(೨೦೦೮).

೩. ಡಾ. ರಾಜೇಂದ್ರ ಪ್ರಸಾದ್(೨೦೦೭), “ಕೃಷಿಯ ಆಧುನಿಕ ಪರಿಕಲ್ಪನೆ”, ಭಾರತೀಯ ಕೃಷಿ ಸಂಶೋಧನ ಸಂಸ್ಥೆ, ನವದೆಹಲಿ.

೪. ಭಟ್ಟಾಚಾರ್ಯ.ಪಿ. ಮತ್ತು ಚಕ್ರವರ್ತಿ. ಜಿ.(೨೦೦೫), “ಭಾರತ ಮತ್ತು ಇತರ ರಾಷ್ಟ್ರಗಳಲ್ಲಿ ಸಾವಯವ ಬೇಸಾಯದ ಇತ್ತೀಚಿನ ಸ್ಥಿತಿ, ‘ಇಂಡಿಯನ್‌ಜರ್ನಾಲ್‌ಆಫ್‌ಫರ್ಟಿಲೈಜರ್ಸ್(೯): ೧೧೧-೧೨೩.

೫. ಭಟ್ಟಾಚಾರ್ಯ.ಪಿ. ಮತ್ತು ಗೆಲೋಟ.ಡಿ.(೨೦೦೩), “ಸಾವಯವ ಬೇಸಾಯದ ಪ್ರಸ್ತುತ ನಿಯಂತ್ರಣ ವ್ಯವಸ್ಥೆ”, ಗೊಬ್ಬರ ವಾರ್ತೆ ೪೯ (೧೧): ೩೩-೩೮

೬. ಬ್ರೂಲ್‌ಸೀಮ. ಟಿ.ಡುಬ್ಯು. ಡಿಚ್.ಡಿ.ಡಬ್ಲ್ಯೂ, ರೀಟ್ಜಾ ಹೆಚ್.ಆರ್. ಮತ್ತು ಫೆಕ್ಸೇಸ್.ಫಿ.ಈ. (೨೦೦೩), “ಸಾವಯವ ವ್ಯವಸಾಯ ವಿಧಾನದ ಉತ್ಪಾದಕತೆ”, ಉತ್ತಮ ಬೆಳೇಗಳು (೮೭-೯೧): ೧೬-೧೭.

೭. ಮಾರ್ವಾರಹ. ಬಿ.ಸಿ. ಮತ್ತು ಜಾಟ್. ಎಸ್.ಎಲ್‌ಲ.(೨೦೦೪) “ಭಾರತದಲ್ಲಿ ಸಾವಯವ ಬೇಸಾಯದ ವ್ಯಾಪ್ತಿ ಮತ್ತು ಅಂಕಿ ಅಂಶಗಳು ”, ಗೊಬ್ಬರ ವಾರ್ತೆ ೪೯(೧೧): ೪೧.೪೮.

೮. ಚಂದ್ರಶೇಖರ್, ಹೆಚ್.ಎಂ.(೨೦೧೦), “ಭಾರತದಲ್ಲಿ ಸಾವಯವ ವ್ಯವಸಾಯದ ಬದಲಾವಣೆಯ ದೃಷ್ಯ: ಒಂದು ನೋಟ” ಅಂತರ ರಾಷ್ಟ್ರೀಯ ಎನ್.ಜೆ. ಜರ್ನಾಲ್. ಸಂಪುಟ ೫(೧) ಪುಟ ೩೪-೩೯ ಫೆಬ್ರವರಿ.

೯. ಥಾಕೂರ್ ಡಿ.ಎಸ್. ಮತ್ತು ಶರ್ಮ. ಕೆ.ಡಿ.(೨೦೦೫), ೨೧ನಕೇ ಶತಮಾನದಲ್ಲಿ ಆಹಾರ ಭದ್ರತೆಯ ಸವಾಲುಗಳನ್ನು ಎದುರಿಸುವುದು ಮತ್ತು ಸುಸ್ಥಿರ ಕೃಷಿಗಾಗಿ ಸಾವಯವ ಬೇಸಾಯ: ಒಂದು ಆರ್ಥಿಕ ವಿಶ್ಲೇಷಣೆ”, ಭಾರತೀಯ ಕೃಷಿ ಅರ್ಥಶಾಸ್ತ್ರ ಸಂಚಿಕೆ ಸಂಪುಟ ೬೦, ಸಂಖ್ಯೆ-೨, ಏಪ್ರಿಲ್‌ಜೂನ್೨೦೦೫.

೧೦. ಫೊಕಓಕೊ ಎಂ. (೧೯೮೫), “ನೈಜ ಮಾರ್ಗದ ವ್ಯವಸಾಯ: ಹಸಿರು ತತ್ವಶಾಸ್ತ್ರದ ಸಿದ್ದಾಂತ ಮತ್ತು ಆಚರಣೆ”, ಜಪಾನ ಪ್ರಕಾಶನ ಟೊಕಿಯೊ, ಜಪಾನ.

೧೧. ಅಮೇರಿಕ ಸಂಯುಕ್ತ ಸಂಸ್ಥಾನ ಕೃಷಿ ಇಲಾಖೆ (೧೯೮೦), “ಸಾವಯವ ಬೇಸಾಯದ ವರದಿ ಮತ್ತು ಶಿಪಾರಸ್ಸುಗಳು” ವಾಷಿಂಗ್ಟನ್.೧೨. ಲ್ಯಾಂಪ್ಕಿನ್.ಎಲ್.(೧೯೯೪), “ಸಾವಯವ ಬೇಸಾಯ: ಸ್ಥಿರ ಕೃಷಿಯ ಆಚರಣೆ” ಸಾವಯವ ಬೇಸಾಯದ ಅರ್ಥ ಶಾಸ್ತ್ರ: ಒಂದು ಅಂತರರಾಷ್ಟ್ರೀಯ ದೃಷ್ಟಿಕೋನ. ಸಿ.ಎ.ಬಿ.ಐ ಆಕ್ಸಪರ್ಡ್.

೧೩. ಕೋಡೆಕ್ಸ್‌ಅಲಿಮೆಂಟರಿಸ್‌ಆಯೋಗ (೧೯೯೯), “ಸಾವಯವ ಉತ್ಪಾದಿತ ಆಹಾರಗಳ ಉತ್ಪಾದನೆ ಮತ್ತು ಸಂಸ್ಕರಣೆ ಮೂಲಭೂತ ಮಾನದಂಡಗಳು”, ಐಫೋಮ್(IFORMS) ಥೋಲೆ-ಥೋಲೆ ಜರ್ಮನಿ.

೧೪. ಹಾರ್ವೆ ಲಾ ಪ್ರೈದೆ (೧೯೯೬), “ಜಾಗ್ರುತಿಕ ಹಸಿವನ್ನು ಸಾವಯವ ಕೃಷಿ ಹೋಗಲಾಡಿಸುವ ಸಾಧ್ಯತೆ ಇದೆಯೇ?”, ಅಧ್ಯಕ್ಷರು, ಕೋಪನ ಹೇಗ್‌ನ ಪತ್ರಿಕಾ ಸಮ್ಮೇಳನ-೨, ಮೇ.

೧೫. ಅಬ್ದುಲ್‌ಬಾಹ (೧೯೧೨), "ಒಂದು ದೇಶ", ಬಾಹ ಅಂತರರಾಷ್ಟ್ರೀಯ ಸಮುದಾಯ ಆನಲೈನ ನ್ಯೂಸ್‌ಲೆಟರ್, ಸಂಪುಟ.೦೮, ಜುಲೈ-ಸೆಪ್ಟಂಬರ್ ೧೯೯೬.
೧೬. ಗಾಣದಾಳು ಶ್ರೀಕಂಠ (೨೦೦೭), "ವೆಲ್ವೆಟ್‌ಬೀನ್ಸ್", ಸಹಜ ಸಮೃದ್ಧ ಹೆಬ್ಬಾಳ ಬೆಂಗಳೂರು.
೧೭. ಯುಸೆಟ್ಟಿ ಎಂ. ಮತ್ತು ವಿಲ್ಲರ್ (೨೦೦೭), "೨೦೦೭ ಪ್ರಪಂಚದಾದ್ಯಂತ ಸಾವಯವ ವ್ಯವಸಾಯ ಮುಖ್ಯ ಅಂಕಿ-ಅಂಶಗಳು ಮತ್ತು ಒಂದು ನೋಟ", ಸಾವಯವ ಕೃಷಿಯ ಪ್ರಪಂಚ. ೨೦೦೭ ಅಂಕಿ ಅಂಶಗಳು ಮತ್ತು ಹೊರ ಹೊಮ್ಮುತ್ತಿರುವ ಬೆಳವಣಿಗೆಗಳು, ವಿಲ್ಲರ ಹೆಚ್.ಯುಸಫ್. (ಇಡಿಎಸ್.) ೯ನೇ ಸಂಪಾದನೆ. ಐಪೋಟು, ಜರ್ಮನಿ ಮತ್ತು ಎಫ್.ಬಿ.ಎಲ್‌ಸ್ವಿಡ್ಜರ್ ಲ್ಯಾಂಡ್, ಪುಟ. ೯-೧೭.
೧೮. ಒರ್ಟ್ಜ ಇಸ್ಕೋಬರ್ ಎಂ.ಇ. ಮತ್ತು ಹೆಚ್.ವಿ.ಹ್ಯೂ.(೨೦೦೭), "ಸಾವಯವ ಬೇಸಾಯದಲ್ಲಿ ಪ್ರಸ್ತುತ ಬೆಳವಣಿಗೆಗಳು", ಮಣ್ಣು ವಿಜ್ಞಾನದಲ್ಲಿ ಪ್ರಸ್ತುತ ಸಂಶೋಧನ ಅಭಿವೃದ್ಧಿ-೨.
೧೯. ಡಾ|| ಸುಭಾಷ್‌ಚಂದ್‌ಮತ್ತು ಡಾ|| ಸುನೀಲ್‌ಪಬ್ಬಿ (೨೦೦೫), "ಸಾವಯವ ವ್ಯವಸಾಯ-ಒಂದು ಬೆಳೆಯುತ್ತಿರುವ ಪರಿಕಲ್ಪನೆ", ಕೃಷಿ ಸಮಿತಿ ೨೦೦೫, ಕೃಷಿ ಮಂತ್ರಾಲಯ ಭಾರತ ಸರ್ಕಾರ.
೨೦. ಡಾ|| ನಾರಯಣನ್. ಎಸ್. (೨೦೦೫), ಭಾರತದಲ್ಲಿ ಸಾವಯವ ವ್ಯವಸಾಯ: ಸಮಂಜಸತೆ, ಸಮಸ್ಯೆಗಳು ಮತ್ತು ಅಡಚಣೇಗಳು", ಪತ್ರಿಕೆ-೩೮, ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು, ಆರ್ಥಿಕ ವಿಶ್ಲೇಷಣೆ ಮತ್ತು ಸಂಶೋಧನಾ ವಿಭಾಗ ಮುಂಬೈ.
೨೧. ಅಂತರರಾಷ್ಟ್ರೀಯ ಸಾವಯವ ಕೃಷಿ ಆಂದೋಲನ ಸಂಘ (೨೦೦೮) ಅದರ ಕಾರ್ಯಕ್ರಮಗಳು.
೨೨. ಪ್ರಾಂಕ್‌ಆಫರ್ ಮನ್‌ಮತ್ತು ನೀಬರ್ಗ್ ಹೆಚ್. (೨೦೦೦), "ಯೂರೋಪಿನಲ್ಲಿ ಸಾವಯವ ಕೃಷಿ ಕ್ಷೇತ್ರದ ಆರ್ಥಿಕ ಕಾರ್ಯ ನಿರ್ವಹಣೆ", ಅರ್ಥಶಾಸ್ತ್ರ ಮತ್ತು ನೀತಿ ಸಂಪುಟ. ೫, ೨೦೦೦.
೨೩. ಸಾವಯವ ಕೃಷಿ: ಸುಸ್ಥಿರತೆ, ಮಾರುಕಟ್ಟೆ ಮತ್ತು ನೀತಿಗಳು" ಒ.ಇ.ಸಿ.ಡಿ. (OECD) ಆರ್ಥಿಕ ಅಭಿವೃದ್ಧಿ ಮತ್ತು ಸಹಕಾರಕ್ಕಾಗಿ ಸಂಘಟನೆ ಸಿ.ಬಿ.ಐ. ಪ್ರಕಾಶನ.
೨೪. ಕರ್ನಾಟಕ ಸರ್ಕಾರದ ಅಂಕಿ ಅಂಶಗಳು.
೨೫. ವೀರೇಶ್. ಜಿ.ಕೆ.(೧೯೯೮), "ಸಾವಯವ ವ್ಯವಸಾಯ: ಜೀವರಾಶಿ ಬದ್ಧತೆ ಮತ್ತು ಆರ್ಥಿಕ ಸುಸ್ಥಿರವಾದದ್ದು", ಮನುಷ್ಯ ಮತ್ತು ಅಭಿವೃದ್ಧಿ, ಪುಟ. ೧೪೨-೧೪೯.

***